

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 22 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 36 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕೆಬಿಜೆಯವರ



ಭೂಮಂತ್ರ...


ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಕಟ್ಟಡಗಳು ಏಕೆ ಶಿಥಿಲಗೊಂಡಿರುತ್ತವೆ?

■ ಪುಟ–4

ತಮಿಳುನಾಡಿಗೆ 2.5 ಟಿಎಂಸಿ ನೀರು ಹರಿಸಿ

ಕರ್ನಾಟಕಕ್ಕೆ ಸಿಡಬ್ಲ್ಯೂಎಂಎ ನಿರ್ದೇಶನ

ನವದೆಹಲಿ, ಮೇ 21– ರಾಜ್ಯದಲ್ಲಿ ಮುಂಗಾರು ಬಿರುಸಾಗುತ್ತಿದ್ದಂತೆಯೇ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ತಮಿಳುನಾಡಿಗೆ ಮೇ ತಿಂಗಳ ಭಾಗವಾಗಿ 2.5 ಟಿಎಂಸಿ ನೀರು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿದೆ.



ಮಂಗಳವಾರ ನಡೆದ ಪ್ರಾಧಿಕಾರದ ಸಭೆಯಲ್ಲಿ ತಮಿಳುನಾಡು ವಾದ ಮಂಡಿಸಿ, ಕರ್ನಾಟಕದ ನಾಲ್ಕು ಜಲಾಶಯಗಳಲ್ಲೂ ಸಾಕಷ್ಟು ನೀರಿದೆ. ಮುಖ್ಯ ಅಣೆಕಟ್ಟುಗಳಲ್ಲಿ 19.17 ಟಿಎಂಸಿ ನೀರು ಸಂಗ್ರಹವಾಗಿದ್ದು, ಕರ್ನಾಟಕದ ಅಗತ್ಯತೆಗಳಿಗೆ ಸದ್ಯಕ್ಕೆ 4 ಟಿಎಂಸಿ ನೀರು ಸಾಕು. ಹೀಗಾಗಿ ತಮಿಳುನಾಡಿಗೆ ನೀರು ಹರಿಸಲು ಕರ್ನಾಟಕಕ್ಕೆ ಯಾವುದೇ ತೊಂದರೆ ಇಲ್ಲ. ಅಲ್ಲದೇ, ಈ ವರ್ಷ ಸಾಕಷ್ಟು ಮಳೆಯಾಗುವ ಮುನ್ಸೂಚನೆ ಹವಾಮಾನ ಇಲಾಖೆಯಿಂದ ಸಿಕ್ಕಿದೆ. ಆದ್ದರಿಂದ ತಮಿಳುನಾಡಿಗೆ ತಕ್ಷಣವೇ 6 ಟಿಎಂಸಿ ನೀರು ಬಿಡಬೇಕೆಂದು ಕೋರಿತು. ● 9ನೇ ಪುಟಕ್ಕೆ

ದ್ವಿತೀಯ ಪಿಯುಸಿ ಪರೀಕ್ಷೆ–2 ಫಲಿತಾಂಶ

ಶೇ.35.25ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ

ಬೆಂಗಳೂರು, ಮೇ 21– ಕರ್ನಾಟಕ ಪದವಿ ಪೂರ್ವ ಶಿಕ್ಷಣ ಇಲಾಖೆಯು ದ್ವಿತೀಯ ಪಿಯುಸಿ ಪೂರಕ ಫಲಿತಾಂಶ 2024 ಅನ್ನು ಇಂದು ಪ್ರಕಟಿಸಿದೆ. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು Karresults, karresults.nic.inನ ಅಧಿಕೃತ ವೆಬ್‌ಸೈಟ್‌ನಲ್ಲಿ ತಮ್ಮ ಅಂಕಗಳನ್ನು ಪರಿಶೀಲಿಸಬಹುದು. ಆನ್‌ಲೈನ್‌ನಲ್ಲಿ ತಮ್ಮ ಫಲಿತಾಂಶಗಳನ್ನು ಪರಿಶೀಲಿಸಲು, ವಿದ್ಯಾರ್ಥಿಗಳು ತಮ್ಮ ನೋಂದಣಿ ● 9ನೇ ಪುಟಕ್ಕೆ



DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ. (T&C)
ಒಂದು ಗ್ರಾಂ ಚಿನ್ನಕ್ಕೆ 7000
8884171888

ಕಲುಷಿತ ನೀರು ಸೇವನೆ: ಕೆ.ಸಾಲುಂಡಿಯಲ್ಲಿ

ಓರ್ವ ಸಾವು, 76 ಮಂದಿ ಅಸ್ವಸ್ಥ

● ಗ್ರಾಮದಲ್ಲಿ ಆತಂಕದ ವಾತಾವರಣ ● ವಾಂತಿ–ಭೇದಿಯಿಂದ ಗ್ರಾಮಸ್ಥರು ತತ್ತರ ● ಮೂವರ ಸ್ಥಿತಿ ಗಂಭೀರ ● ಗ್ರಾಮದಲ್ಲಿ ವೈದ್ಯರ ತಂಡ ಬೀಡು ● ಶಾಸಕ ಜಿ.ಟಿ.ದೇವೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡರಿಂದ ಪರಿಶೀಲನೆ ● ಅಧಿಕಾರಿಗಳ ಭೇಟಿ



ಕನಕರಾಜ್

ಮೈಸೂರು, ಮೇ 21(ಎಂಟಿವೈ)– ಕಲುಷಿತ ನೀರು ಸೇವಿಸಿ ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಓರ್ವ ಯುವಕ ಮೃತಪಟ್ಟು, 76ಕ್ಕೂ ಹೆಚ್ಚು ಮಂದಿ ಗ್ರಾಮಸ್ಥರು ಅಸ್ವಸ್ಥರಾಗಿರುವ ಘಟನೆ ಜರುಗಿದ್ದು, ವಾಂತಿ ಭೇದಿಯಿಂದ ನರಳಾಡುತ್ತಿರುವ ಗ್ರಾಮಸ್ಥರಿಗೆ ಸೂಕ್ತ ಚಿಕಿತ್ಸೆ ನೀಡಲು ಗ್ರಾಮದಲ್ಲಿಯೇ ವೈದ್ಯರ ತಂಡವೊಂದು ಬೀಡು ಬಿಟ್ಟಿದೆ.

ಕೆಸಾಲುಂಡಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಕೊಳವೆ ಬಾವಿಗೆ ಒಳಚರಂಡಿ ನೀರು ಸೇರಿರುವ ಶಂಕೆ ವ್ಯಕ್ತವಾಗಿದ್ದು, ಕಲುಷಿತ ನೀರು ಸೇವಿಸಿ ವಾಂತಿ ಭೇದಿಯಿಂದ ಅಸ್ವಸ್ಥರಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗ್ರಾಮದ ನಿವಾಸಿ ಜವರೇಗೌಡ ಎಂಬುವರ ಮಗ ಕನಕರಾಜ್(23) ಚಿಕಿತ್ಸೆ ಫಲಕಾರಿಯಾಗದೆ ಮುಂಜಾನೆ ಮೃತಪಟ್ಟಿದ್ದಾರೆ. ಶಿವಮ್ಮ, ಸಣ್ಣದೇಗೌಡ ಸೇರಿದಂತೆ 10ಕ್ಕೂ ಹೆಚ್ಚು ಮಂದಿ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರಲ್ಲಿ ಮೂವರ ಸ್ಥಿತಿ ಗಂಭೀರವಾಗಿದ್ದು, ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ● ಪೂರ್ಣ ವರದಿ ಪುಟ 3

ಕೈಲಾಸ ಗಣಾರಾಧನೆ ಆಹ್ವಾನ



ಶ್ರೀ ಹೆಚ್.ಎಂ.ದಕ್ಷಾರಿರವರು
ವಿದ್ಯುತ್ ಗುತ್ತಿಗೆದಾರರು, ಮಾಲೀಕರು, ಪಾರ್ವತಿ ಎಲೆಕ್ಟ್ರಿಕಲ್ಸ್
ಶಿವೈಕ್ಯ: 11–05–2024

ಚಾಮರಾಜನಗರ ತಾಲ್ಲೂಕು ವೆಂಕಟಯ್ಯನಛತ್ರ ಗ್ರಾಮದ
ಲಿಂಗೈಕ್ಯ ಶ್ರೀ ದಕ್ಷಾರಿಯರವರ ಧರ್ಮಪತ್ನಿ ಶ್ರೀಮತಿ ಯೋಗೇಶ್ವರಿರವರು
ಮಾಡುವ ಶರಣು ಶರಣಾರ್ಥಿಗಳು

ನನ್ನ ಪತಿಯವರು ದಿನಾಂಕ: 11–05–2024 ರಂದು ಶನಿವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 22–05–2024 ಬುಧವಾರ ಮಧ್ಯಾಹ್ನ 10.00 ಗಂಟೆಗೆ ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠಾಧ್ಯಕ್ಷರಾದ ಶ್ರೀ ಮ.ನಿ.ಪ್ರ.ಸ್ವ ಶ್ರೀ ಮಹಾಂತಸ್ವಾಮಿಗಳವರ ದಿವ್ಯ ಪಾದಪೂಜೆ ಮತ್ತು ಮಧ್ಯಾಹ್ನ 12–00 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ಸ್ವಗೃಹ ವೆಂಕಟಯ್ಯನ ಛತ್ರ ತೋಟದ ಮನೆಯಲ್ಲಿ (ಬಿಸಲವಾಡಿ ಮುಖ್ಯರಸ್ತೆ) ಏರ್ಪಡಿಸಿರುವುದರಿಂದ ತಾವುಗಳು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಹರಗುರುಚರ ಮೂರ್ತಿಗಳ ದರ್ಶನಾಶೀರ್ವಾದ ಪಡೆದು ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು: ಶಿವೈಕ್ಯರ ಧರ್ಮಪತ್ನಿ ಶ್ರೀಮತಿ ಯೋಗೇಶ್ವರಿ ಮತ್ತು ಮಕ್ಕಳು ಹಾಗೂ ಪಟೇಲ್ ಮಲ್ಲಿಕಾರ್ಜುನಯ್ಯನವರ ಕುಟುಂಬವರ್ಗದವರು. ಬಂಧುಮಿತ್ರರು ಹಾಗೂ ಗ್ರಾಮಸ್ಥರು



ಮೈಸೂರು ಮಿತ್ರ

ಬುಧವಾರ 22 ಮೇ 2024

ವಿಧಾನಪರಿಷತ್ ಚುನಾವಣೆ: ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಮತಯಾಚನೆ



ವಿಧಾನಪರಿಷತ್ ಚುನಾವಣೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಅವರು ಮಹಾರಾಣಿ ಕಾಲೇಜು, ಮಹಾರಾಜ, ಯುವರಾಜ, ಡಿ.ಬನುಮಯ್ಯ, ವಿದ್ಯಾವರ್ಧಕ, ಬಾಸುದೇವ್ ಸೋಮಾನಿ ಕಾಲೇಜು ಹಾಗೂ ಇನ್ನಿತರ ಕಾಲೇಜುಗಳಿಗೆ ಭೇಟಿ ನೀಡಿ, ಅಧ್ಯಾಪಕರು ಹಾಗೂ ಶಿಕ್ಷಕರಲ್ಲಿ ಮತ ಯಾಚಿಸಿದರು. ಈ ವೇಳೆ ಶಿಕ್ಷಕರಾದ ಕೃಷ್ಣಕುಮಾರ್, ಬಾಲಸುಬ್ರಮಣ್ಯ, ಪ್ರದೀಪ್ ಕುಮಾರ್, ನಟರಾಜ್, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷೆ ಹೇಮಾ ನಂದೀಶ್ ಇನ್ನಿತರರಿದ್ದರು.

ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಎಂಡೋಸ್ಕೋಪಿ ಕಾರ್ಯಾಗಾರ



ಮೈಸೂರು, ಮೇ 21– ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಅಖಿಲ ಭಾರತೀಯ ಶಸ್ತ್ರಚಿಕಿತ್ಸಕರ ಸಂಘದ ಮಾಜಿ ಅಧ್ಯಕ್ಷರೂ ಹಾಗೂ ಲ್ಯಾಪ್ರೋಸ್ಕೋಪಿ ಮತ್ತು ಎಂಡೋಸ್ಕೋಪಿ ತಜ್ಞ ಡಾ. ಜಿ. ಸಿದ್ದೇಶ್ ಅವರ ನೇತೃತ್ವದಲ್ಲಿ ಎಂಡೋಸ್ಕೋಪಿ ಕಾರ್ಯಾಗಾರ ನಡೆಯಿತು.

ಬಂದಿದ್ದ ಹಲವಾರು ವೈದ್ಯರಿಗೆ ಡೆಮೋ ಮುಖಾಂತರ ರೋಗ ಪತ್ತೆ ಮಾಡುವ ತರಬೇತಿ ನೀಡಲಾಯಿತು. ಇದನ್ನು ಕಲಿತ ವೈದ್ಯರು ಅವರ ಸ್ವಂತ ಜಾಗದಲ್ಲಿ ಇದನ್ನು ಅನುಸರಿಸಿ ರೋಗಿಗಳಿಗೆ ರೋಗ ಪತ್ತೆ ಮಾಡಿ ಅದಕ್ಕೆ ಸಮರ್ಪಕ ಚಿಕಿತ್ಸೆ ನೀಡುವಲ್ಲಿ ಸಹಕಾರಿಯಾಗುತ್ತದೆ. ಡಾ.ಜಿ.ಸಿದ್ದೇಶ್ ಅವರು ನುರಿತ ಎಂಡೋಸ್ಕೋಪಿ ತಜ್ಞರು ಹಾಗೂ ಮೈಸೂರಿನಲ್ಲಿ ಮೊದಲ ಬಾರಿ ಎಂಡೋಸ್ಕೋಪಿ ಪರಿಚಯಿಸಿ ಯಶಸ್ವಿಯಾದವರು. ಇಂತಹ ಪರಿಣತರಿಂದ ತರಬೇತಿ ಪಡೆದ ಬಹಳಷ್ಟು ವೈದ್ಯರು ಈಗ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ತರಹದ ಕಾರ್ಯಾಗಾರಗಳನ್ನು ಸಿಗ್ಮಾ ಆಸ್ಪತ್ರೆಯಲ್ಲಿ ನಡೆಸಲು ಮುಂದಾಗಿದ್ದು, ಇದಕ್ಕೆ ಸಹಕಾರಿಯಾಗಿ ಸಿಗ್ಮಾ ಆಸ್ಪತ್ರೆ ಆಡಳಿತ ಮಂಡಳಿ ಸಹಕಾರವಿದೆ.

ತರಬೇತಿ ಪಡೆದ ವೈದ್ಯರಿಗೆ ಅಖಿಲ ಭಾರತ ಶಸ್ತ್ರಚಿಕಿತ್ಸಕರ ಸಂಘದಿಂದ ಪ್ರಮಾಣ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಡಾ.ರಘುವೀರ್, ಡಾ.ಮನೋಪ್, ಡಾ.ಮನೋಜ್‌ಕುಮಾರ್ ಮತ್ತು ಆಸ್ಪತ್ರೆ ಸಿಬ್ಬಂದಿ ಹಾಜರಿದ್ದರು.

ಜಿಲ್ಲಾಸ್ಪತ್ರೆಯಲ್ಲಿ ರಕ್ತದಾನ ಶಿಬಿರ



ಮೈಸೂರು, ಮೇ 21(ಆರ್‌ಕೆ)– ವಿಶ್ವ ಶುಶ್ರೂಷಕರ ದಿನಾಚರಣೆ ಅಂಗವಾಗಿ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ಇಂದು ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

'ರಕ್ತದಾನ ಶ್ರೇಷ್ಠದಾನ: ರಕ್ತದಾನ ಮಾಡಿ ಜೀವ ಉಳಿಸಿ' ಧ್ಯೇಯವಾಕ್ಯದೊಂದಿಗೆ ಆಯೋಜಿಸಿದ್ದ ಶಿಬಿರದಲ್ಲಿ 64 ಮಂದಿ ಯುವಕರು ಪಾಲ್ಗೊಂಡು ರಕ್ತದಾನ ಮಾಡಿದರು. ರಕ್ತನಿಧಿ ಅಧಿಕಾರಿಗಳಾದ ಡಾ.ಮಂಜುನಾಥ್, ಡಾ. ವೀರೇಂದ್ರ ಸಾಗರ್, ಶುಶ್ರೂಷಾಧಿಕಾರಿ ಎಂ. ಮಂಜುನಾಥ, ಲ್ಯಾಬ್ ಟೆಕ್ನಿಕಲ್ ಆಫೀಸರ್ ಶಶಿಕಲಾ ಅವರು ರಕ್ತ ಸಂಗ್ರಹಣೆ ಮಾಡಿದರು. ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಟಿ.ಮಂಜುನಾಥ, ಜಿಲ್ಲಾಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ಹರಿಪ್ರಸಾದ್, ಪ್ರಭಾರ ಶುಶ್ರೂಷಕ ಅಧೀಕ್ಷಕಿ ಕೆ.ಸೆಲೀನಾ, ವೈದ್ಯರು, ನರ್ಸ್‌ಗಳು ಹಾಗೂ ಸಿಬ್ಬಂದಿ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಬಾಲಕಿ ನಾಪತ್ತೆ



ಮೈಸೂರು, ಮೇ 21– ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಾಲಕಿಯೋರ್ವಳು ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ರಾಘವೇಂದ್ರನಗರದಿಂದ ಸುಜಾತ (15) ಏ.28ರಂದು ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ದೂರು ದಾಖಲಾಗಿದೆ. ಈಕೆ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418308, ಮೊ. 9480 802233 ಸಂಪರ್ಕಿಸಲು ಕೋರಲಾಗಿದೆ.

ವೀರಪ್ಪನ್ ಜೊತೆ ಸೆಣಸಾಡಿದ್ದ ನಿವೃತ್ತ ಡಿವೈಎಸ್ಪಿ ಕೃಷ್ಣೇ ಅರಸ್ ಇನ್ನಿಲ್ಲ



ಮೈಸೂರು, ಮೇ 21– ನರಹಂತಕ ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ನಿವೃತ್ತ ಡಿವೈಎಸ್ಪಿ ಡಿ.ಕೃಷ್ಣೇ ಅರಸ್ ಅವರು ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು.

ಮೈಸೂರಿನ ವಿವಿಧ ಠಾಣೆಗಳಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸಿದ್ದ ಅವರು, ವೀರಪ್ಪನ್ ಸೆರೆಗೆ ವಿಶೇಷ ಪಡೆ ರಚನೆಗೂ ಮುನ್ನ ಮೈಸೂರು ಜಿಲ್ಲಾ ಪೊಲೀಸರು ವೀರಪ್ಪನ್ ವಿರುದ್ಧ ನಡೆಸುತ್ತಿದ್ದ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದರು.

1990ರ ಏಪ್ರಿಲ್ 9ರಂದು ಹೊಗೇನಕಲ್‌ನಿಂದ ಮಹದೇಶ್ವರಬೆಟ್ಟಕ್ಕೆ ವಾಪಸ್ಸಾಗುತ್ತಿದ್ದ ವೇಳೆ ಇವರ ಜೀಪ್ ಮೇಲೆ ವೀರಪ್ಪನ್ ತಂಡ ದಾಳಿ ನಡೆಸಿತ್ತು. ಆ ದಾಳಿಯಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ದಿನೇಶ್, ರಾಮಲಿಂಗು, ಜಗನ್ನಾಥ್ ಮತ್ತು ಕಾನ್ಸ್‌ಟೇಬಲ್ ಶಂಕರ್‌ರಾವ್ ಸೇರಿದಂತೆ ನಾಲ್ವರು ಮೃತಪಟ್ಟಿದ್ದರು. ಈ ಸಂದರ್ಭದಲ್ಲಿ ಕೃಷ್ಣೇ ಅರಸ್ ಮತ್ತು ಇವರೊಂದಿಗಿದ್ದ ಮತ್ತೋರ್ವ ಸಬ್ ಇನ್ಸ್‌ಪೆಕ್ಟರ್ ಚಂದ್ರಪ್ಪ ಅವರುಗಳು ಪ್ರತಿದಾಳಿ ನಡೆಸಿದ ವೇಳೆ ವೀರಪ್ಪನ್ ತಂಡ ಸ್ಥಳದಿಂದ ಪರಾರಿಯಾಗಿತ್ತು. ಈ ದಾಳಿಯಲ್ಲಿ ಕೃಷ್ಣೇ ಅರಸ್ ಮತ್ತು ಚಂದ್ರಪ್ಪ ಅವರೂ ಕೂಡ ಗಾಯಗೊಂಡಿದ್ದರಾದರೂ ವೀರಪ್ಪನ್ ದಾಳಿಯಲ್ಲಿ ಮೃತಪಟ್ಟಿದ್ದ ನಾಲ್ವರ ದೇಹಗಳು ಹಾಗೂ ಶಸ್ತ್ರಾಸ್ತ್ರಗಳನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದರು. ಈ ಕಾರ್ಯಕ್ಕಾಗಿ ಇವರಿಗೆ ಮುಖ್ಯಮಂತ್ರಿ ಗಳ ಪದಕವೂ ಲಭಿಸಿತ್ತು ಬೆಂಗಳೂರಿನ ಕೆಂಗೇರಿ ರುದ್ರಭೂಮಿಯಲ್ಲಿ ಬುಧವಾರ ಬೆಳಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ನಿಧನ



ಜನಾಬ್ ಗುಲಾಮ್ ಅಹಮದ್

ಮೈಸೂರು, ಮೇ 21–ಮೈಸೂರಿನ ತಿಲಕ್‌ನಗರ ನಿವಾಸಿ ಹಾಗೂ ಬಲ್ಬ್ ಬ್ರಾಂಡ್ ಅಗರಬತ್ತೀಸ್ ಮಾಲೀಕರಾದ ಜನಾಬ್ ಗುಲಾಮ್ ಅಹಮದ್ (90) ಸೋಮವಾರ ನಿಧನರಾದರು. ಅಂತ್ಯಕ್ರಿಯೆ ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.5ರಲ್ಲಿ ಮಂಗಳವಾರ (ಮೇ 21) ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಶಾಸಕ ತನ್ವೀರ್ ಸೇಠ್, ಡಿಸಿಸಿ ಸದಸ್ಯ ಮಜೀದ್ ಅಹಮದ್, ಡಿಸಿಸಿ ಅಲ್ಪಸಂಖ್ಯಾತರ ವಿಭಾಗದ ಮಾಜಿ ವಕ್ತಾರ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಜನಾಬ್ ಗುಲಾಮ್ ಅಹಮದ್ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಶಿಕ್ಷಕರಿಗೆ 'ಜೀವನದಿ ಕಾವೇರಿ' ಪ್ರಶಸ್ತಿ ಪ್ರದಾನ

ಶಿಕ್ಷಣ, ಆರೋಗ್ಯ ಕ್ಷೇತ್ರವನ್ನು ರಾಷ್ಟ್ರೀಕರಣಗೊಳಿಸಬೇಕು: ಸಾಹಿತಿ ಬನ್ನೂರು ರಾಜು ಅಭಿಮತ

ಮೈಸೂರು,ಮೇ 21(ಎಂಟಿವೈ)– ಖಾಸಗಿ ಸಂಸ್ಥೆಗಳ ಹಿಡಿತದಲ್ಲಿರುವ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನು ರಾಷ್ಟ್ರೀಕರಣಗೊಳಿಸಿ, ಎಲ್ಲರಿಗೂ ಸುಲಭವಾಗಿ ಸೇವೆ ಸಿಗುವಂತೆ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರಿನ ಅಗ್ರಹಾರದಲ್ಲಿರುವ ಅಕ್ಕನ ಬಳಗ ಶಾಲಾ ಆವರಣದಲ್ಲಿ ಕಾವೇರಿ ಬಳಗ ಹಾಗೂ ಹಿರಣ್ಮಯಿ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 'ಜೀವನದಿ ಕಾವೇರಿ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಎಲ್ಲರಿಗೂ ಶಿಕ್ಷಣ ಮತ್ತು ಆರೋಗ್ಯ ಸೇವೆ ತಾರತಮ್ಯವಿಲ್ಲದೆ ಒದಗಿಸಬೇಕಾಗಿದೆ. ಈ ಎರಡೂ ಸೇವೆ ಸಮಾನಾಂತರವಾಗಿ ಸಿಕ್ಕರೆ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಸಾಧಿಸಬಹುದಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಲ್ಲಿನ ಜನರಿಗೆ ಆರೋಗ್ಯ ಮತ್ತು ಶಿಕ್ಷಣ ಸೇವೆಯನ್ನು ಸಮಾನಾಂತರವಾಗಿ ಕಲ್ಪಿಸುವುದನ್ನು ಗಮನಿಸಬಹುದು. ನಮ್ಮ ದೇಶದಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರ ಖಾಸಗಿ ಸಂಸ್ಥೆ ಹಾಗೂ ಬಂಡವಾಳಶಾಹಿಗಳ ಹಿಡಿತದಲ್ಲಿ ಸಿಲುಕಿದೆ. ಆ ಕಾರಣದಿಂದ ಈ ಎರಡೂ ಪ್ರಮುಖ ಕ್ಷೇತ್ರಗಳು ವ್ಯಾಪಾರೀಕರಣ ಹಾಗೂ ಲಾಭ ಗಳಿಸುವ ಕ್ಷೇತ್ರವಾಗಿ ಮಾರ್ಪಟ್ಟಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣ ಸೇವೆ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಖಾಸಗಿ ಸಂಸ್ಥೆಗಳ ಹಿಡಿತದ ಹಾಗೂ ಪ್ರಭಾವದಿಂದಾಗಿ ಇಂದು ಸರ್ಕಾರಿ ಶಾಲೆಗಳು ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದೆಡೆ ಸರ್ಕಾರಿ ಶಾಲೆಗಳ ರಕ್ಷಣೆ ಮಾಡಬೇಕಾಗಿದ್ದರೆ, ಮತ್ತೊಂದೆಡೆ ಎಲ್ಲರಿಗೂ ಶಿಕ್ಷಣ, ಆರೋಗ್ಯ ಸೇವೆ ಒದಗಿಸಬೇಕಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನು ರಾಷ್ಟ್ರೀಕರಣಗೊಳಿಸಬೇಕಾಗಿದೆ ಎಂದರು.



ಮೈಸೂರಿನ ಅಕ್ಕನ ಬಳಗ ಶಾಲಾ ಆವರಣದಲ್ಲಿ ಕಾವೇರಿ ಬಳಗ ಹಾಗೂ ಹಿರಣ್ಮಯಿ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ವಿವಿಧ ಶಾಲಾ ಶಿಕ್ಷಕರಿಗೆ 'ಜೀವನದಿ ಕಾವೇರಿ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ಆಲನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಸ್.ಎನ್.ಜಾನಕಿ, ಹುಣಸೂರಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಂ.ಪಿ.ಮಂಜುಳಾ, ಪಿರಿಯಾಪಟ್ಟಣದ ಅರೇನಹಳ್ಳಿ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಕೆ.ಪರ್ವೀನ್ ತಾಜ್, ಮೈಸೂರು ತಾಲೂಕಿನ ಬೀರೇಗೌಡನಹುಂಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಜಿ.ರತ್ನ, ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಂ.ಟಿ.ಅಕ್ಕಮ್ಮ, ಮೈಸೂರಿನ ಯಾದವಗಿರಿಯ ಭಾರತೀ ಸ್ತ್ರೀ ಸಮಾಜದ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಎಂ.ರಾಣಿ, ಟಿ.ನರಸೀಪುರ ತಾಲೂಕಿನ ವ್ಯಾಸರಾಜಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದೈಹಿಕ ಶಿಕ್ಷಣ ಶಿಕ್ಷಕಿ ಟಿ.ಎಸ್.ಮೈಥಿಲಿ, ಸೋಮವಾರಪೇಟೆ ತಾಲೂಕಿನ ಕಾಜೂರು ಮುಖ್ಯ ಶಿಕ್ಷಕಿ ಎಂ.ಟಿ. ಸರಳಕುಮಾರಿ ಅವರಿಗೆ ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಕೊಡಗಿನ ಶ್ರೀಮತಿ ಗೌರು ಪೊನ್ನವ್ವ ನಂಬಿಯಪಂಡ ಅವರ ಸ್ಮರಣಾರ್ಥ 'ಜೀವನದಿ ಕಾವೇರಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಇದೇ ವೇಳೆ ಅಂತಾರಾಷ್ಟ್ರೀಯ ಖ್ಯಾತಿಯ ಶಿಲ್ಪ ಕಲಾವಿದ ಎ. ಕಿರಣ್ ಸುಬ್ಬಯ್ಯ ಅವರಿಗೆ ಕಾವೇರಿ ಹೆಸರಿನಲ್ಲಿ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> “ಸರ್ಕಾರಿ ಪ್ರಾಥಮಿಕ ಶಾಲೆಗಳ ಶಿಕ್ಷಕರನ್ನು ಸಮಾಜ ಸದಾ ಸ್ಮರಿಸಬೇಕು. ಉನ್ನತ ಶಿಕ್ಷಣ ವ್ಯಾಸಂಗ ಮಾಡುವವರಿಗೆ ಪಾಠ ಮಾಡುವುದು ಸುಲಭ. ಆದರೆ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವುದು ಸುಲಭವಲ್ಲ. ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಬಹಳ ತಾಳ್ಮೆ, ಸಹನೆ, ತುಂಬಾ ಶ್ರಮ ಇರಬೇಕಾಗುತ್ತದೆ. ಶಿಕ್ಷಕರು ಅವರಿಗೆ ಅಕ್ಷರ ಅಭ್ಯಾಸ ಮಾಡಿಸಿ ಖಾಲಿ ಮಡಕೆಗಳಂತಿದ್ದ ಅವರ ತಲೆಯಲ್ಲಿ ಅಕ್ಷರ ಜ್ಞಾನಾಮೃತವನ್ನು ತುಂಬಿ ಅವರನ್ನು ಸುಶಿಕ್ಷಿತರನ್ನಾಗಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲಾ ಶಿಕ್ಷಕರು ಸ್ಮರಣೀಯರು. –ಬನ್ನೂರು ರಾಜು

ಕಾರ್ಯಕ್ರಮದಲ್ಲಿ ನೃತ್ಯ ಕಲಾವಿದೆ ಡಾ.ತುಳಸಿ ರಾಮಚಂದ್ರ, ವಿಶ್ರಾಂತ ಶಿಕ್ಷಕ ಎ. ಸಂಗಪ್ಪ ಹಾಗೂ ಕಲಾವಿದೆ ಡಾ.ಜಮುನಾರಾಣಿ ಮಿರ್ಲೆ ಮಾತನಾಡಿದರು. ಕಾವೇರಿ ಬಳಗದ ಅಧ್ಯಕ್ಷೆ ಹಾಗೂ ನಿವೃತ್ತ ಶಿಕ್ಷಕಿ ಎನ್.ಕೆ.ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ.ಮುರಳೀಧರ್, ಚಿತ್ರಕಲಾ ಶಿಕ್ಷಕ ಮನೋಹರ್, ಮುಕ್ತಕ ಕವಿ ಎಂ.ಮುತ್ತುಸ್ವಾಮಿ, ಸಮಾಜ ಸೇವಕಿ ಮಾಲಿನಿ ಆರ್.ಪಾಲಾಕ್ಷ, ಶಿಕ್ಷಕಿ ಅನುಪಮಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜೂ.11ರಿಂದ ಅಂತರರಾಷ್ಟ್ರೀಯ ಯೋಗ ಶಿಕ್ಷಕರ ತರಬೇತಿ ಕೋರ್ಸ್ ಆರಂಭ

ಮೈಸೂರು, ಮೇ 21(ಜಿಎ)–ಮೈಸೂರಿನ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಜೂನ್ 11ರಿಂದ ಅಂತರರಾಷ್ಟ್ರೀಯ ಯೋಗ ಶಿಕ್ಷಕರ ತರಬೇತಿ ಕೋರ್ಸ್ ಆರಂಭವಾಗಲಿದೆ ಎಂದು ವಿದ್ಯಾಲಯದ ಚೇರ್ಮನ್ ಶಿವಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತರಬೇತಿಯು ಮೂರು ತಿಂಗಳ ಅವಧಿಯದ್ದಾಗಿದೆ. ಪರಿಣತ ತಜ್ಞರಿಂದ ಶನಿವಾರ ಸಂಜೆ ಮತ್ತು ಭಾನುವಾರ ಬೆಳಿಗ್ಗೆ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ತರಗತಿಗಳು ನಡೆಯಲಿವೆ. ತರಬೇತಿ ಪೂರೈಸಿದವರಿಗೆ ದೇಶ, ವಿದೇಶದಲ್ಲಿ ಉದ್ಯೋಗಾವಕಾಶ ದೊರೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಆಸಕ್ತರು ಮೊ.ಸಂ. 90355 06790 ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಯೋಗ ಶಿಕ್ಷಕರಾದ ಟಿ.ಜಲೇಂದ್ರ ಕುಮಾರ್, ತಿರುಮಲೆ ಯೋಗಪ್ರಕಾಶ್, ಸುಂದರ್‌ರಾಜ್, ರಂಗ ನಿರ್ದೇಶಕ ಅರಸೀಕೆರೆ ಯೋಗಾನಂದ, ಮನೋತರಬೇತುದಾರ ಸುಧೀರ್ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಉತ್ತಮ ಶ್ರೇಣಿಯಲ್ಲಿ ಟುವಿಷ್ ತೇರ್ಗಡೆ



ಮೈಸೂರು, ಮೇ 21– ಮೈಸೂರಿನ ಅಮೃತ ವಿದ್ಯಾಲಯಂ ಶಾಲೆ ವಿದ್ಯಾರ್ಥಿ ಟುವಿಷ್ ಸಿ.ಆರ್. ಸಿಬಿಎಸ್‌ಇ ಬೋರ್ಡ್ ಪರೀಕ್ಷೆಯ 10ನೇ ತರಗತಿಯಲ್ಲಿ ಶೇ.90 ಅಂಕಗಳನ್ನು ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ವಿಜಯನಗರ 4ನೇ ಹಂತದ ನಿವಾಸಿ ಮತ್ತು ಜೆ.ಕೆ ಟೈರ್ಸ್ ಉದ್ಯೋಗಿ ಸಿ.ಬಿ ರಾಘವೇಂದ್ರ ಹಾಗೂ ಸದ್ವಿವೇಕ ಶಾಲೆಯ ಶಿಕ್ಷಕಿ ಸಿ. ವಾಣಿ ರಾಘವೇಂದ್ರ ಅವರ ಪುತ್ರ. ಇವರು ಮೂಲತಃ ಕೊಡಗಿನ ಕುಟ್ಟದವರಾಗಿದ್ದು ಚಮ್ಮಣಮಡ ಕುಟುಂಬಕ್ಕೆ ಸೇರಿದವರು.

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರಿನ ಅಮೃತ ವಿಶ್ವವಿದ್ಯಾಪೀಠ ಆಯೋಜಿಸಿದ್ದ 'ಸದ್ಗಮಯ' ರಾಜ್ಯಮಟ್ಟದ ಫೆಸ್ಟ್‌ನಲ್ಲಿ ಮಹಾಜನ ಕಾಲೇಜಿನ ಪ್ರತಿಭಾ ವೇದಿಕೆಯ ಟ್ಯಾಲೆಂಟ್ ಫೋರಂ ವಿದ್ಯಾರ್ಥಿಗಳು ಭಾಗವಹಿಸಿದ್ದು, ಬೆಸ್ಟ್ ಬಿಡ್ಡರ್ಸ್ ಸ್ಪರ್ಧೆಯಲ್ಲಿ ಅರ್ಮಾನ್, ಭುವನೇಶ್ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ಸೋಲೋ ಡಾನ್ಸ್‌ನಲ್ಲಿ ಪಿ.ಪ್ರಜ್ವಲ್ (ಪ್ರಥಮ), ಎಕ್ಸ್‌ಪ್ಲೋರ ಸ್ಪರ್ಧೆಯಲ್ಲಿ ಅಭಯ್, ತಂಡ (ಪ್ರಥಮ) ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.


ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ ಜನರ ಬದುಕಲ್ಲಿ ನೆಮ್ಮದಿ

ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಕೆಪಿಸಿಸಿ ಉಪಾಧ್ಯಕ್ಷೆ ಅಕ್ಕಯ್ಯ ಪದ್ಮಶಾಲಿ ಅಭಿಮತ

ಮೈಸೂರು, ಮೇ21(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಜನರು ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದು ಕೆಪಿಸಿಸಿ ಉಪಾಧ್ಯಕ್ಷರೂ ಆದ ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕಯ್ಯ ಪದ್ಮಶಾಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ದಿವಂಗತ ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಸಲ್ಮಾನರು ಭಯೋತ್ಪಾದಕರು, ಕ್ರಿಶ್ಚಿಯನ್ನರು ಮತಾಂತರಿಗಳು, ಲೈಂಗಿಕ ಅಲ್ಪಸಂಖ್ಯಾತರು ಮಕ್ಕಳನ್ನು ಕಿಡ್ನಾಪ್ ಮಾಡುವರು ಎಂದು ಬಿಜೆಪಿ ಜನರಲ್ಲಿ ತಪ್ಪು ಕಲ್ಪನೆ ಮೂಡಿಸುತ್ತಿದೆ ಎಂದು ಆರೋಪಿಸಿದರು.

ಆದರೆ ಬಿಜೆಪಿ ಮಾಡುತ್ತಿರುವ ಆರೋಪಗಳೆಲ್ಲಾ ಶುದ್ಧ ಸುಳ್ಳಾಗಿದ್ದು, ಕರ್ನಾಟಕದಲ್ಲಿ ಜನರು ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದು ಪದ್ಮಶಾಲಿ ತಿಳಿಸಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ದಿವಂಗತ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಸಮುದಾಯದ ಪರ ಹಲವು ಯೋಜನೆ ಅನುಷ್ಠಾನಗೊಳಿಸಿ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಹಾದಿಯಲ್ಲಿ ಸಾಗುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಹಿಳಾ ಮೀಸಲಾತಿ ಕಲ್ಪಿಸಿರುವುದಾಗಿ ಬಿಜೆಪಿ ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತಿದೆ. ಆದರೆ ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲದಲ್ಲೆ ಈ ಪರಿಕಲ್ಪನೆ ಮೂಡಿತ್ತು. ಅವರೇ ಮಹಿಳಾ ಮೀಸಲಾತಿಗೆ ತಳಹದಿ ಹಾಕಿಕೊಟ್ಟಿದ್ದರು ಎಂದು ಹೇಳಿದರು.

ಈ ವೇಳೆ ಮಾತನಾಡಿದ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪ, ರಾಜೀವ್ ಗಾಂಧಿ ನೀಡಿದ ಕೊಡುಗೆಯಿಂದ ಮಹಿಳೆಯರು ಸೇರಿದಂತೆ ಬಹಳಷ್ಟು ಸಮುದಾಯ ರಾಜಕೀಯ ಸ್ಥಾನಮಾನ ಪಡೆದಿದೆ. ನಾನು ಕೂಡ ಜಿಲ್ಲಾ ಪಂಚಾಯಿತ್ ಅಧ್ಯಕ್ಷೆಯಾಗಲು ರಾಜೀವ್ ಗಾಂಧಿ ನೀಡಿದ ಕೊಡುಗೆಯೇ ಕಾರಣ ಎಂದು ಹೇಳಿದರು.

ವಿಶ್ವದಲ್ಲಿ ಭಯೋತ್ಪಾದನೆಯನ್ನು ಸಂಪೂರ್ಣ ತೊಡೆದು ಹಾಕುವ ಸಂಕಲ್ಪಕ್ಕೆ ರಾಜೀವ್ ಗಾಂಧಿ ಕರೆ ಕೊಟ್ಟಿದ್ದರು. ಆದರೆ ದುರದೃಷ್ಟವಶಾತ್ ಅದೇ ಭಯೋತ್ಪಾದಕರ ವಿಷವ್ಯೂಹಕ್ಕೆ ರಾಜೀವ್ ಗಾಂಧಿ ಬಲಿಯಾದರು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಹೇಳಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕರಾದ ಎಂ.ಶಿವಣ್ಣ, ಡಾ.ಭಾರತಿ ಶಂಕರ್, ಕಾಂಗ್ರೆಸ್ ಪದಾಧಿಕಾರಿಗಳಾದ ಶಿವಪ್ರಸಾದ್, ಮಲ್ಲೇಶ್, ಶಿವಣ್ಣ, ಪುಷ್ಪಾ, ಎನ್.ಆರ್.ನಾಗೇಶ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

22.05.2024 ಬುಧವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ –ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ ಯುವರಾಜ ಕಾಲೇಜು :** ಬೆಳಗ್ಗೆ 11 ರಿಂದ ಜ್ಞಾನವಾಹಿನಿಯ ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ, ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಹಾಸ್ಯ ಕಲಾವಿದರಾದ ವಿನೋದ್ ಗೊಬ್ಬರಗಾಲ, ಚಂದ್ರಪ್ರಭಾ, ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಕೆ. ಮಹೇಶ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ; ಮಧ್ಯಾಹ್ನ 2.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಮುಖ್ಯ ಭಾಷಣಕಾರರು: ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ, ಉಪಸ್ಥಿತರು: ಕರಾಮುವಿವಿ ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡಾ.ಹೆಚ್.ವಿಶ್ವನಾಥ್, ಕರಾಮುವಿವಿ ಡೀನ್ ಪ್ರೊ.ಎನ್.ಲಕ್ಷ್ಮೀ, ಪ್ರೊ.ಎಂ.ರಾಮನಾಥಂ ನಾಯುಡು, ಪ್ರಾಸ್ತಾವಿಕ ನುಡಿ: ಸಹಾಯಕ ಪ್ರಾಧ್ಯಾಪಕ ಡಾ.ಎನ್.ಆರ್. ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ಸ್ವಾಯತ್ತ ಕಾಲೇಜು :** ಹದಿನಾರನೇ ಪದವೀಧರರ ದಿನಾಚರಣೆ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಇಸ್ರೋದ ವಿಶ್ರಾಂತ ಅಧ್ಯಕ್ಷರೂ ಭಾರತ ಸರ್ಕಾರದ ಬಾಹ್ಯಾಕಾಶ ಆಯೋಗದ ಸದಸ್ಯರೂ ಆದ ಎ.ಎಸ್. ಕಿರಣ್ ಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ, ಗೌರವ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಆರ್. ಮೂಗೇಶಪ್ಪ, ಸ್ಥಳ:ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ 'ಬದುಕು ಬದಲಿಸಿದ ಶೋಧ' ಬಾನುಲಿ ಸರಣಿ, ಪ್ರಸ್ತುತಿ: ಎನ್.ಎನ್. ಸುರೇಂದ್ರನಾಥ್ ಸಾತ್ವಿಕ್, 6.40 'ನಾನು ನ. ರತ್ನ' ಬಾನುಲಿ ಸರಣಿ, ಪರಿಕಲ್ಪನೆ: ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಡಾ. ಚಂದ್ರಶೇಖರ್ ಕಂಬಾರರ ಗೀತೆಗಳು, 9.00 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಗೋಕುಲ್ ಉತ್ಸವ್ ಮಹಾರಾಜ್, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಹೆಚ್. ಡಿ. ಕೋಟೆ ತಾಲೂಕು ಹಿರೇ ನಂದಿ ಗ್ರಾಮದ ಚಾಮಮ್ಮ ಮತ್ತು ಸಂಗಡಿಗರು, ಪ್ರಸ್ತುತಿ: ಡಾ. ಮೈಸೂರು ಉಮೇಶ್, 1.20 ಭಾವಗೀತೆಗಳು–ರಶ್ಮಿ ಬಿನು, 2.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 3.10 ಕರ್ನಾಟಕ ಶಾಸ್ತ್ರೀಯ ಸಂಗೀತ–ಅರುಣಾ ಸಾಯಿರಾಂ, 4.00 ಮಹಿಳಾರಂಗ 'ಹೀಗಿದೆ ನೋಡಿ ನಮ್ಮ ಜೋಡಿ' ದಿನಪತ್ರಿಕೆಯ ಹಿರಿಯ ಸಹಾಯಕ ವ್ಯವಸ್ಥಾಪಕರು ರಾಜೇಶ್ ಬಸವಣ್ಣ ಹಾಗೂ ಮಡದಿ ರಂಗನಟಿ ಸರಿತಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ. ಮಾಧವಿ ಭಂಡಾರಿ, 6.55 ಕೃಷಿರಂಗ–ಸಾವಯವ ಸಂಪದ–ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ, ಸಮಸ್ಯಾತ್ಮಕ ಮಣ್ಣಿನ ನಿರ್ವಹಣೆ ಈ ಕುರಿತು ಮಂಡ್ಯದ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಎಂ.ಎ. ಅನಂತ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 10.10 ಜನಪದಗೀತೆ, 10.40 ಸವಿನೆನಪು

ಮೈಸೂರು ಮಿತ್ರ ಬುಧವಾರ 22 ಮೇ 2024

ಕಲುಷಿತ ನೀರು ಸೇವನೆ: ಕೆ.ಸಾಲುಂಡಿಯಲ್ಲಿ ಓರ್ವ ಸಾವು, 76 ಮಂದಿ ಅಸ್ವಸ್ಥ

● ಗ್ರಾಮದಲ್ಲಿ ಆತಂಕದ ವಾತಾವರಣ ● ವಾಂತಿ-ಭೇದಿಯಿಂದ ಗ್ರಾಮಸ್ಥರು ತತ್ತರ ● ಮೂವರ ಸ್ಥಿತಿ ಗಂಭೀರ ● ಗ್ರಾಮದಲ್ಲಿ ವೈದ್ಯರ ತಂಡ ಬೀಡು ● ಶಾಸಕ ಜಿ.ಟಿ.ದೇವೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡರಿಂದ ಪರಿಶೀಲನೆ ● ಅಧಿಕಾರಿಗಳ ಭೇಟಿ

"ಕೆ.ಸಾಲುಂಡಿ ಗ್ರಾಮದಲ್ಲಿ ಸಂಜೆವರೆಗೂ 68 ಪ್ರಕರಣ ದಾಖಲಾಗಿದೆ. ಓರ್ವ ಮೃತಪಟ್ಟಿದ್ದಾರೆ. ಕೆಲವರು ಖಾಸಗಿ ಆಸ್ಪತ್ರೆಗಳಿಗೆ ತೆರಳಿದ್ದಾರೆ. ವೈದ್ಯರು, ನರ್ಸ್, ಸಿಹೆಚ್‌ಓ ಹಾಗೂ ಆಶಾ ಕಾರ್ಯಕರ್ತೆಯರುಳ್ಳ ತಂಡವನ್ನು ಗ್ರಾಮದಲ್ಲಿಯೇ ಇರಿಸಲಾಗಿದೆ. ಗ್ರಾಮಸ್ಥರಲ್ಲಿ ವಾಂತಿ-ಭೇದಿ ಕಾಣಿಸಿಕೊಂಡಿದೆ. ಗ್ರಾಮದಲ್ಲಿಯೇ ತಪಾಸಣೆ ಮಾಡಲಾಗುತ್ತಿದೆ. ವೈದ್ಯರ ತಂಡದೊಂದಿಗೆ ಓಆರ್‌ಎಸ್ ಸೇರಿದಂತೆ ವಾಂತಿ, ಭೇದಿ ತಡೆಗಾಗಿ ನೀಡುವ ಅಗತ್ಯ ಪ್ರಮಾಣದ ಔಷಧಿಯನ್ನು ಕಳುಹಿಸಲಾಗಿದೆ. ಅಸ್ವಸ್ಥರಾದವರಿಗೆ ಗ್ರಾಮದಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗೆ ಕಳುಹಿಸುತ್ತಿದ್ದೇವೆ. ಎರಡು ಆಸ್ಪತ್ರೆಗಳಲ್ಲಿ 25 ಬೆಡ್‌ಗಳನ್ನು ಮೀಸಲಿರಿಸಲಾಗಿದೆ. ಅಸ್ವಸ್ಥತೆಗೆ ನಿಖರ ಕಾರಣ ತಿಳಿದು ಬಂದಿಲ್ಲ .ಪ್ರಯೋಗಾಲಯದ ವರದಿ ಬಂದ ಬಳಿಕ ನಿಖರ ಮಾಹಿತಿ ಸಿಗಲಿದೆ. –ಡಾ. ಪಿ.ಸಿ.ಕುಮಾರ ಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ.



ಚಿಕಿತ್ಸೆ ಪಡೆಯುತ್ತಿರುವ ಅಸ್ವಸ್ಥ ಮಹಿಳೆಯ ಆರೋಗ್ಯ ವಿಚಾರಿಸುತ್ತಿರುವ ಶಾಸಕ ಜಿ.ಟಿ.ದೇವೇಗೌಡ.

ಮೈಸೂರು, ಮೇ 21(ಎಂಟಿವೈ)– ಕಲುಷಿತ ನೀರು ಸೇವಿಸಿ ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಓರ್ವ ಯುವಕ ಮೃತಪಟ್ಟು, 76ಕ್ಕೂ ಹೆಚ್ಚು ಮಂದಿ ಗ್ರಾಮಸ್ಥರು ಅಸ್ವಸ್ಥರಾಗಿರುವ ಘಟನೆ ಜರುಗಿದ್ದು, ವಾಂತಿ ಭೇದಿಯಿಂದ ನರಳಾಡುತ್ತಿರುವ ಗ್ರಾಮಸ್ಥರಿಗೆ ಸೂಕ್ತ ಚಿಕಿತ್ಸೆ ನೀಡಲು ಗ್ರಾಮದಲ್ಲಿಯೇ ವೈದ್ಯರ ತಂಡವೊಂದು ಬೀಡು ಬಿಟ್ಟಿದೆ.

ಕೆ.ಸಾಲುಂಡಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಕೊಳವೆ ಬಾವಿಗೆ ಒಳಚರಂಡಿ ನೀರು ಸೇರಿರುವ ಶಂಕೆ ವ್ಯಕ್ತವಾಗಿದ್ದು, ಕಲುಷಿತ ನೀರು ಸೇವಿಸಿ ವಾಂತಿ ಭೇದಿಯಿಂದ ಅಸ್ವಸ್ಥರಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗ್ರಾಮದ ನಿವಾಸಿ ಜವರೇಗೌಡ ಎಂಬುವರ ಮಗ ಕನಕರಾಜ್ (23) ಚಿಕಿತ್ಸೆ ಫಲಕಾರಿಯಾಗದೆ ಮುಂಜಾನೆ ಮೃತಪಟ್ಟಿದ್ದಾರೆ. ಶಿವಮ್ಮ, ಸಣ್ಣೈದೇಗೌಡ ಸೇರಿದಂತೆ 10ಕ್ಕೂ ಹೆಚ್ಚು ಮಂದಿ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರಲ್ಲಿ ಮೂವರ ಸ್ಥಿತಿ ಗಂಭೀರವಾಗಿದ್ದು, ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮೈಸೂರು ತಾಲೂಕು ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆ.ಸಾಲುಂಡಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ನಿಟ್ಟಿನಲ್ಲಿ ಎರಡು ಕೊಳವೆ ಬಾವಿಗಳಿದ್ದು, ಅದರಲ್ಲಿ ಒಂದು ಕೊಳವೆ ಬಾವಿಯಿಂದ ಸರಬರಾಜಾದ ಕುಡಿಯುವ ನೀರಿಗೆ ಒಳಚರಂಡಿ ನೀರು ಸೇರಿರುವ ಶಂಕೆ ವ್ಯಕ್ತವಾಗಿದ್ದು, ಸೋಮವಾರ ಸರಬರಾಜಾದ ನೀರು ಸೇವಿಸಿ ಅನಾರೋಗ್ಯಕ್ಕೆ ತುತ್ತಾದ ಗ್ರಾಮಸ್ಥರ ಸ್ಥಿತಿ ಸಂಜೆ ವೇಳೆ ಗಂಭೀರ ಸ್ಥಿತಿ ತಲುಪಿದ್ದು, ಅವರಲ್ಲಿ 6 ಮಂದಿಯನ್ನು ವಿವಿಧ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಮಂಗಳವಾರ ಮುಂಜಾನೆ ಕನಕರಾಜ್ ಮೃತಪಟ್ಟಿದ್ದಾರೆ.

ಹೆಚ್ಚುತ್ತಲೇ ಸಾಗಿದ ಪ್ರಕರಣ: ಸೋಮವಾರ ರಾತ್ರಿ ವೇಳೆಗೆ ವಾಂತಿ-ಭೇದಿಯಿಂದ ನರಳಾಡುವವರ ಸಂಖ್ಯೆ ಹೆಚ್ಚಾಗತೊಡಗಿತು. ಮಂಗಳವಾರ ಮಧ್ಯಾಹ್ನದ ವೇಳೆಗೆ 76 ಮಂದಿ ವಾಂತಿ-ಭೇದಿ ಕಾಡಲಾರಂಭಿಸಿದೆ. ಅದರಲ್ಲಿ ಜಿಲ್ಲಾಸ್ಪತ್ರೆಯಲ್ಲಿ 33 ಮಂದಿ ದಾಖಲಾಗಿದ್ದರೆ, ಕೆಲ ಖಾಸಗಿ ಆಸ್ಪತ್ರೆಯಲ್ಲಿ 15ಕ್ಕೂ ಹೆಚ್ಚು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದವರಿಗೆ ಗ್ರಾಮದಲ್ಲೇ ಚಿಕಿತ್ಸೆ ನೀಡಿ, ಅಗತ್ಯಬಿದ್ದರೆ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲು ನಿರ್ಧರಿಸಲಾಗಿದೆ.

ಹೆಚ್ಚಾದ ಆತಂಕ, ಬೀಡು ಬಿಟ್ಟ ವೈದ್ಯರ ತಂಡ: ಕಲುಷಿತ ನೀರು ಸೇವನೆಯಿಂದಾಗಿ ಅಸ್ವಸ್ಥರಾಗುವವರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಕೆ.ಸಾಲುಂಡಿ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಪರಿಸ್ಥಿತಿ ಬಿಗಾಡಾಯಿಸುತ್ತಿದ್ದ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಅವರು ಐವರು ವೈದ್ಯರು, ನಾಲ್ವರು ದಾದಿಯರು ಹಾಗು ಮೂವರು ಸಮುದಾಯ ಆರೋಗ್ಯಾಧಿಕಾರಿಗಳ ತಂಡವನ್ನು ಅಗತ್ಯ ಔಷಧಿಯೊಂದಿಗೆ ಕಳುಹಿಸಿದ್ದು, ಗ್ರಾಮಸ್ಥರ ಆರೋಗ್ಯದ ಮೇಲೆ ನಿಗಾ ಇಡಲು ಸೂಚಿಸಿದ್ದಾರೆ. ಈ ತಂಡದೊಂದಿಗೆ ತಾಲೂಕು ಆರೋಗ್ಯಾಧಿಕಾರಿ ಡಾ.ಪುಟ್ಟತಾಯಮ್ಮ ಅವರು ಗ್ರಾಮಸ್ಥರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಂಡಿದ್ದಾರೆ.

ಶಾಸಕರ ಭೇಟಿ: ಕೆ.ಸಾಲುಂಡಿ ಗ್ರಾಮಕ್ಕೆ ಶಾಸಕ ಜಿ.ಟಿ.ದೇವೇಗೌಡ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೆ, ವಾಂತಿ ಭೇದಿಯಿಂದ ನರಳುತ್ತಿದ್ದವರಿಗೆ ಸಾಂತ್ವನ ಹೇಳಿದರು. ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಘಟನೆಗೆ ಕಾರಣ ಹಾಗೂ ಅಸ್ವಸ್ಥರ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದರು. ಬಳಿಕ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿ ಮಾಡಿ ಸಮಾಧಾನ ಮಾಡಿದರು.

ಎಂಜಿನಿಯರ್ ವಿರುದ್ಧ ಕಿಡಿ: ಕೆ.ಸಾಲುಂಡಿ ಗ್ರಾಮದಲ್ಲಿ ಪರಿಶೀಲನೆ ವೇಳೆ ಶಾಸಕ ಜಿ.ಟಿ. ದೇವೇಗೌಡ ಹಿರಿಯ ಅಧಿಕಾರಿಯೊಬ್ಬರಿಗೆ ಕರೆ ಮಾಡಿ, ಇಂಜಿನಿಯರ್‌ವೊಬ್ಬರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಗ್ರಾಮದಲ್ಲಿ ಚರಂಡಿ ನೀರು ಹರಿದು ಹೋಗಲು ಚಿಕ್ಕ ಗಾತ್ರದ ಪೈಪ್ ಅಳವಡಿಸಲಾಗಿದೆ. ಅಲ್ಲದೆ, ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಕೊಳವೆ ಬಾವಿ(ಬೋರ್‌ವೆಲ್) ಪಕ್ಕದಲ್ಲಿಯೇ ಚರಂಡಿ ನೀರಿನ ಪೈಪ್ ಅಳವಡಿಸಲಾಗಿದೆ. ಇದರಿಂದ ಚರಂಡಿ ನೀರು ಮಳೆ ನೀರಿನೊಂದಿಗೆ ಕೊಳವೆ ಬಾವಿಗೆ ಸೇರಿ ಈ ಅನಾಹುತ ಸಂಭವಿಸಿದೆ. ಕೂಡಲೆ ಸಂಬಂಧಪಟ್ಟ ಇಂಜಿನಿಯರ್‌ನನ್ನು ಅಮಾನತು ಮಾಡಿ ಎಂದು ಕಿಡಿಕಾರಿದರು.

ಆರೋಗ್ಯ ಕಾಪಾಡಿ: ಇದೇ ವೇಳೆ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಕಲುಷಿತ ನೀರು ಸೇವನೆಯಿಂದ ಅಸ್ವಸ್ಥರಾಗಿರುವವರ ಆರೋಗ್ಯ ಕಾಪಾಡಲು ಕ್ರಮ ಕೈಗೊಳ್ಳಬೇಕು. ಗ್ರಾಮದಲ್ಲಿರುವ ಎಲ್ಲಾ ಮನೆಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಭೇಟಿ ನೀಡಿ ಪ್ರತಿಯೊಬ್ಬರ ಆರೋಗ್ಯ ತಪಾಸಣೆ ಮಾಡಬೇಕು. ಗ್ರಾಮಸ್ಥರಿಗೆ ಧೈರ್ಯ ತುಂಬುವ ಕಾರ್ಯ ಮಾಡಬೇಕು. ಗ್ರಾಮದಲ್ಲಿ ಸ್ವಚ್ಛತೆಗೆ ಗಮನ ಹರಿಸಬೇಕು. ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛತೆ ಮಾಡುವವರೆಗೂ ಟ್ಯಾಂಕ್ ಮೂಲಕ ಕುಡಿಯುವ ನೀರನ್ನು ಪೂರೈಸುವಂತೆ ಸೂಚನೆ ನೀಡಿದರು.

ನೀರಿನ ಪರೀಕ್ಷೆ: ಗ್ರಾಮಕ್ಕೆ ಸರಬರಾಜಾದ ಕುಡಿಯುವ ನೀರಿನ ಸ್ಯಾಂಪಲ್ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಳಿಕ ಗ್ರಾಮಸ್ಥರ ಅಸ್ವಸ್ಥತೆಗೆ ಕಾರಣ ತಿಳಿದು ಬರಲಿದೆ. ಮೇಲ್ನೋಟಕ್ಕೆ ಕಲುಷಿತ ನೀರು ಸೇವನೆ ಎಂಬ ಶಂಕೆ ವ್ಯಕ್ತವಾಗಿರುವುದರಿಂದ ಬೋರ್‌ವೆಲ್ ನೀರು ಪೂರೈಕೆಗೆ ಕಡಿವಾಣ ಹಾಕಲಾಗಿದೆ.

ಈ ಸಂದರ್ಭದಲ್ಲಿ ಡಿಎಚ್‌ಓ ಡಾ.ಪಿ.ಸಿ. ಕುಮಾರಸ್ವಾಮಿ, ತಹಸೀಲ್ದಾರ್ ಮಹೇಶ್, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಕುರಿಯಾಕೋಸ್ ಬಾಬು, ಟಿಎಚ್‌ಓ ಡಾ.ಪುಟ್ಟತಾಯಮ್ಮ ಇದ್ದರು.

ಜಿಲ್ಲಾಧಿಕಾರಿ ಭೇಟಿ ನೀಡಿದ್ದರು: ಕೆ.ಸಾಲುಂಡಿಯಲ್ಲಿ ವಾಂತಿ-ಭೇದಿ ಪ್ರಕರಣ ಕಂಡು ಬಂದ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೇ ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಿದ್ದ ಗ್ರಾಮಸ್ಥರ ಆರೋಗ್ಯ ವಿಚಾರಿಸಿದರಲ್ಲದೆ, ಆತ್ಮಸ್ಥೈರ್ಯ ತುಂಬಿದ್ದರು. ಘಟನೆಗೆ ಕಾರಣವಾಗಿರುವ ಅಂಕಿ-ಅಂಶ ಕುರಿತು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಹಾಗೂ ಡಿಹೆಚ್‌ಓ ಡಾ. ಪಿ.ಸಿ.ಕುಮಾರಸ್ವಾಮಿ ಅವರಿಂದ ಮಾಹಿತಿ ಪಡೆದಿದ್ದರಲ್ಲದೆ, ಗ್ರಾಮಸ್ಥರ ಆರೋಗ್ಯ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.

ಮುಡಾ ಅಧಿಕಾರಿಗಳೇ ನೇರ ಹೊಣೆ

ಶಾಸಕ ಜಿ.ಟಿ.ದೇವೇಗೌಡ ಕಿಡಿ

ಮೈಸೂರು, ಮೇ 21(ಎಂಟಿವೈ)– ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆಯಿಂದ ಯುವಕ ಮೃತಪಟ್ಟ ಪ್ರಕರಣಕ್ಕೆ ಮುಡಾ ಅಧಿಕಾರಿಗಳೇ ನೇರ ಹೊಣೆ ಎಂದು ಶಾಸಕ ಜಿ.ಟಿ.ದೇವೇಗೌಡ ಆರೋಪಿಸಿದರು.

ಕೆ.ಸಾಲುಂಡಿ ಗ್ರಾಮದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಡಾವಣೆ ನಿರ್ಮಾಣವನ್ನು ಮುಡಾ ಅಧಿಕಾರಿಗಳು ಪೂರ್ಣಗೊಳಿಸಿ, ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಕೊಟ್ಟರೆ ಅವರು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಾರೆ. ಆದರೆ ಮುಡಾ ಬಡಾವಣೆ ಅಭಿವೃದ್ಧಿಯನ್ನು ಪೂರ್ಣಗೊಳಿಸದೇ ಇರುವುದು ಸಮಸ್ಯೆಯಾಗಿದೆ. ಈ ಬಗ್ಗೆ ಮುಡಾ ಅಧ್ಯಕ್ಷರ ಗಮನಕ್ಕೆ ತರುತ್ತೇನೆ ಎಂದು ಹೇಳಿದರು. ಮುಡಾ ಅಧಿಕಾರಿಗಳು ಮೊದಲು ಕಲುಷಿತ ನೀರು ಬರದಂತೆ ಪೈಪ್ ಸರಿ ಮಾಡಬೇಕು. ಕಲುಷಿತ ನೀರು ಸೇವನೆಯಿಂದ ಸಮಸ್ಯೆಯಾಗಿರುವುದರಿಂದ ಬೋರ್‌ವೆಲ್ ನೀರನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಒಂದು ವೇಳೆ ಕುಡಿಯುವ ನೀರು ಯೋಗ್ಯವಲ್ಲದೇ ಇದ್ದರೆ ಹೊಸದಾಗಿ ಬೋರ್‌ವೆಲ್ ತೆಗೆಸಿ ನೀರು ಪೂರೈಕೆ ಮಾಡಲಾಗುವುದು. ಇನ್ನೂ 6 ತಿಂಗಳಲ್ಲಿ ಗ್ರಾಮಕ್ಕೆ ಕಾವೇರಿ ನೀರು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ಅಮಾನತ್ತಿಗೆ ಆಗ್ರಹ: ನಾನು ಮೂರು ವರ್ಷದಿಂದ ಹೇಳುತ್ತಲೇ ಇದ್ದೇನೆ. ಕುಡಿಯುವ ನೀರಿಗೆ ಟ್ಯಾಂಕ್ ಮಾಡಿಲ್ಲ. ಗ್ರಾಮದ ಜನರಿಗೆ ನೀರು ಪೂರೈಕೆ ಮಾಡ ಬೇಕಾದ ಮುಡಾ ಎಂಜಿನಿಯರ್ ಕೆ.ಟಿ.ರವಿ ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಸಮಸ್ಯೆಯಾಗಿದ್ದು, ಆತನನ್ನು ಕೂಡಲೇ ಅಮಾನತು ಪಡಿಸಬೇಕು ಎಂದು ಹೇಳಿದರು.

ಡಿಸಿಯಿಂದ ಮಾಹಿತಿ ಪಡೆದ ಮುಖ್ಯಮಂತ್ರಿ



ಮೈಸೂರು, ಮೇ 21(ಎಂಟಿವೈ)– ಮೈಸೂರು ತಾಲೂಕಿನ ಕೆ. ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಯುವಕನೊಬ್ಬ ಮೃತಪಟ್ಟು, 70ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಬೆಳಗ್ಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಅವರಿಗೆ ಮೊಬೈಲ್ ಕರೆ ಮಾಡಿ ಮಾಹಿತಿ ಪಡೆದರಲ್ಲದೆ, ಗ್ರಾಮಸ್ಥರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಗ್ರಾಮಕ್ಕೆ ಸರಬರಾಜಾದ ಕುಡಿಯುವ ನೀರು ಕಲುಷಿತಗೊಳ್ಳಲು ಕಾರಣವೇನು ಎಂಬುದನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಎಂ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಲುಷಿತ ನೀರು ಸೇವನೆಯಿಂದ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿರುವವರ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆ ಮಾಡುವಂತೆ ಆದೇಶಿಸಿದರು.



ಡಿ.ಸಾಲುಂಡಿ ಗ್ರಾಮದಲ್ಲಿ ಮನೆ-ಮನೆಗೆ ತೆರಳಿ ಆರೋಗ್ಯ ವಿಚಾರಿಸುತ್ತಿರುವ ವೈದ್ಯರ ತಂಡ.

ಶಾಸಕರು, ಮುಡಾ ತಾಂತ್ರಿಕ ಅಧಿಕಾರಿಗಳು, ಪಪಂ ಮುಖ್ಯಾಧಿಕಾರಿ ನಿರ್ಲಕ್ಷ್ಯವೇ ಕಾರಣ

ಮುಡಾ ಅಧ್ಯಕ್ಷ ಕೆ.ಮರೀಗೌಡ ಆರೋಪ



ಮೈಸೂರು, ಮೇ 21(ಎಂಟಿವೈ)– ಚಾಮುಂಡೇಶ್ವರಿ ಕ್ಷೇತ್ರದ ಕೆ. ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟ ಯುವಕ ಕನಕರಾಜು ಅವರ ಸಾವಿಗೆ ಹಾಗೂ ಗ್ರಾಮಸ್ಥರು ಅಸ್ವಸ್ಥರಾಗಿರುವುದಕ್ಕೆ ಶಾಸಕ ಜಿ.ಟಿ.ದೇವೇಗೌಡ ಹಾಗೂ ಮುಡಾದ ತಾಂತ್ರಿಕ ಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಯ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ಆರೋಪಿಸಿದ್ದಾರೆ.

ಕೆ.ಸಾಲುಂಡಿಯಲ್ಲಿ ಮೃತ ಕನಕರಾಜುವಿನ ಅಂತಿಮ ದರ್ಶನ ಪಡೆದು ಕುಟುಂಬಸ್ಥರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ರೂ. 1 ಲಕ್ಷ ಪರಿಹಾರ ವಿತರಿಸಿ ಮಾತನಾಡಿದ ಅವರು, ಜಿ.ಟಿ.ದೇವೇಗೌಡರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ 11 ವರ್ಷದಿಂದ ಶಾಸಕರಾಗಿದ್ದಾರೆ. ಈ ಗ್ರಾಮದಲ್ಲಿ ಹಿಂದುಳಿದ ವರ್ಗದ ಜನರು ವಾಸಿಸುತ್ತಿದ್ದಾರೆ. ಎಲ್ಲರೂ ಸಿದ್ದರಾಮಯ್ಯರವರ ಬೆಂಬಲಿಗರೆಂಬ ನಿರ್ಲಕ್ಷ್ಯವೇ ಈ ಅನಾಹುತಕ್ಕೆ ಕಾರಣ. ಗ್ರಾಮದ ಒಳಚರಂಡಿಗೆ ಸೆಪ್ಟಿಕ್ ಟ್ಯಾಂಕ್ ಮಾಡದಿರುವುದರಿಂದ ನೀರು ಚರಂಡಿಯಲ್ಲಿ ಹರಿಯುತ್ತಿದೆ. ಈ ಒಳಚರಂಡಿ ನೀರು ಬೋರ್‌ವೆಲ್ ಪಕ್ಕದಲ್ಲಿ ಹರಿಯುತ್ತಿರುವುದರಿಂದ ಕುಡಿಯುವ ನೀರು ಕಲುಷಿತವಾಗಿ ಈ ದುರ್ಘಟನೆ ನಡೆದಿದೆ ಎಂದು ದೂರಿದರು.

ಈ ಘಟನೆಯಿಂದ 75 ಜನರು ಅನಾರೋಗ್ಯ ಪೀಡಿತರಾಗಿದ್ದು 50 ಜನರಿಗೆ ವಾಂತಿಭೇದಿಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈಗಾಗಲೇ ಜಿಲ್ಲಾ ಆರೋಗ್ಯಾಧಿಕಾರಿ, ಪಟ್ಟಣ ಪಂಚಾಯ್ತಿ ಅಧಿಕಾರಿ, ಮುಡಾ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಸೂಚನೆ ನೀಡಿದ್ದು, ಊರಿನಲ್ಲಿ ಸ್ವಚ್ಛತೆ ಮಾಡಲಾಗುತ್ತಿದ್ದು, ಟ್ಯಾಂಕರ್‌ಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಒಳಚರಂಡಿಗೆ ಸೆಪ್ಟಿಕ್ ಟ್ಯಾಂಕ್ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗುವುದು. ಇಂತಹ ದುರ್ಘಟನೆ ಬೇರೆ ಊರುಗಳಲ್ಲಿ ನಡೆಯದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲಾಗುವುದು. ಈ ದುರ್ಘಟನೆಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಯಿಂದ ಮಾಹಿತಿ ಪಡೆದು ಚಿಕಿತ್ಸೆ ಪಡೆಯುತ್ತಿರುವವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ಚಿಕಿತ್ಸೆ ವೆಚ್ಚವನ್ನು ಭರಿಸಲು ತಿಳಿಸಿದ್ದಾರೆ. ಮಾನವೀಯತೆಯ ದೃಷ್ಟಿಯಿಂದ ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಕೆ. ಸಾಲುಂಡಿ ಗ್ರಾಮಕ್ಕೆ ಹೊಸದಾಗಿ 3 ಬೋರ್‌ವೆಲ್‌ಗಳನ್ನು ಕೊರೆಸಿ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.



ನಕ್ಕರೆ ಅದೇ ಸ್ವರ್ಗ

ಯುವಕ : (ಮದುವೆಯಾಗುವ ವಿಚಾರದಲ್ಲಿ) "ಬಹಳ ಓದಿದೀನಿ, ವಯಸ್ಸು..."

ಯುವತಿ : ಮೊದಲು ಅದಿರಲಿ, ನಿಮ್ಮ ವಯಸ್ಸಿನ ಬಗ್ಗೆ ಸುಳ್ಳು ಹೇಳಿದರೂ ಪರ್ವಾಗಿಲ್ಲ. ಆದ್ರೆ ನಿಮ್ಮ ಸಂಬಳದ ಬಗ್ಗೆ ನಿಜ ಹೇಳಬೇಕು"

ಮೈಸೂರು ಮಿತ್ರ

ಬುಧವಾರ, 22 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ವಿಧೇಯತೆ ಎಂದೂ ದೌರ್ಬಲ್ಯವಲ್ಲ. ಅದು ನಿಜವಾದ ಶಕ್ತಿ. ನಿಮ್ಮ ಶಕ್ತಿಯನ್ನು ತೋರಿಸಲು ಪ್ರಯತ್ನಿಸುವುದು ನಿಜವಾದ ದೌರ್ಬಲ್ಯ. – ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗೆದ್ದರೆ ಆಡೋದಕ್ಕೆ ಅನ್ನೋದು
ಸೋತರೆ ನೋಡೋದಕ್ಕೆ ಅನ್ನೋದು

ನಿಮ್ಮ ಪತ್ರಗಳು

ದಟ್ಟಗಳ್ಳಿಯ ಅಪಘಾತ ವಲಯಗಳು

ಮಾನ್ಯರೆ,



ಮೇ 19 ರ ಮುಂಜಾನೆ ಮೈಸೂರಿನ ರಾಮಕೃಷ್ಣ ವೃತ್ತದಿಂದ ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ವಿಶ್ವ ಮಾನವ ಜೋಡಿ ರಸ್ತೆಯ ಮಾರಮ್ಮನ ದೇವಸ್ಥಾನದ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಕೆಟಿಎಂ ಬೈಕ್ ಸವಾರನೊಬ್ಬ ಸಾವನ್ನಪ್ಪಿರುವುದು (ಮೈಸೂರು ಮಿತ್ರ 20.05.24)ವರದಿಯಾಗಿದೆ. ಆದರೆ ಈ ಸ್ಥಳದಲ್ಲಿ ಅಪಘಾತ ನಡೆಯುವುದು ಸಾಮಾನ್ಯ ಎಂಬಂತಾಗಿದೆ. ಕೆಲ ವರ್ಷಗಳ ಹಿಂದೆ ಇದೇ ರೀತಿ ಕೆಟಿಎಂ ಬೈಕ್ ಸವಾರನೊಬ್ಬ ವೇಗವಾಗಿ ಬಂದು ತಿರುವಿನಲ್ಲಿ ನಿಯಂತ್ರಣ ತಪ್ಪಿ ಬಿದ್ದು ಸಾವನ್ನಪ್ಪಿದ್ದ. ದಟ್ಟಗಳ್ಳಿಯ ಪಾನಿಪುರಿ ವ್ಯಾಪಾರಿಯೊಬ್ಬರು ಇದೇ ರೀತಿ ರಸ್ತೆ ಗುಂಡಿಗೆ ಬಿದ್ದು ಪ್ರಾಣ ಕಳೆದುಕೊಂಡಿದ್ದರು.

ಮೇ 6 ರ ಸಂಜೆ ಪ್ರಯಾಣಿಕರಿದ್ದ ಆಟೋ ಒಂದು ವೇಗವಾಗಿ ಬಂದು ತಿರುವಿನಲ್ಲಿ ನಿಯಂತ್ರಣಕ್ಕೆ ಬಾರದೆ ಆಟೋ ಪಲ್ಟಿಯಾಗಿತ್ತು. ಆದರೆ ಅದೃಷ್ಟವಶಾತ್ ಯಾರಿಗೂ ಹಾನಿಯಾಗಲಿಲ್ಲ. ಇವು ನಾನು ಗಮನಿಸಿದ ಕೆಲ ಘಟನೆಗಳಷ್ಟೇ. ಇನ್ನು ವರದಿಯಾಗದ ಘಟನೆಗಳಿಗೆ ಲೆಕ್ಕವಿಲ್ಲ.

ರಾಮಕೃಷ್ಣ ವೃತ್ತದಿಂದ ಇಳಿಜಾರಿನಿಂದ ಕೂಡಿದ ಈ ಜೋಡಿ ರಸ್ತೆಯಲ್ಲಿ ಎಲ್ಲಾ ವಾಹನಗಳೂ ವೇಗವಾಗಿಯೇ ಚಲಿಸುತ್ತವೆ. ರಾಮಕೃಷ್ಣ ವೃತ್ತದಿಂದ ಮುಂದೆ ಸುಪ್ರೀಮ್ ಫರ್ನಿಚರ್ ಮಳಿಗೆಯ ಬಳಿ ಈ ವಿಶ್ವಮಾನವ ಜೋಡಿ ರಸ್ತೆಯು ಇದ್ದಕ್ಕಿದ್ದಂತೆ ಎಲ್ ಮಾದರಿಯಲ್ಲಿ ತಿರುವು ಪಡೆದಿರುವುದೇ ಇಂತಹ ಘಟನೆಗಳಿಗೆ ಕಾರಣವಾಗಿದೆ. ಸುಮಾರು 35–40 ವರ್ಷಗಳ ಹಿಂದೆ ನಿರ್ಮಾಣವಾಗಿರುವ ದಟ್ಟಗಳ್ಳಿ ಬಡಾವಣೆಯನ್ನು ನಿರ್ಮಿಸುವಾಗ ಮುಡಾ ಅಧಿಕಾರಿಗಳು ನೇರವಾಗಿ ರಸ್ತೆ ನಿರ್ಮಾಣ ಮಾಡದೆ ಈ ರೀತಿ ಎಲ್ ಮಾದರಿ ತಿರುವು ಮಾಡಿರುವುದೇ ಇದಕ್ಕೆ ಕಾರಣವಾಗಿದೆ. ಕೆಇಬಿ ಜಂಕ್ಷನ್‌ನಿಂದ ಸೋಮನಾಥ ನಗರಕ್ಕೆ ಹೋಗುವಾಗ, ಸಾರಾ ಕನ್ವೆನ್ಷನ್ ಹಾಲ್ ಬಳಿಯೂ ಇದೇ ರೀತಿ ತಿರುವು ಇದ್ದು ಇಲ್ಲಿಯೂ ಬೈಕ್, ಬುಲೆಟ್, ಕಾರು ಚಾಲಕರು ಅಸು ನೀಗಿದ್ದಾರೆ.

ಹಾಗೆಯೇ ಕೆಇಬಿ ಜಂಕ್ಷನ್, ನೇತಾಜಿ ವೃತ್ತ, ಮಹಾಮನೆ ವೃತ್ತ, ಸೋಮನಾಥ ವೃತ್ತಗಳಲ್ಲಿಯೂ ಬ್ಯಾರಿಕೇಡ್ ಹಾಕಿದ್ದರೂ ಬೆಳಗ್ಗೆ ಹಾಗೂ ಸಂಜೆ ವೇಳೆ ವಾಹನ ದಟ್ಟಣೆಯಿಂದ ಅಪಘಾತಗಳಾಗುತ್ತಿವೆ. ರಿಂಗ್ ರಸ್ತೆ ಆದರೂ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿರುವುದರಿಂದ ಅತಿ ವೇಗವಾಗಿ ವಾಹನಗಳೂ ಚಲಿಸುವುದರಿಂದ ರಿಂಗ್ ರಸ್ತೆಯ ಎಡ, ಬಲದ ಬಡಾವಣೆಯ ಜನರು ರಸ್ತೆ ದಾಟಲು ಪ್ರಯಾಸಪಡುವಂತಾಗಿದೆ. ಆದ್ದರಿಂದ ಈ ರಿಂಗ್ ರಸ್ತೆಯು ನಗರದ ಬಡಾವಣೆಗಳ ನಡುವೆಯೇ ಹಾದು ಹೋಗಿರುವುದರಿಂದ ಎಲ್ಲಾ ಜಂಕ್ಷನ್ ಹಾಗೂ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವಲ್ಲಿ ವೈಜ್ಞಾನಿಕ ರಸ್ತೆ ಡುಬ್ಬಗಳನ್ನು ನಿರ್ಮಿಸಿ ವಾಹನಗಳು ಅತೀ ವೇಗವಾಗಿ ಚಾಲನೆ ಮಾಡದಂತೆ ನಿಯಂತ್ರಿಸಿ ಅಪಘಾತ ತಡೆಗಟ್ಟಲು ಕ್ರಮ ವಹಿಸಬೇಕು.

ಇದರ ನಡುವೆ ನೇತಾಜಿ ವೃತ್ತದಿಂದ ಸೋಮನಾಥ ವೃತ್ತದವರೆಗಿನ ಕೇವಲ 500 ಮೀಟರ್ ಅಂತರದಲ್ಲಿ 3 ಬಾರ್, ರೆಸ್ಟೋರೆಂಟ್‌ಗಳಿದ್ದು ಇವುಗಳ ಕಾರಣದಿಂದ ಜನರು ಸರ್ವಿಸ್ ರಸ್ತೆಯಲ್ಲಿ ಓಡಾಡಲು ಕೂಡ ಕಷ್ಟವಾಗಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಅರಣ್ಯಾಧಿಕಾರಿಗಳ ಬೇಜವಾಬ್ದಾರಿಯಿಂದ ಮರಗಳ ಮಾರಣಹೋಮ



ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಜಾಗತಿಕ ತಾಪಮಾನದ ವೈಪರೀತ್ಯದಿಂದಾಗಿ ಉಷ್ಣಾಂಶವು ಗರಿಷ್ಠ ಮಟ್ಟ ತಲುಪಿದೆ. ಬಿಸಿಲಿನ ತಾಪಕ್ಕೆ ಜನರನ್ನು ಒಳಗೊಂಡಂತೆ ಪ್ರಾಣಿ–ಪಕ್ಷಿ, ಜಾನುವಾರುಗಳು ನೋವನ್ನು ಅನುಭವಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಚಾಮರಾಜನಗರ ತಾಲೂಕು ಗಣಗನೂರು ಗ್ರಾಮದಲ್ಲಿ ಸುಮಾರು 100 ವರ್ಷಗಳ ಇತಿಹಾಸವಿರುವ ಹಳೆ ಮರಗಳನ್ನು ಅರಣ್ಯಾಧಿಕಾರಿಗಳು ಗ್ರಾಮಸ್ಥರ ಗಮನಕ್ಕೆ ತರದೆ ಕಡಿದಿದ್ದಾರೆ. ಇಂತಹ ದುಷ್ಕೃತ್ಯದಿಂದ ಊರಿನ ಸೌಂದರ್ಯಕ್ಕೆ ಧಕ್ಕೆ ಉಂಟಾಗಿ ಪರಿಸರಕ್ಕೂ ಹಾನಿಯಾಗಿದೆ. ಇದಕ್ಕೆ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಅರಣ್ಯಾಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನಲಾಗಿದೆ. ಈ ರೀತಿ ಪರಿಸರವನ್ನು ನಾಶ ಮಾಡಲು ಹೊರಟಿರುವ ಅಧಿಕಾರಿಗಳ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವನ್ನು ಜರುಗಿಸಿ, ಇಂತಹ ಪರಿಸರ ವಿರೋಧಿ ಚಟುವಟಿಕೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ.


–ಗಣಗನೂರು ಗ್ರಾಮಸ್ಥರು, ಚಾ.ನಗರ ಜಿಲ್ಲೆ.

ಒಳಚರಂಡಿ ವ್ಯವಸ್ಥೆ ಸರಿಪಡಿಸಿ

ಮಾನ್ಯರೇ,

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಬೇವಿನಕುಪ್ಪೆ ಎಂಬ ಗ್ರಾಮದಲ್ಲಿ ಹಲವು ಕಡೆ ಸರಿಯಾದ ಒಳಚರಂಡಿ ವ್ಯವಸ್ಥೆ ಇರದ ಕಾರಣ ಕೊಳಚೆ ನೀರು ತುಂಬಿ ಹರಿಯುತ್ತಿದೆ. ಮಳೆ ನೀರು, ಮನೆ ಬಳಕೆ ನೀರು, ಹೋಟೆಲ್ ಬಳಕೆಯ ನೀರು ಎಲ್ಲಾ ಸೇರಿದಾಗ ಚರಂಡಿ ನೀರು ರಸ್ತೆ ಮಾತ್ರವಲ್ಲದೆ ತಗ್ಗು ಪ್ರದೇಶದಲ್ಲಿರುವ ಮನೆಗಳಿಗೂ ನುಗ್ಗುತ್ತಿದ್ದು, ಇಲ್ಲಿನ ಜನರ ಕಷ್ಟ ಹೇಳಲು ತೀರದು. ನಿರಂತರವಾಗಿ ಹರಿಯುತ್ತಿರುವ ಚರಂಡಿ ನೀರಿನಿಂದಾಗಿ ಸೊಳ್ಳೆಗಳ ಉತ್ಪತ್ತಿ ದ್ವಿಗುಣವಾಗುತ್ತಿದೆ. ಇದರಿಂದ ಬರುತ್ತಿರುವ ದುರ್ವಾಸನೆಯಿಂದಾಗಿ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗುತ್ತಿದೆ. ಇದು ಅವರ ಆರೋಗ್ಯದ ಮೇಲು ದುಷ್ಪರಿಣಾಮ ಬೀರುತ್ತಿದೆ. ಪಂಚಾಯಿತಿ ಅಧಿಕಾರಿಗಳು ಇದುವರೆಗೂ ಒಳಚರಂಡಿಯ ಸುವ್ಯವಸ್ಥೆಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಮುಂದಾಗಿಲ್ಲ. ಗ್ರಾಮಸ್ಥರು ಇದಕ್ಕೆ ಸಂಬಂಧಪಟ್ಟಂತೆ ಪತ್ರ ಕೂಡ ಬರೆದಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಈ ಕೂಡಲೇ ಸಮಸ್ಯೆ ಬಗೆಹರಿಸಲಿ.

–ಬಿ.ಎನ್.ಮಾನಸ, ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಕಟ್ಟಡಗಳು ಏಕೆ ಶಿಥಿಲಗೊಂಡಿರುತ್ತವೆ?



ಕೆಂಗಲ್ ಹನುಮಂತಯ್ಯ



ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ಲ್ಯಾಬ್ ಅಕ್ಟೋಬರ್ 21, 2022 ರಂದು ಕುಸಿಯಿತು

ಕರ್ನಾಟಕ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯು 2023–24ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ 460 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕೋಟಿಗಳಲ್ಲಿ ಬೃಹತ್ ಮೊತ್ತವನ್ನು ಬಿಡುಗಡೆ ಮಾಡಿದೆ. ಈ ಮೊತ್ತವನ್ನು ವೇತನೇತರ ಮತ್ತು ವೇತನ ವೆಚ್ಚದ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಈ ನಿಧಿಯಿಂದ ಆಯಾ ಕಾಲೇಜುಗಳ ಪ್ರಾಂಶುಪಾಲರು ಶೈಕ್ಷಣಿಕವಾಗಿ ಮತ್ತು ಮೂಲ ಸೌಕರ್ಯಗಳನ್ನು ಸುಧಾರಿಸುವಲ್ಲಿ ಕಾಲೇಜಿನ ಅಭಿವೃದ್ಧಿ ಮತ್ತು ಒಳಿತಿಗಾಗಿ ಹಣವನ್ನು ಬಳಸಿಕೊಳ್ಳಬೇಕೆಂದು ನಿರೀಕ್ಷಿಸಬಹುದು. ಆದರೆ..

ಸರ್ಕಾರಿ ಕಟ್ಟಡಗಳು ಸಾಮಾನ್ಯವಾಗಿ ಕಣ್ಣಿಗೆ ರಾಚುತ್ತವೆ. ಕಾಲಕಾಲಕ್ಕೆ ದುರಸ್ತಿ ಮತ್ತು ನಿರ್ವಹಣೆಯಿಲ್ಲದೆ ನಿರ್ಲಕ್ಷಿಸಲ್ಪಡುತ್ತವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇದರ ಪರಿಣಾಮವಾಗಿ, ವಿಶೇಷವಾಗಿ ಮಳೆಗಾಲದಲ್ಲಿ ಸರ್ಕಾರಿ ಕಟ್ಟಡಗಳು ಕುಸಿಯುವ ಅನೇಕ ಘಟನೆಗಳನ್ನು ನಾವು ನೋಡಿದ್ದೇವೆ. ನಗರದ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ (ಅಕ್ಟೋಬರ್ 21, 2022) ಕಟ್ಟಡದ ಒಂದು ಭಾಗ ಕುಸಿದಿರುವುದು ಇತ್ತೀಚಿನ ಉದಾಹರಣೆಯಾಗಿದೆ. ಈ ಕಾರಣಕ್ಕಾಗಿಯೇ ರಾಜ್ಯ ಸರ್ಕಾರವು 2023–24ನೇ ಸಾಲಿಗೆ ಇಷ್ಟೊಂದು ಅನುದಾನ ಮಂಜೂರು ಮಾಡಿದೆ.

ಕಟ್ಟಡಗಳ ನಿರ್ವಹಣೆ ಮತ್ತು ಮೂಲಸೌಕರ್ಯ ಒದಗಿಸುವ ಬಗ್ಗೆ ಸರ್ಕಾರದ ಸದುದ್ದೇಶ ಮತ್ತು ಕಾಳಜಿಯ ಹೊರತಾಗಿಯೂ ಇದು ಸಂಭವಿಸುತ್ತದೆ. ಹಾಗಾದರೆ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆಗೆ ಜವಾಬ್ದಾರರು ಯಾರು? ಕೆಲವೇ ಕೆಲವರನ್ನು ಬಿಟ್ಟರೆ ಈ ಕಾಲೇಜುಗಳ ಪ್ರಾಂಶುಪಾಲರು ಆ ನಿಧಿಯನ್ನು ನೀಡಿದ ಉದ್ದೇಶಕ್ಕೆ ಬಳಸಿಕೊಂಡಿಲ್ಲ. ಈ ಕಾಲೇಜುಗಳು ಹಣ ಬಳಸದ ಕಾರಣ ರೂ. 18.46 ಕೋಟಿಯನ್ನು ಹಣಕಾಸು ಇಲಾಖೆಗೆ ಹಿಂತಿರುಗಿಸಲಾಗಿದೆ.

ಈಗ 2024–25ನೇ ಶೈಕ್ಷಣಿಕ ವರ್ಷಕ್ಕೆ ಈ ಉದ್ದೇಶಕ್ಕಾಗಿ ಹಣವನ್ನು ಮಂಜೂರು ಮಾಡುವಾಗ (ಕಾಲೇಜುಗಳು ಕಳೆದ ವರ್ಷದ ಹಣವನ್ನು ಹಿಂದಿರುಗಿಸಿರುವುದರಿಂದ) ಹೆಚ್ಚಿನ ಹಣದ ಅಗತ್ಯವಿಲ್ಲ ಎಂಬ ಸ್ಪಷ್ಟ ಕಾರಣಕ್ಕಾಗಿ ಹಂಚಿಕೆಯ ಮೊತ್ತವನ್ನು ಕಡಿಮೆ ಮಾಡಲಾಗುತ್ತದೆ. ಮಾಮೂಲಿನಂತೆ, ನಿಧಿ ಬಳಕೆಯಾಗದ ಹಿನ್ನೆಲೆಯಲ್ಲಿ, ಕಾಲೇಜು ಶಿಕ್ಷಣ ಇಲಾಖೆಯು ಆಯಾ ಕಾಲೇಜುಗಳ ಪ್ರಾಂಶುಪಾಲರಿಂದ ಸಾಮಾನ್ಯ ರೀತಿಯಲ್ಲಿ ವಿವರಣೆಯನ್ನು ಕೇಳಿದೆ. ಅವರ ವಿವರಣೆ ಬಂದರೆ ಆಯಿತು. ಅಲ್ಲಿಗೆ ಇಲಾಖೆಯ ಜವಾಬ್ದಾರಿ ಮುಗಿದಂತೆ. ಅದನ್ನು ಒಂದು ಕಡತದಲ್ಲಿ ಭದ್ರವಾಗಿಟ್ಟರೆ ಕೆಲಸ ಮುಗಿದಂತೆ. ಆದರೆ ಪ್ರಶ್ನೆ: ಆ 400 ವಿವರಣೆಗಳನ್ನು ಯಾರು ಓದುತ್ತಾರೆ? ಇಲ್ಲಿ ವೈಫಲ್ಯ ಇರುವುದು ಪ್ರಾಂಶುಪಾಲರದ್ದಾದರೂ, ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯಸ್ಥರು ಕೇವಲ ತಾಂತ್ರಿಕವಾಗಿ ಕಾಗದದ ಮೇಲೆ ಮಾಡುವ ದಡ್ಡ ಕೆಲಸ. ಕಟ್ಟಡಗಳ ಸ್ಥಿತಿ ಅಧೋಗತಿ. ಮುಂದೊಂದು ದಿನ ಕುಸಿದು ಬೀಳುವವರೆಗೆ.

ಈ 460 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಈ ನಿಧಿಯನ್ನು ಹೇಗೆ ನಿಗದಿಪಡಿಸಲಾಗಿದೆ? ಅದಕ್ಕಿರುವ ಮಾನದಂಡವೇನು? ಇದು ಪ್ರತಿ ಕಾಲೇಜು ಮಾಡಿದ ಬೇಡಿಕೆಯಂತಿದ್ದರೆ, ಅವರಿಗೆ ಕೊಡಲಾದ ಹಣವನ್ನು ಬಳಕೆ ಮಾಡದಿರುವುದು ಆ ಪ್ರಾಂಶುಪಾಲರ ದೊಡ್ಡ ಬೇಜವಾಬ್ದಾರಿಯಾಗುತ್ತದೆ. ಇದು ಕರ್ತವ್ಯ ಲೋಪಕ್ಕೆ ಸಮನಾಗುತ್ತದೆ. ಇದು ನಿಗದಿತ ವಾರ್ಷಿಕ ಹಂಚಿಕೆಯಾಗಿದ್ದರೆ, ಒಟ್ಟು ಮೊತ್ತವನ್ನು 460 ಕಾಲೇಜುಗಳಿಗೆ ಕೆಲವು ನಿಯತಾಂಕಗಳ ಆಧಾರದ ಮೇಲೆ ಅಥವಾ ಸಮಾನವಾಗಿ ಹಂಚಲಾಗುತ್ತದೆ. ಆಗ ಪ್ರಾಂಶುಪಾಲರು ನಿಧಿಯನ್ನು ಬಳಸದಿರಲು ಉತ್ತಮ ಕಾರಣವನ್ನು ಹೊಂದಿರಬಹುದು. ಇಲ್ಲಿ, ಹಣವನ್ನು ಸರಿಯಾಗಿ ಬಳಸಲಾಗಿದೆಯೇ ಅಥವಾ ಅದನ್ನು ಏಕೆ ಬಳಸಲಾಗಿಲ್ಲ ಎಂಬುದನ್ನು ಪರಿಶೀಲಿಸಲು ಕಾಲೇಜುಗಳ

> **ಬಹುಶಃ ಇದೇ ಕಾರಣಕ್ಕಾಗಿಯೇ ನಾವು ಎಲ್ಲಾ ಸರ್ಕಾರಿ ಕಾಲೇಜುಗಳನ್ನು ಮಾಮೂಲು ಸುಣ್ಣ–ಬಣ್ಣವಿಲ್ಲದೆ ಶಿಥಿಲವಾದ, ಹಾಳಾಗುವ ಸ್ಥಿತಿಯಲ್ಲಿ ಕಾಣುತ್ತೇವೆ. ಪ್ರಾಂಶುಪಾಲರು ಲಭ್ಯವಿರುವ ಹಣವನ್ನು ಕನಿಷ್ಠ ಕಟ್ಟಡದ ನಿರ್ವಹಣೆಗೆ ಬಳಸಬಹುದಿತ್ತು ಮತ್ತು ಅಗತ್ಯವಿದ್ದರೆ ಹೆಚ್ಚಿನ ಹಣವನ್ನು ಕೇಳಬಹುದಿತ್ತು.**

ಮೇಲ್ವಿಚಾರಣೆ ಏಕೆ ಇಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಬಹುಶಃ ಇದೇ ಕಾರಣಕ್ಕಾಗಿಯೇ ನಾವು ಎಲ್ಲಾ ಸರ್ಕಾರಿ ಕಾಲೇಜುಗಳನ್ನು ಮಾಮೂಲು ಸುಣ್ಣ–ಬಣ್ಣವಿಲ್ಲದೆ ಶಿಥಿಲವಾದ, ಹಾಳಾಗುವ ಸ್ಥಿತಿಯಲ್ಲಿ ಕಾಣುತ್ತೇವೆ. ಪ್ರಾಂಶುಪಾಲರು ಲಭ್ಯವಿರುವ ಹಣವನ್ನು ಕನಿಷ್ಠ ಕಟ್ಟಡದ ನಿರ್ವಹಣೆಗೆ ಬಳಸಬಹುದಿತ್ತು ಮತ್ತು ಅಗತ್ಯವಿದ್ದರೆ ಹೆಚ್ಚಿನ ಹಣವನ್ನು ಕೇಳಬಹುದಿತ್ತು.

ಇಲ್ಲೊಂದು ಸಮಸ್ಯೆ ಪ್ರಾಂಶುಪಾಲರನ್ನು ಎದುರಾಗುವುದನ್ನು ನಾವು ಕಾಣುತ್ತೇವೆ. ಹಣಕಾಸಿನ ವಿಷಯ ಬಂದಾಗ ಏನನ್ನೂ ಮಾಡದಿರುವುದು ಸುರಕ್ಷಿತ ಎಂಬ ಅಭಿಪ್ರಾಯ ಕಾಲೇಜು ಮುಖ್ಯಸ್ಥರಲ್ಲಿದೆ. ಏಕೆಂದರೆ ಆರ್‌ಟಿಐ ಕಾರ್ಯಕರ್ತರ ಕಾಟ, ಹಣದ ದುರುಪಯೋಗದ ಆರೋಪಗಳು, ಅದರಿಂದಾಗಿ ಶಿಕ್ಷೆಯ ವರ್ಗಾವಣೆ ಅಥವಾ ನ್ಯಾಯಾಲಯದ ಪ್ರಕರಣಗಳು ಮೈಮೇಲೆ ಎಳೆದುಕೊಂಡಂತಾಗುತ್ತದೆ. ಯಾರಿಗೆ ಬೇಕಿದು?

ಆದ್ದರಿಂದ, ಇಲಾಖೆಯ ಕುರ್ಚಿಯಲ್ಲಿ ಆರಾಮಾಗಿ ಕುಳಿತು ಕೆಲಸ ಮಾಡುವ ಉನ್ನತ ಅಧಿಕಾರಶಾಹಿ ಅವರ ಕುರ್ಚಿ ಮತ್ತು ಮೇಜಿನ ಆಚೆಗೆ ನೋಡಬೇಕು, 400 ಕಾಲೇಜುಗಳಿಗೆ ಭೇಟಿ ನೀಡಲು ಅವರ ಅಧಿಕಾರಿಗಳನ್ನು ಕಳುಹಿಸಬೇಕು. ಪ್ರಾಂಶುಪಾಲರ ಕೆಲಸದ ಸ್ಥಳದಲ್ಲಿ ಅವರನ್ನು ಭೇಟಿ ಮಾಡಬೇಕು (ಪ್ರಾಂಶುಪಾಲರನ್ನು ಅಧಿಕಾರಶಾಹಿ ಅವರ ಕಚೇರಿಗೆ ಕರೆಯಬಾರದು). ವರದಿ ತರಿಸುವ, ವಿವರಣೆಗಾಗಿ ತಮ್ಮ ಕಚೇರಿಗೆ ಕರೆಯುವ ಈ ಹಳೆಯ ಅಭ್ಯಾಸ ನಿಲ್ಲಬೇಕು. ನಿಧಿಯನ್ನು ಒದಗಿಸಿದ ಉದ್ದೇಶವನ್ನು ಸಾಧಿಸಲು ಈ ಕ್ರಮ ಸಹಾಯ ಮಾಡುವುದಿಲ್ಲ.

ಈ ಶೈಲಿಯ ಕೆಲಸವು ಸರ್ಕಾರದ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಸಹಾಯ ಮಾಡುವುದಿಲ್ಲ. ಇದು ಇಲಾಖೆಯ ಉನ್ನತ ಅಧಿಕಾರಿಗಳಲ್ಲಿ ಯಾವುದೇ ದೂರದೃಷ್ಟಿ ಅಥವಾ ಜವಾಬ್ದಾರಿ ಇಲ್ಲ ಎಂಬುದನ್ನು ತೋರಿಸುತ್ತದೆ. ನಿಯಮ ಪುಸ್ತಕದ ಪ್ರಕಾರ ದಿನನಿತ್ಯದ ರೀತಿಯಲ್ಲಿ ಕೆಲಸ ಮಾಡುವುದು ಅವರಿಗೆ ತಿಳಿದಿರುವ ಮತ್ತು ನಮ್ಮ ಸರ್ಕಾರಿ ಅಧಿಕಾರಿಗಳು ಕೆಲಸ ಮಾಡುವ ವಿಧಾನವಾಗಿದೆ. **ಆದರೆ ನಮ್ಮ ಸ್ವಾತಂತ್ರ್ಯ ದೇಶದ ಉನ್ನತಿಗಾಗಿ ನಾವು ಹಳೇ ವಸಾಹತುಶಾಹಿ ನಿಯಮವನ್ನು ಬದಲಾಯಿಸಬೇಕು ಅಥವಾ ಕಚೇರಿಯ ಮಿತಿಯನ್ನು ಮೀರಿ ಹೋಗಬೇಕು. ಶಿಕ್ಷಣ ಇಲಾಖೆಯು ನಮ್ಮ ದೇಶದ ಆರೋಗ್ಯಕರ ಬೆಳವಣಿಗೆ ಮತ್ತು ವೇಗದ ಅಭಿವೃದ್ಧಿಗೆ ಅಗತ್ಯವಾದ ಮಾನವ ಸಂಪನ್ಮೂಲದ ನರ್ಸರಿ ಎಂಬುದನ್ನು ನೆನಪಿಸಿಕೊಳ್ಳಬೇಕು.**

ಕೆಂಗಲ್ ಹನುಮಂತಯ್ಯ ಅವರು 1952–1956ರ ಅವಧಿಯಲ್ಲಿ ಮೈಸೂರು ರಾಜ್ಯದ (ಈಗಿನ ಕರ್ನಾಟಕ) ಮುಖ್ಯಮಂತ್ರಿಯಾಗಿದ್ದರು. ಒಮ್ಮೆ ಅವರು ಡಿ.ಜವರೇಗೌಡ (ದೇಜಗೌ – ನಂತರ ಕಾಲೇಜು ಪ್ರಾಧ್ಯಾಪಕರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದವರು) ಅವರೊಂದಿಗೆ ಮೈಸೂರಿನ ಮೂಲಕ ಟಿ.ನರಸೀಪುರಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ, ಮುಖ್ಯಮಂತ್ರಿಯವರು ಒಂದು ಸರ್ಕಾರಿ ಶಾಲೆಯ ಮಾರ್ಗಸೂಚಿಯನ್ನು ನೋಡಿ ಕಾರನ್ನು ತಿರುಗಿಸಿ, ಆ ಹಳ್ಳಿಯ ರಸ್ತೆಯಲ್ಲಿ ಹೋಗುವಂತೆ ಚಾಲಕನಿಗೆ ಹೇಳಿದರು.

ದೇಜಗೌ ಅವರ ಪ್ರಕಾರ, ಮುಖ್ಯಮಂತ್ರಿಗೆ ಶಾಲೆಯ ಮುಖ್ಯೋಪಾಧ್ಯಾಯರು ಕಳುಹಿಸಿದ ಪತ್ರವು ಶಾಲೆಯ ಹೆಸರಿರುವ ಆ ಬೋರ್ಡ್ ಅನ್ನು ನೋಡಿದಾಗ ನೆನಪಾಯಿತು. ಆ ಪತ್ರದಲ್ಲಿ ಶಾಲಾ ಅಭಿವೃದ್ಧಿಗೆ ಕೆಲವು ಬೇಡಿಕೆಗಳನ್ನು ಸಲ್ಲಿಸಲಾಗಿತ್ತು. ಅದೃಷ್ಟವಶಾತ್ ಮುಖ್ಯೋಪಾಧ್ಯಾಯರು ಶಾಲೆಯಲ್ಲಿ ಹಾಜರಿದ್ದು, ಖುದ್ದು ಮುಖ್ಯಮಂತ್ರಿಯವರನ್ನು ನೋಡಿ ಬೆಚ್ಚಿಬಿದ್ದರು. ಅವರು ನಡುಗುತ್ತಿದ್ದರು. ಆದರೆ ಶೀಘ್ರದಲ್ಲೇ ಮುಖ್ಯಮಂತ್ರಿಗಳು ಅವರನ್ನು ಸಮಾಧಾನಪಡಿಸಿ ಶಾಲೆಯ ಬಗ್ಗೆ ಅವರಿಗಿರುವ ಕಾಳಜಿಗೆ ಅಭಿನಂದಿಸಿದರು. ಇಂದು ನಮಗೆ ಈ ರೀತಿ ಆತ್ಮಸಾಕ್ಷಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡುವ ಮುಖ್ಯೋಪಾಧ್ಯಾಯರು, ಪ್ರಾಂಶುಪಾಲರು ಮತ್ತು ಅಂತಹ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಮಂತ್ರಿಗಳು ಬೇಕಾಗಿದ್ದಾರೆ.

ಮೈಸೂರಿನ ಗದ್ದಿಗೆ ರಸ್ತೆಯಲ್ಲಿರುವ ಶಾಲೆಗೆ ಭೇಟಿ ನೀಡಿ ಒಬ್ಬ ಬಡ ಅಮಾಯಕ ಮುಖ್ಯೋಪಾಧ್ಯಾಯಿನಿಯನ್ನು ತರಾಟೆಗೆ ತೆಗೆದುಕೊಂಡು ಅವರನ್ನು ವರ್ಗಾವಣೆ ಮಾಡಿದ ಆಗಿನ ಶಾಸಕರ ಬಗ್ಗೆ ನನಗೆ ಗೊತ್ತು. ಈಗ ಅವರು ಮಂತ್ರಿಯಾಗಿದ್ದಾರೆ. ಆ ಮುಖ್ಯೋಪಾಧ್ಯಾಯಿನಿ ಮಾಡಿದ ಅಪರಾಧ: ರೋಟರಿ ಸಂಸ್ಥೆ ನೀಡಿದ ಎರಡು ತರಗತಿ ಕೊಠಡಿಗಳ ಉದ್ಘಾಟನೆಗೆ ಅವರನ್ನು ಆಹ್ವಾನಿಸಿರಲಿಲ್ಲ. ಇದು ಸುಮಾರು ಮೂರು ದಶಕಗಳ ಹಿಂದೆ. ಆ ಶಾಸಕ, ಆ ಮುಖ್ಯೋಪಾಧ್ಯಾಯಿನಿ ಆ ಶಾಲೆಗೆ ಎರಡು ಕೊಠಡಿಗಳನ್ನು ದಾನವಾಗಿ ಕೊಡಿಸಿದ್ದನ್ನು ಮೆಚ್ಚುವ ಬದಲು ಅವಳಿಗೆ ಶಿಕ್ಷೆ ಕೊಟ್ಟರು. ಆದರೆ ನಮ್ಮ ಇಂದಿನ ಆಡಳಿತಗಾರರ ಈ ರೀತಿಯ ಅಧಿಕಾರ ಚಲಾಯಿಸುವ ಶೈಲಿಯನ್ನು ಇಂದಿಗೂ ವಿವಿಧ ರೂಪಗಳಲ್ಲಿ ಕಾಣಬಹುದು. ಅಧಿಕಾರದಲ್ಲಿರುವ ಮನುಷ್ಯ ಬದಲಾದರೆ ಸಾಲದು. ಆ ಮನುಷ್ಯನ ಮನಸ್ಸು ಬದಲಾಗಬೇಕು.


e-mail: voice@starofmysore.com

ಇಂದು ಜೆಎಸ್‌ಎಸ್ ಕಾಲೇಜಿನಲ್ಲಿ 16ನೇ ಪದವೀಧರರ ದಿನಾಚರಣೆ

ಮೈಸೂರು,ಮೇ 21–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಸ್ವಾಯತ್ತ ಕಾಲೇಜಿನಲ್ಲಿ ಮೇ 22ರಂದು ಮಧ್ಯಾಹ್ನ 3 ಗಂಟೆಗೆ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಹದಿನಾರನೇ 'ಪದವೀಧರರ ದಿನಾಚರಣೆ'ಯನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಇಸ್ರೋದ ವಿಶ್ರಾಂತ ಅಧ್ಯಕ್ಷರೂ ಭಾರತ ಸರ್ಕಾರದ ಬಾಹ್ಯಾಕಾಶ ಆಯೋಗದ ಸದಸ್ಯರೂ ಆದ ಎ.ಎಸ್.ಕಿರಣ್‌ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪದವೀಧರರನ್ನು ಕುರಿತು ಭಾಷಣ ಮಾಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮೂಗೇಶಪ್ಪ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. 2022–23ರಲ್ಲಿ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸ್ನಾತಕ ವಿಭಾಗದ 383 ವಿದ್ಯಾರ್ಥಿಗಳು, 188 ವಿದ್ಯಾರ್ಥಿನಿಯರನ್ನೊಳಗೊಂಡಂತೆ ಒಟ್ಟು 571 ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿಭಾಗದ 190 ವಿದ್ಯಾರ್ಥಿಗಳು, 358 ವಿದ್ಯಾರ್ಥಿನಿಯರನ್ನೊಳಗೊಂಡಂತೆ 548 ಮಂದಿ ಸೇರಿ ಒಟ್ಟು 1119 ಪದವೀಧರರು ಭಾಗವಹಿಸಲಿದ್ದಾರೆ. ಅಲ್ಲದೆ, ವಿವಿಧ ಕೋರ್ಸುಗಳಲ್ಲಿ ಉನ್ನತ ಸ್ಥಾನ ಪಡೆದಿರುವ 67 ಪದವೀಧರರನ್ನು ಪುರಸ್ಕರಿಸಲಾಗುವುದು.

ಬಿಂದುಗೆ 581 ಅಂಕ



ಮೈಸೂರು: ಮೈಸೂರಿನ ಗೋಪಾಲಸ್ವಾಮಿ ಶಿಶು ವಿಹಾರದ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಬಿಂದು ಎ.581 (ಶೇ.96.8) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರಿನ ನಿವಾಸಿ ಆನಂದ್ ಮತ್ತು ಗೀತಾ ಆನಂದ್ ದಂಪತಿ ಪುತ್ರಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜೂನ್ 4ರಂದು ಕರ್ನಾಟಕಕ್ಕೆ ಮುಂಗಾರು ಮಳೆ ಪ್ರವೇಶ

ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆ ಸಾಧ್ಯತೆ

- ಪೂರ್ವ ಮುಂಗಾರಿನಲ್ಲಿ ವರುಣನ ಆರ್ಭಟ
- ಸುಡು ಬಿಸಿಲಿಗೆ ತಂಪೆರೆದ ವರುಣ
- ಮೇ 27ರವರೆಗೆ ನಿರಂತರ ಮಳೆ
- ಚಿಗುರೊಡೆದ ಹಸಿರು, ಕೃಷಿ ಚಟುವಟಿಕೆ ಚುರುಕು



ಮೈಸೂರು, ಮೇ21(ಬಿಎಲ್‌ಯು)– ಪೂರ್ವ ಮುಂಗಾರಿನಲ್ಲಿ ಮೈಸೂರು ಸೇರಿದಂತೆ ಕರ್ನಾಟಕದಲ್ಲಿ ಭರ್ಜರಿ ಮಳೆಯಾಗುತ್ತಿದ್ದು, ಜೂನ್ 4 ರಂದು ಮುಂಗಾರು (ಮಾನ್ಸೂನ್) ಮಾರುತ ಕರ್ನಾಟಕ ಪ್ರವೇಶಿಸಲಿದೆ.

ಕಳೆದ ವರ್ಷ ಬರಗಾಲದಿಂದ ತತ್ತರಿಸಿದ್ದ ರೈತಾಪಿ ವರ್ಗ ಸೇರಿದಂತೆ ಜನಸಾಮಾನ್ಯರು ಈ ಬಾರಿ ವರ್ಷಧಾರೆಯಿಂದ ಹರ್ಷರಾಗಿದ್ದಾರೆ. ಈ ಬಾರಿ ಪೂರ್ವ ಮುಂಗಾರು ಶುಭಾರಂಭದೊಂದಿಗೆ ಮಳೆಗಾಲ ಆರಂಭವಾಗಿದೆ.

ಕಳೆದ ಒಂದು ವಾರದಿಂದ ಪ್ರತಿದಿನ ಮಳೆಯಾಗುತ್ತಿದ್ದು, ನಿನ್ನೆ ಹಾಗೂ ಮೊನ್ನೆ ವರುಣ ಆರ್ಭಟಿಸಿದ್ದಾನೆ. ಕಳೆದ ವರ್ಷದ ಬರಗಾಲದಿಂದ ಭೂಮಿ ಬರಡಾಗಿ ಮೇವಿಲ್ಲದೆ ದನಕರುಗಳು ಕಂಗೆಟ್ಟಿದ್ದವು. ಅಂತರ್ಜಲ ಕುಸಿತವಾಗಿ ಬೋರ್‌ವೆಲ್‌ಗಳಲ್ಲಿ ಒಂದು ತೊಟ್ಟು ನೀರು ಬರದಂತಾಗಿತ್ತು. ಕುಡಿಯುವ ನೀರಿಗೆ ಜನರು ಹಾಹಾಕಾರಪಡುವಂತಾಗಿತ್ತು.

ಕಳೆದ ವರ್ಷ ಜೂನ್ 8ಕ್ಕೆ ಮುಂಗಾರು ಆರಂಭವಾಗಿತ್ತು. ಆದರೆ ಈ ಬಾರಿ 4 ದಿನ ಮುಂಚಿತವಾಗಿಯೇ ಮುಂಗಾರು ಕರ್ನಾಟಕ ಪ್ರವೇಶಿಸಲಿದೆ. ಬಂಗಾಳ ಕೊಲ್ಲಿಯ ಗಾಳಿಯ ಒತ್ತಡದಿಂದ ಪೂರ್ವ ಮುಂಗಾರು ಆರ್ಭಟಿಸಿದೆ. ಇದು ಗಂಟೆಗೆ 10ರಿಂದ 12 ಕಿಲೋಮೀಟರ್ ತನಕ ಬೀಸುತ್ತಿದೆ. ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಮೇ 27ರವರೆಗೆ ಹೀಗೆ ನಿರಂತರ ಮಳೆಯಾಗಲಿದೆ. ಬಂಗಾಳ ಕೊಲ್ಲಿಯಲ್ಲಿ ಗಾಳಿಯ ಒತ್ತಡ ಮತ್ತಷ್ಟು ಹೆಚ್ಚಾದರೆ ಸೈಕ್ಲೋನ್ ಆಗಿ ಪರಿವರ್ತನೆಗೊಳ್ಳಲಿದ್ದು, ಗಾಳಿಯ ಒತ್ತಡ ಗಂಟೆಗೆ 50ರಿಂದ 60 ಕಿಲೋಮೀಟರ್ ತನಕ ಬೀಸಲಿದೆ.

ಇದೇನೆ ಇರಲಿ, ಈ ಬಾರಿ ಪೂರ್ವ ಮುಂಗಾರಿನಲ್ಲೆ ಉತ್ತಮ ಮಳೆಯಾಗಿದೆ. ಇದರಿಂದ ಭೂಮಿ ಸಂತೃಪ್ತವಾಗಿದೆ. ಮೈಸೂರಿನಲ್ಲಿ ಕಳೆದ ತಿಂಗಳು ಎದುರಾದ ದಾಖಲೆ ಪ್ರಮಾಣದ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಿಂದ ಸುಡು ಬಿಸಿಲಿಗೆ ವರುಣ ಈಗ ತಂಪೆರೆದಿದ್ದಾನೆ. ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ಜನರಿಗೆ ತಂಪಾದ ಗಾಳಿಯ ಮುದ ನೀಡಿದೆ.

ಇದರ ನಡುವೆ ಮುಂಗಾರು ಮಳೆಯ ಶುಭಾರಂಭದ ಬಗ್ಗೆ ಕೂಡ ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಮೇ 31ಕ್ಕೆ ಮುಂಗಾರು ಮಾರುತ ಕೇರಳ ರಾಜ್ಯ ಪ್ರವೇಶಿಸಲಿದೆ. ಅದಾದ ಎರಡು ಮೂರು ದಿನಕ್ಕೆ ಮುಂಗಾರು ಕರ್ನಾಟಕ ಪ್ರವೇಶಿಸಲಿದೆ. ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆ ಪ್ರಕಾರ ಮೇ 4 ಅಥವಾ 5ರಂದು ಕರ್ನಾಟಕಕ್ಕೆ ಮುಂಗಾರು ಮಳೆಯ ಪಾದಾರ್ಪಣೆ ಮಾಡಲಿದೆ ಎಂದು ಮೈಸೂರಿನ ನಾಗನಹಳ್ಳಿಯ ಹವಾಮಾನ ಕ್ಷೇತ್ರ ವಿಭಾಗದ ಸಹ ಸಂಶೋಧಕ ಡಾ.ಸುಮಂತ್‌ಕುಮಾರ್ ತಿಳಿಸಿದ್ದಾರೆ.

ಕಳೆದ ವರ್ಷ ಜೂನ್ 8ಕ್ಕೆ ಮುಂಗಾರು ಆರಂಭವಾಗಿತ್ತು. ಆದರೆ ಈ ಬಾರಿ 4 ದಿನ ಮುಂಚಿತವಾಗಿಯೇ ಮುಂಗಾರು ಕರ್ನಾಟಕ ಪ್ರವೇಶಿಸಲಿದೆ. ಮಲೆನಾಡು ಹಾಗೂ ಕರಾವಳಿ ಭಾಗದ ಮೂಲಕ ಮುಂಗಾರು ಕರ್ನಾಟಕಕ್ಕೆ ಪ್ರವೇಶ ನೀಡಲಿದೆ. ತರುವಾಯ ಇಡೀ ಕರ್ನಾಟಕದಲ್ಲಿ ಮುಂಗಾರು ಮಳೆಯ ಸಿಂಚನವಾಗಲಿದೆ. ಪೂರ್ವ ಮುಂಗಾರಿನಲ್ಲೆ ಕೃಷಿ ಚಟುವಟಿಕೆ ಆರಂಭವಾಗಿದ್ದು, ಮುಂಗಾರು ಆರಂಭದೊಂದಿಗೆ ರೈತಾಪಿ ವರ್ಗದ ಕಾಯಕ ಮತ್ತಷ್ಟು ಚುರುಕುಗೊಳ್ಳಲಿದೆ.

ಮಳೆ ಇಲ್ಲದೆ ಹಣ್ಣು, ತರಕಾರಿ, ಸೊಪ್ಪಿನ ಬೆಲೆ ಗಗನಕ್ಕೇರಿತ್ತು. ಆದರೆ ಈ ಬಾರಿ ಉತ್ತಮ ಮಳೆಯಾಗುವ ಕಾರಣ ಆಹಾರ ಪದಾರ್ಥಗಳ ಬೆಲೆ ಕಡಿಮೆಯಾಗಲಿದೆ. ಇದರಿಂದ ಜನ ಸಾಮಾನ್ಯರು ಕೊಂಚ ಸಮಾಧಾನಗೊಳ್ಳಲಿದ್ದಾರೆ.

ಪೂರ್ವ ಮುಂಗಾರಿನಲ್ಲಿ ಕೊಡಗು ಜಿಲ್ಲಾದ್ಯಂತ ಭಾರಿ ಮಳೆ ಹಿನ್ನೆಲೆ

ಕೆಆರ್‌ಎಸ್‌ನಲ್ಲಿ 2 ಅಡಿ ನೀರು ಹೆಚ್ಚಳ



ಪೂರ್ವ ಮುಂಗಾರಿನಲ್ಲಿ ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕಳೆದ 24 ಗಂಟೆ ಅವಧಿಯಲ್ಲಿ 32.24 ಮಿಲಿ ಮೀಟರ್ ಮಳೆಯಾಗಿದೆ. ಕಳೆದ ವರ್ಷ ಬರಗಾಲ ಆವರಿಸಿದ್ದ ಕಾರಣ ಇದೇ ದಿನಕ್ಕೆ ಕೇವಲ 0.67 ಮಿಲಿ ಮೀಟರ್ ಮಳೆಯಾಗಿತ್ತು. ಆದರೆ ಈ ಬಾರಿ ವರುಣ ಕೃಪೆ ತೋರಿದ ಕಾರಣ ಉತ್ತಮ ಮಳೆಯಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ವರುಣ ಆರ್ಭಟಿಸುತ್ತಿರುವ ಕಾರಣ ಸಹಜವಾಗಿಯೇ ಮಂಡ್ಯದ ಕೃಷ್ಣರಾಜ ಸಾಗರಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚಾಗಿದೆ. ಒಂದು ವಾರದ ಅವಧಿಯಲ್ಲಿ ಕೆಆರ್‌ಎಸ್ ಜಲಾಶಯದಲ್ಲಿ 2 ಅಡಿಗಳಷ್ಟು ನೀರು ಹೆಚ್ಚಾಗಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 81 ಅಡಿಗಳಾಗಿದೆ. ಜಲಾಶಯಕ್ಕೆ 1832 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 72 ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ.

ಕೆಆರ್‌ಎಸ್ ಜಲಾಶಯದಲ್ಲಿ ಕಳೆದ ವಾರ 79 ಅಡಿಗಳಷ್ಟು ನೀರಿತ್ತು. ಮಳೆ ಲಕ್ಷಣಗಳು ಗೋಚರಿಸದ ಕಾರಣ ಕೆಆರ್‌ಎಸ್ ಜಲಾಶಯ ಮತ್ತಷ್ಟು ಪಾತಾಳಕ್ಕೆ ಇಳಿಯುವುದೇ ಎಂಬ ಆತಂಕ ಎದುರಾಗಿತ್ತು. ಕುಡಿಯುವ ನೀರಿಗೆ ಮತ್ತಷ್ಟು ತತ್ವಾರ ಉಂಟಾಗಲಿದೆ ಎಂಬ ಭಯ ಕಾಡಿತ್ತು. ಆದರೆ ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕಳೆದ ವಾರ 79 ಅಡಿ ಇದ್ದ ಕೆಆರ್‌ಎಸ್ ಜಲಾಶಯದ ಮಟ್ಟ ಈಗ 81 ಅಡಿಗೆ ಹೆಚ್ಚಾಗಿದೆ.

ನಿನ್ನೆ ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಾಗಿದ್ದು, ಆ ನೀರು ಕೆಆರ್‌ಎಸ್ ಜಲಾಶಯಕ್ಕೆ ಬಂದು ಸೇರಲು ಎರಡು ಮೂರು ದಿನವಾಗಿದೆ. ಇದರಿಂದ ಮುಂದಿನ ವಾರದ ವೇಳೆಗೆ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಮತ್ತಷ್ಟು ಹೆಚ್ಚಾಗುವುದು ನಿಶ್ಚಿತ.


ಜೂನ್ ಮೊದಲ ವಾರದಲ್ಲಿ ಮುಂಗಾರು ಮಳೆ ಕರ್ನಾಟಕ ಪ್ರವೇಶಿಸಿದರೆ ಕೊಡಗಿನಲ್ಲಿ ಮತ್ತಷ್ಟು ಮಳೆಯಾಗಲಿದೆ. ಆ ವೇಳೆ ಕೆಆರ್‌ಎಸ್‌ಗೆ ಒಳ ಹರಿವಿನ ಪ್ರಮಾಣ ಕೂಡ ಜಾಸ್ತಿಯಾಗಲಿದೆ.

ಕೇರಳದ ವೈನಾಡು ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ಮಳೆಯಾಗಿದೆ. ಇದರಿಂದ ಕಬಿನಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಸ್ವಲ್ಪ ಏರಿಕೆಯಾಗಿದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2284 ಅಡಿಗಳಾಗಿದ್ದು, ಇಂದು 2256 ಅಡಿಯಷ್ಟು ನೀರಿದೆ. ಜಲಾಶಯಕ್ಕೆ 841 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 300 ಕ್ಯೂಸೆಕ್ ನೀರು ಹೊರಗೆ ಬಿಡಲಾಗುತ್ತಿದೆ.

ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ಇದರಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ಜುಲೈ ವೇಳೆಗೆ ತುಂಬಿ ತುಳುಕುವ ಸಾಧ್ಯತೆ ಇದೆ.

ಧಾರಾಕಾರ ಮಳೆ ಪ್ರಭಾವ

ರಾಜ್ಯದಲ್ಲಿ ನೀಗಿದ ವಿದ್ಯುತ್ ಅಭಾವ



ಬೆಂಗಳೂರು, ಮೇ 21(ಕೆಎಂಶಿ)– ಕಳೆದ ಕೆಲವು ದಿನಗಳಿಂದ ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯಿಂದ ವಿದ್ಯುತ್ ಅಭಾವ ನೀಗಿದೆ. ಮುಂಗಾರು ಮತ್ತು ಹಿಂಗಾರು ಮಳೆ ಕೈಕೊಟ್ಟಿದ್ದರಿಂದ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಅಗಾಧವಾಗಿ ಹೆಚ್ಚಿತ್ತು.

ಗೃಹಜ್ಯೋತಿ ಯೋಜನೆ ಅನುಷ್ಠಾನ ಹಾಗೂ ಮಳೆ ಅಭಾವದಿಂದ ರಾಜ್ಯದಲ್ಲಿ 17 ಸಾವಿರ ಮೆಗಾವ್ಯಾಟ್‌ವರೆಗೂ ಬೇಡಿಕೆ ಹೆಚ್ಚಿ ದಾಖಲೆ ಸ್ಥಾಪಿಸಿತ್ತು. ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಅಗಾಧ ವಿದ್ಯುತ್ ಬೇಡಿಕೆ ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಈ ಸಂದರ್ಭದಲ್ಲಿ ಬೇಡಿಕೆ ಈಡೇರಿಸದಿದ್ದರೆ, ಆಡಳಿತಾರೂಢ ಕಾಂಗ್ರೆಸ್‌ಗೆ ಹಿನ್ನಡೆ ಉಂಟಾಗುತ್ತಿತ್ತು. ಇದನ್ನು ತಪ್ಪಿಸಲು ಮತ್ತು ಬೇಡಿಕೆ ಸರಿದೂಗಿಸಲು ವಿದ್ಯುತ್ ಹೆಚ್ಚು ಉತ್ಪಾದಿಸುವ ರಾಜ್ಯಗಳಿಂದ ಖರೀದಿಗೆ ಮುಂದಾಯಿತು.

ಛತ್ತೀಸ್‌ಘಡ, ತಮಿಳುನಾಡು, ಆಂಧ್ರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಗಣನೀಯ ಪ್ರಮಾಣದಲ್ಲಿ ರಾಜ್ಯ ಸರ್ಕಾರ ವಿದ್ಯುತ್ ಖರೀದಿ ಮಾಡಿತು, ಇಷ್ಟಾಗ್ಯೂ ಮೇ, ಜೂನ್ ಪರಿಸ್ಥಿತಿ ನಿಭಾಯಿಸಲಾಗದ ಕಷ್ಟಕ್ಕೆ ಸಿಲುಕಿತ್ತು. ಗೃಹ ಬಳಕೆ, ರೈತರ ಪಂಪ್‌ಸೆಟ್, ಕೈಗಾರಿಕಾ ವಲಯಗಳ ಬೇಡಿಕೆ ಪ್ರಮಾಣ ಪೂರೈಸಲು ಸಾಧ್ಯವಾಗದ ಸ್ಥಿತಿಗೆ ಸರ್ಕಾರ ತಲುಪಿತ್ತು.

ಮುಂಗಾರು ಕೈಕೊಟ್ಟಿದ್ದರಿಂದ ಲಿಂಗನಮಕ್ಕಿ ಸೇರಿದಂತೆ ಪ್ರಮುಖ ಜಲವಿದ್ಯುತ್ ಜಲಾಶಯಗಳಲ್ಲಿನ ನೀರಿನ ಸಂಗ್ರಹ ಪ್ರಮಾಣ ತೀರಾ ಕುಸಿದಿತ್ತು. ಶಾಖೋತ್ಪನ್ನ ಸ್ಥಾವರಗಳಿಂದ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಿದ ಸರ್ಕಾರ, ಮೇ, ಜೂನ್ ತಿಂಗಳಲ್ಲಿ ವಿದ್ಯುತ್ ಬೇಡಿಕೆ ತೀವ್ರವಾಗಿ ಹೆಚ್ಚಾಗುವ ನಿರೀಕ್ಷೆ ಹಿನ್ನೆಲೆಯಲ್ಲಿ ಈ ತಿಂಗಳುಗಳಲ್ಲಿ ಜಲವಿದ್ಯುತ್ ಘಟಕಗಳಿಂದ ಹೆಚ್ಚು ಉತ್ಪಾದನೆ ನಿರೀಕ್ಷಿಸಲಾಗಿತ್ತು.

ಹೊರ ರಾಜ್ಯಗಳಿಂದ ಖರೀದಿಸುವ ವಿದ್ಯುತ್ ಪ್ರಮಾಣವನ್ನೂ ಹೆಚ್ಚಿಸಲು ಕೆಲವು ರಾಜ್ಯಗಳೊಂದಿಗೆ ಮಾತುಕತೆ ನಡೆಸಲು ಇಂಧನ ಇಲಾಖೆ ಅಧಿಕಾರಿಗಳಿಗೆ ಸೂಚನೆ ಸಹಾ ರವಾನೆಯಾಗಿತ್ತು ಕಳೆದ ಕೆಲವು ದಿನಗಳಿಂದ ರಾಜ್ಯದ ಬಹುತೇಕ ಭಾಗಗಳಲ್ಲಿ ಮಳೆಯಾಗುತ್ತಿದ್ದು, ಕೃಷಿ ಪಂಪ್‌ಸೆಟ್ ಮತ್ತು ಗೃಹ ಬಳಕೆ ವಿದ್ಯುತ್ ಬೇಡಿಕೆ ಪ್ರಮಾಣದಲ್ಲಿ ಸುಮಾರು 3,000 ಮೆಗಾವ್ಯಾಟ್‌ಗಳಷ್ಟು ಕುಸಿತವಾಗಿದೆ. ಜೂನ್‌ನಲ್ಲಿ ಆರಂಭವಾಗಲಿರುವ ಮುಂಗಾರು ವಾಡಿಕೆಯಂತೆ ಇರಲಿದೆ. ಜೂನ್ ಮೊದಲ ವಾರ ಕೇರಳಕ್ಕೆ ಮುಂಗಾರು ಪ್ರವೇಶ ನಿರೀಕ್ಷಿಸಲಾಗಿದೆ, ಕಳೆದ ವರ್ಷದಂತೆ ಈ ವರ್ಷ ಮಳೆ ಕೊರತೆ ಇರುವುದಿಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೌಟುಂಬಿಕ ಕಲಹ ಹಿನ್ನೆಲೆ

ಸುತ್ತಿಗೆಯಿಂದ ತಲೆಗೆ ಹೊಡೆದು ಪತ್ನಿ ಹತ್ಯೆಗೈದ ಪತಿ

ಬನ್ನೂರು ಹೋಬಳಿ ತುರುಗನೂರಲ್ಲಿ ಸೋಮವಾರ ರಾತ್ರಿ ಘಟನೆ, ಅನಾಥವಾದ 9 ತಿಂಗಳ ಮಗು ಸೇರಿ ಇಬ್ಬರು ಹೆಣ್ಣು ಮಕ್ಕಳು, ತಲೆಮರೆಸಿಕೊಂಡಿರುವ ಆರೋಪಿಗಾಗಿ ಶೋಧ

ಮೈಸೂರು, ಮೇ 21(ಆರ್‌ಕೆ)–ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ವ್ಯಕ್ತಿಯೋರ್ವ ತನ್ನ ಪತ್ನಿಯನ್ನು ಸುತ್ತಿಗೆಯಿಂದ ತಲೆಗೆ ಹೊಡೆದು ಹತ್ಯೆಗೈದಿರುವ ಘಟನೆ ಬನ್ನೂರು ಹೋಬಳಿ ತುರುಗನೂರು ಗ್ರಾಮದಲ್ಲಿ ಸೋಮವಾರ ರಾತ್ರಿ ಸಂಭವಿಸಿದೆ.

ಗ್ರಾಮದ ನಿವಾಸಿ ನಂದೀಶ ಎಂಬುವರ ಪತ್ನಿ ವಿದ್ಯಾಶ್ರೀ(35) ಕೊಲೆಯಾದವರು. ಕಾಂಗ್ರೆಸ್ ಮುಖಂಡರೂ ಆದ ಆಕೆ, ಮೈಸೂರಿನ ಕೆ.ಆರ್.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದು, ಕೆಲ ಸಿನೆಮಾಗಳಲ್ಲೂ ನಟಿಸಿದ್ದಾರೆ. ಶ್ರೀರಾಂಪುರದವರಾದ ವಿದ್ಯಾಶ್ರೀ ಅವರನ್ನು ತುರುಗನೂರಿನ ನಂದೀಶ್‌ಗೆ ಕೊಟ್ಟು ಮದುವೆ ಮಾಡಲಾಗಿತ್ತು.

9 ತಿಂಗಳ ಹೆಣ್ಣು ಮಗು ಸೇರಿ ಇಬ್ಬರು ಪುತ್ರಿಯರನ್ನು ಹೊಂದಿದ್ದ ದಂಪತಿ ನಡುವೆ ಹಲವು ವರ್ಷಗಳಿಂದ ಸಾಮರಸ್ಯವಿರಲಿಲ್ಲ. ಆಗಿಂದಾಗ್ಗೆ ಸಾಂಸಾರಿಕ ವಿಷಯದಲ್ಲಿ ಜಗಳವಾಡಿಕೊಳ್ಳುತ್ತಿದ್ದ ಅವರಿಗೆ ಹಿರಿಯರು ಬುದ್ಧಿ ಹೇಳಿ ಸಾಮರಸ್ಯದಿಂದ ಜೀವನ ಸಾಗಿಸುವಂತೆ ಸಲಹೆ ನೀಡಿದ್ದರು. ಕಳೆದ ಮೂರು ವರ್ಷಗಳ ಹಿಂದೆ ವಿಚ್ಛೇದನ ಪಡೆದಿದ್ದ ವಿದ್ಯಾಶ್ರೀ ಮತ್ತು ನಂದೀಶ್ ಇತ್ತೀಚೆಗಷ್ಟೇ ಮತ್ತೆ ಒಂದಾಗಿದ್ದರು ಎನ್ನಲಾಗಿದೆ. ಸೋಮವಾರ ರಾತ್ರಿ ತುರುಗನೂರಿನ ಮನೆಗೆ ಬಂದ ನಂದೀಶ, ಜಗಳ ತೆಗೆದು ಕಡೆಗೆ ಸುತ್ತಿಗೆಯಿಂದ ಪತ್ನಿ ತಲೆಗೆ ಹೊಡೆದು ಕೊಲೆಗೈದು ಪರಾರಿಯಾಗಿದ್ದಾನೆ.



ವಿದ್ಯಾಶ್ರೀ

ವಿಷಯ ತಿಳಿಯುತ್ತಿದ್ದಂತೆಯೇ ರಾತ್ರಿ 12 ಗಂಟೆ ವೇಳೆಗೆ ಸ್ಥಳಕ್ಕೆ ತೆರಳಿದ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ಡಾ. ಬಿ.ಎನ್.ನಂದಿನಿ ಪರಿಶೀಲಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಬನ್ನೂರು ಠಾಣೆ ಪೊಲೀಸರು ಸ್ಥಳ ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಶವಾಗಾರಕ್ಕೆ ಸ್ಥಳಾಂತರಿಸಿದರು.

ತನಿಖೆ ಆರಂಭಿಸಿರುವ ಪೊಲೀಸರು, ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗೆ ತೀವ್ರ ಶೋಧ ನಡೆಸುತ್ತಿದ್ದಾರೆ. ವಿದ್ಯಾಶ್ರೀ ಹತ್ಯೆಯಿಂದಾಗಿ 9 ತಿಂಗಳ ಮಗು ಸೇರಿ ಇಬ್ಬರು ಹೆಣ್ಣು ಮಕ್ಕಳು ಅನಾಥರಾದಂತಾಗಿದೆ

ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ

ದೇಶದ 15 ಕಡೆ ಎನ್‌ಐಎ ದಾಳಿ



ಬೆಂಗಳೂರು, ಮೇ 21(ಕೆಎಂಶಿ)– ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ನಗರದ ಕುಮಾರಸ್ವಾಮಿ ಲೇಔಟ್, ಬನಶಂಕರಿ ಸೇರಿದಂತೆ ದೇಶಾದ್ಯಂತ 15 ಕಡೆ ಏಕಕಾಲಕ್ಕೆ ದಾಳಿ ನಡೆಸಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ಉಗ್ರರ ಜೊತೆ ಸಂಪರ್ಕ ಹೊಂದಿದ್ದವರ ಬೆಂಗಳೂರಿನಲ್ಲಿನ ನಾಲ್ಕು ಸ್ಥಳಗಳ ಮೇಲೆ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಪ್ರಕರಣ ಸಂಬಂಧ ಬೆಂಗಳೂರು ಮಾತ್ರವಲ್ಲದೆ, ಕೊಯಮತ್ತೂರಿನ ವೈದ್ಯ ಜಾಫರ್ ಇಕ್ಬಾಲ್ ಮತ್ತು ನಯನ್ ಸಾದಿಕ್ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ.

ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳಾದ ಅಬ್ದುಲ್ ಮತೀನ್ ತಾಹ ಮತ್ತು ಮುಸಾವಿರ್ ಹುಸೇನ್ ಶಾಜಿಬ್‌ಗೆ ಸಹಾಯ ಮಾಡಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಹಾಗೂ ಬನಶಂಕರಿಯ ಒಟ್ಟು 4 ಸ್ಥಳಗಳ ಮೇಲೆ ಎನ್‌ಐಎ ದಾಳಿ ಮಾಡಿ ದಾಖಲೆಗಳನ್ನು ಪಡೆದುಕೊಂಡಿದೆ.

ಉಗ್ರ ಮತೀನ್ ಬೆಂಗಳೂರಿಗೆ ಬಂದಾಗ ಸಹಾಯ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಆತನೊಂದಿಗೆ ಸಂಪರ್ಕಕ್ಕೆ ಬಂದಿದ್ದವರ ಮನೆ ಹಾಗೂ ವಾಸಸ್ಥಳದ ಮೇಲೆ ದಾಳಿ ಮಾಡಲಾಗಿದೆ. ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ನಂತರ ಕೋಲ್ಕತ್ತಾದಲ್ಲಿ ತಲೆಮರೆಸಿಕೊಂಡಿದ್ದ ಉಗ್ರರಾದ ಪ್ರಕರಣದ ಮಾಸ್ಟರ್ ಮೈಂಡ್ ಮತೀನ್ ತಾಹ ಹಾಗೂ ಬಾಂಬ್ ಇರಿಸಿದ್ದ ಮುಸಾವಿರ್ ಶಾಜಿಬ್‌ನನ್ನು ಎನ್‌ಐಎ ಬಂಧಿಸಿತ್ತು.

ನಾಳೆ ಮೈಸೂರಲ್ಲಿ ಬಿವಿಎಸ್‌ಎಸ್ ವಿದ್ಯೋದಯ ಶಾಲೆ ಉದ್ಘಾಟನೆ



ಬಿವಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಾಸುದೇವ ಭಟ್ ಮಾತನಾಡಿದರು.

ಮೈಸೂರು, ಮೇ 21(ಜಿಎ)–ವೈ.ಕೆ. ಅಮೃತಾಭಾಯಿ, ಎಸ್.ಕೆ.ಸುರಾಮಭಾಯಿ ಭಗಿನಿ ಸೇವಾ ಸಮಾಜ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಾಗೂ ಶ್ರೀ ವಿಜಯ ವಿಠ್ಠಲ ವಿದ್ಯಾ ಪ್ರತಿಷ್ಠಾನದ ಸಹಯೋಗದಲ್ಲಿ ಕೃಷ್ಣಮೂರ್ತಿಪುರಂನಲ್ಲಿ ನಿರ್ಮಾಣಗೊಂಡಿರುವ ಬಿವಿಎಸ್‌ಎಸ್ ವಿದ್ಯೋದಯ ಶಾಲೆಯ ಉದ್ಘಾಟನೆಯು ಮೇ 23ರಂದು ಸಂಜೆ 5 ಗಂಟೆಗೆ ನಡೆಯಲಿದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್ ತಿಳಿಸಿದರು.

ಸಂಸ್ಥೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಡುಪಿ ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಅಮೃತಾ ಭಾಯಿ ಅವರು 1923ರಲ್ಲಿ ಸ್ಥಾಪಿಸಿದ ಶಿಕ್ಷಣ ಸಂಸ್ಥೆ ಇದೀಗ ಹೊಸ ಕಟ್ಟಡ ಹಾಗೂ ವ್ಯವಸ್ಥೆಯೊಂದಿಗೆ ಲೋಕಾರ್ಪಣೆಗೊಳ್ಳುತ್ತಿದೆ. ಆರಂಭದಲ್ಲಿ ಪ್ರೀ ಎಲ್‌ಕೆಜಿಯಿಂದ 5ನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲಾಗುತ್ತಿದ್ದು, 150 ವಿದ್ಯಾರ್ಥಿಗಳು ದಾಖಲಾಗಿದ್ದರೆ. ಆಗಸ್ಟ್‌ವರೆಗೆ ದಾಖಲಾತಿಗೆ ಅವಕಾಶವಿದ್ದು, ಒಟ್ಟು 250ರಷ್ಟು ವಿದ್ಯಾರ್ಥಿಗಳು ದಾಖಲಾಗುವ ವಿಶ್ವಾಸವಿದೆ ಎಂದು ತಿಳಿಸಿದರು.

ಸಂಸ್ಥೆಯಲ್ಲಿ ಹೊಸ ಶಿಕ್ಷಣ ನೀತಿ (ಎನ್‌ಇಪಿ)ಯ ಪಠ್ಯಕ್ರಮಕ್ಕೆ ಬೇಕಾದ ವ್ಯವಸ್ಥೆಗಳನ್ನೂ ಅಳವಡಿಸಿಕೊಳ್ಳಲಾಗಿದೆ. ಮುಂದಿನ ವರ್ಷದಿಂದ ಸಿಬಿಎಸ್‌ಸಿ ತರಗತಿಗಳು ನಡೆಯಲಿವೆ. ಪಠ್ಯದ ಜೊತೆಗೆ ಯೋಗ, ಭಜನೆ, ಚಿತ್ರಕಲೆ, ಸಂಗೀತ ತರಬೇತಿ ನೀಡಲಿದ್ದು, ಅದಕ್ಕಾಗಿಯೇ ಚಟುವಟಿಕೆ ಕೊಠಡಿ, ಧ್ಯಾನ ಕೊಠಡಿ ನಿರ್ಮಿಸಲಾಗಿದೆ. 11 ಶಿಕ್ಷಕರ ಸಹಿತ ಒಟ್ಟು 27 ಶಿಕ್ಷಕರೊಂದಿಗೆ ಈ ಶೈಕ್ಷಣಿಕ ವರ್ಷ ಮುನ್ನಡೆಯಲಿದೆ. ಮುಂದಿನ ವರ್ಷದಿಂದ 8ನೇ ತರಗತಿಯನ್ನೂ ಆರಂಭಿಸುವ ಯೋಜನೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕೋಶಾಧಿಕಾರಿ ಎಚ್.ಟಿ.ಸ್ವರ್ಣಕುಮಾರ್, ಟ್ರಸ್ಟಿ ಮುರಳೀಧರ ಭಟ್, ಪ್ರಾಂಶುಪಾಲ ಪವನ್ ಕುಮಾರ್ ಉಪಸ್ಥಿತರಿದ್ದರು.

ಅಭಿನಯಕ್ಕಾಗಿ ಕಲಾವಿದರಿಂದ ಅರ್ಜಿ ಆಹ್ವಾನ

ಮೈಸೂರು, ಮೇ 21– ಅದಮ್ಯ ರಂಗಶಾಲೆಯು ಕಳೆದ ಎಂಟು ವರ್ಷಗಳಿಂದ ಮೈಸೂರಿನಲ್ಲಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ವಯಸ್ಕರ ಮತ್ತು ಮಕ್ಕಳ ರಂಗಭೂಮಿಗೆ ಅಪಾರ ಕೊಡುಗೆ ನೀಡುತ್ತಾ ಬರುತ್ತಿದೆ. ಅದಮ್ಯದ ಮುಂದಿನ ಭಾಗವಾಗಿ 30 ದಿನಗಳ ಅವಧಿಯ ಅಭಿನಯ ತರಬೇತಿ ಮತ್ತು ಕಲಾತ್ಮಕ ಚಲನಚಿತ್ರ ತಯಾರಿ ಮತ್ತು ಚಿತ್ರೀಕರಣ ಮೇ 27ರಂದು ಪ್ರಾರಂಭವಾಗಲಿದೆ.

ಅಭಿನಯ ತರಬೇತಿ, ಧ್ವನಿ ಮುದ್ರಣ, ಪ್ರಸಾದನ, ಸಂಕಲನ ಸೇರಿದಂತೆ ಸಿನಿಮಾ ಮಾಧ್ಯಮದ ಬೇರೆ ಬೇರೆ ಆಯಾಮಗಳ ಕುರಿತು ಪರಿಚಯಾತ್ಮಕ ಪ್ರಾಯೋಗಿಕ ತರಗತಿಗಳು ನಡೆಯಲಿದ್ದು, ನುರಿತ ನಿರ್ದೇಶಕರು ಮತ್ತು ಚಲನಚಿತ್ರ ಕಲಾವಿದರು ತರಬೇತಿ ನೀಡಲಿದ್ದಾರೆ.

ಕಾರ್ಯಾಗಾರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳ ತೊಡಗಿಸಿ ಕಲಾತ್ಮಕ ಸಿನಿಮಾ ತಯಾರಾಗಲಿದ್ದು, ಪ್ರತಿದಿನ ಸಂಜೆ 6.30ರಿಂದ 9ರವರೆಗೂ ಚಿತ್ರೀಕರಣ ನಡೆಯಲಿದೆ. ಮೊದಲು ನೋಂದಣಿ ಮಾಡಿಕೊಂಡ ಗರಿಷ್ಠ 30 ಮಂದಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು.

ವಯೋಮಿತಿ 16ರಿಂದ 50 ವರ್ಷ. ಮಾಹಿತಿಗೆ ರಂಗಶಾಲೆ ಕಾರ್ಯದರ್ಶಿ ಚಂದ್ರು ಮಂಡ್ಯ ಅವರ ಮೊ. ಸಂಖ್ಯೆ 8660103141 ಸಂಪರ್ಕಿಸಬಹುದು.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಮೇ 21– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 23ರಂದು ಬೆಳಗ್ಗೆ 10ರಿಂದ ಸಂಜೆ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 21(ಎಂಟಿವೈ)–ದಿ ಮೈಸೂರು ಮರ್ಚೆಂಟ್ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಾಗೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಲಾ 20 ವಿದ್ಯಾರ್ಥಿಗಳಿಗೆ ತಲಾ 5 ಸಾವಿರ ರೂ. ನಗದು ಪುರಸ್ಕಾರ ನೀಡಲಾಗುವುದು. ಅಂತೆಯೇ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಕ್ರೀಡೆಯಲ್ಲಿ ಉತ್ತಮ ಸಾಧನೆ ತೋರಿದ ಸಂಘದ ಸದಸ್ಯರ ಮೂವರು ಮಕ್ಕಳಿಗೆ ತಲಾ 5 ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುವುದು. ಆಸಕ್ತರು ಅರ್ಜಿಗಳನ್ನು ವಿದ್ಯಾರ್ಥಿಗಳ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಜೂ. 5ರೊಳಗೆ ಮೈಸೂರಿನ ಜಗನ್ಮೋಹನ ಅರಮನೆ ರಸ್ತೆಯಲ್ಲಿರುವ ಬ್ಯಾಂಕ್ ಕಚೇರಿಗೆ ಸಲ್ಲಿಸಬೇಕು ಎಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ರುಚಿತಾಗೆ 563 ಅಂಕ



ಮೈಸೂರು: ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಟೆರೇಷಿಯನ್ ಕಾನ್ವೆಂಟ್ ಬಾಲಕಿಯರ ಪ್ರೌಢಶಾಲೆ ವಿದ್ಯಾರ್ಥಿ ಎಸ್.ರುಚಿತಾ 563 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕೆ.ಆರ್.ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾದಿಂದ ಎಸ್‌ಎಸ್‌ಎಲ್‌ಸಿ ಸಾಧಕ ವಿದ್ಯಾರ್ಥಿನಿಯರಿಗೆ ಸನ್ಮಾನ



ಮೈಸೂರು, ಮೇ 21–ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸಾಧನೆಗೈಯಲು ವಿದ್ಯಾರ್ಥಿಗಳಿಗೆ ಬೇಕಿರುವುದು ಅಚಲ ವಿಶ್ವಾಸ, ದೃಢ ನಂಬಿಕೆ ಎಂದು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಗರದ ರಾಮಾನುಜ ರಸ್ತೆಯಲ್ಲಿರುವ ಕೆ.ಆರ್.ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಕೆ.ಆರ್.ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸರ್ವಮಂಗಳ ನೇತೃತ್ವದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಡಿ.ಎಸ್. ಧನ್ವಿ (ಶೇ.99.68), ಭೂಮಿಕಾ ಆರ್ (ಶೇ.99.36), ಯಮುನಾ ಎಂ. (ಶೇ.96.16), ಯಶಸ್ವಿನಿ ಎಂ. (ಶೇ.94.24), ನಯನ (ಶೇ.90.56) ಅವರನ್ನು ಸನ್ಮಾನಿಸಿ, ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮೊಬೈಲ್‌ಗಳನ್ನು ತಮಗೆ ಬೇಕಾದಷ್ಟು ಮಾತ್ರ ಉಪಯೋಗಿಸಿ, ಹೆಚ್ಚು ಅಭ್ಯಾಸದತ್ತ ಗಮನ ಹರಿಸಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು

ಇದೇ ವೇಳೆ ಕೆಆರ್ ಕ್ಷೇತ್ರ ಮಂಡಲದ ಅಧ್ಯಕ್ಷ ಗೋಪಾಲ್‌ರಾಜ್ ಅರಸ್, ಕೆ.ಆರ್. ಕ್ಷೇತ್ರದ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಯರಾಮ್, ಕೆಆರ್ ಕ್ಷೇತ್ರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ರೂಪ, ಆಶಾ ಲಕ್ಷ್ಮಿ ನಾರಾಯಣ್, ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಮಹಿಳಾ ಮೋರ್ಚಾ ಪದಾಧಿಕಾರಿಗಳು, ವಿದ್ಯಾರ್ಥಿಗಳ ಪೋಷಕರು ಹಾಜರಿದ್ದರು.

ಶೀಘ್ರದಲ್ಲೇ ಸ್ಥಳೀಯ ಸಂಸ್ಥೆಗಳ ಚುನಾವಣೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಬೆಂಗಳೂರು, ಮೇ 21(ಕೆಎಂಶಿ)– ಜಿಲ್ಲಾ, ತಾಲೂಕು ಪಂಚಾಯತ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಶೀಘ್ರದಲ್ಲೇ ಚುನಾವಣೆ ನಡೆಸಿ ಜನರಿಗೆ ಅಧಿಕಾರ ಕೊಡುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶೀಘ್ರದಲ್ಲೇ ಚುನಾವಣೆ ನಡೆಸಲಾಗುವುದು, ಪಕ್ಷದ ನಾಯಕರು, ಕಾರ್ಯಕರ್ತರು ಸಿದ್ಧರಾಗಿ ಎಂದು ಕರೆ ನೀಡಿದರು.

ತೆರವಾಗಿರುವ ಸ್ಥಳೀಯ ಸಂಸ್ಥೆಗಳಿಗೆ ಹಿಂದಿನ ಬಿಜೆಪಿ ಆಡಳಿತ ಚುನಾವಣೆ ನಡೆಸದೆ, ಜನರಿಗೆ ಇದ್ದ ಅಧಿಕಾರವನ್ನು ಕಸಿದುಕೊಂಡಿತ್ತು. ಇರುವ ಕಾನೂನು ತೊಡಕುಗಳನ್ನು ನಿವಾರಿಸಿ ನಾವು ಚುನಾವಣೆ ನಡೆಸುತ್ತೇವೆ, ನೀವು ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕರಾಗಲು ಈ ಚುನಾವಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅಧಿಕಾರ ಪಡೆಯುವ ಜೊತೆಗೆ ಪಕ್ಷಕ್ಕೂ ನ್ಯಾಯ ದೊರಕಿಸಿ. ನಾನು ಇನ್ನೆಷ್ಟು ದಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷನಾಗಿರುತ್ತೇನೋ ಗೊತ್ತಿಲ್ಲ, ಅಷ್ಟರೊಳಗೆ ಪಕ್ಷಕ್ಕೆ ದುಡಿದ ಕಾರ್ಯಕರ್ತರಿಗೆ ಅಧಿಕಾರ ಕೊಡಿಸುತ್ತೇನೆ.

ಪಂಡಿತ್ ಜವಾಹರ್‌ಲಾಲ್ ನೆಹರು, ರಾಜಗೋಪಾಲಾಚಾರಿ, ಕೆಂಗಲ್ ಹನುಮಂತಯ್ಯ, ಬಿ.ಡಿ.ಜತ್ತಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಅನೇಕ ನಾಯಕರು ಕೆಳಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಬೆಳೆದವರು.

ಸಂಘಟನೆ ಬಲಗೊಳಿಸಬೇಕು, ಪಕ್ಷದ ಎಲ್ಲಾ ಘಟಕಗಳನ್ನು ವಿಸರ್ಜಿಸಿ ಹೊಸದಾಗಿ ರಚಿಸುವ ಸಮಯ ಬಂದಿದೆ, ಮೊದಲು ಪಕ್ಷದ ಕೆಲಸ ಮಾಡಬೇಕು, ಕೇವಲ ಗುರುತಿನ ಚೀಟಿಗೋಸ್ಕರ ಬರುವವರು ಮನೆಯಲ್ಲಿಯೇ ಇರಿ ಎಂದರು.

ಖಾದಿ ಬಟ್ಟೆ ಹಾಕಿಕೊಂಡು, ಕಾರು ಇಟ್ಟುಕೊಂಡು ಎಂಎಲ್‌ಸಿ ಮಾಡಿ, ಅಧ್ಯಕ್ಷನನ್ನಾಗಿ ಮಾಡಿ ಎಂದರೆ ಅದು ಇಲ್ಲಿ ನಡೆಯುವುದಿಲ್ಲ, ಕೆಲಸ ಮಾಡುವವರಿಗೆ ಆದ್ಯತೆ, ನಿಮ್ಮ ಬೂತ್ ಮಟ್ಟದಲ್ಲಿ ಪಕ್ಷಕ್ಕೆ ಹೆಚ್ಚಿನ ಮತ ತಂದು ನಾಯಕತ್ವಕ್ಕೆ ಬೇಡಿಕೆ ಇಡಬೇಕು, ನಿಮ್ಮ ಬೂತ್‌ಗಳಲ್ಲಿ ಪಕ್ಷಕ್ಕೆ ಮುನ್ನಡೆ ತರಲು ಆಗದಿದ್ದರೆ ನಾವು ಬೇರೆಯವರನ್ನು ತಯಾರು ಮಾಡುತ್ತೇವೆ ಎಂದು ಎಚ್ಚರಿಸಿದರು.

ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟು ಹೋಗುವ ಮುನ್ನ ಪಕ್ಷದ ಸಂಘಟನೆಗೆ ಭದ್ರ ಬುನಾದಿ ಹಾಕಿಕೊಡುವ ಕೆಲಸ ಮಾಡುತ್ತೇನೆ, ಈ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇನೆ, ಮುಂದಿನ 3–4 ತಿಂಗಳಲ್ಲಿ ಕಾರ್ಯಯೋಜನೆ ಸಿದ್ಧಪಡಿಸುತ್ತೇವೆ, ನೀವೆಲ್ಲರೂ ಸಿದ್ಧರಾಗಿ ಎಂದರು.

ಜಿಲ್ಲಾ, ತಾಲೂಕು ಪಂಚಾಯತ್‌ಗಳಲ್ಲದೆ, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ಜೊತೆಗೆ ಇನ್ನೂ ಕೆಲವು ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದು 2–3 ವರ್ಷಗಳೇ ಆಗಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜನ ನಮಗೆ ಅಧಿಕಾರ ನೀಡಿದ್ದಾರೆ, ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲೂ ನಮ್ಮನ್ನು ಕೈಬಿಡುವುದಿಲ್ಲ ಎಂದು ನಂಬಿದ್ದೇವೆ. ಲೋಕಸಭಾ ಚುನಾವಣಾ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸಿದ್ಧವಾಗಲಿದ್ದೇವೆ. ನೀವು ಈಗಿನಿಂದಲೇ ಚುನಾವಣಾ ಹೋರಾಟಕ್ಕೆ ಸಿದ್ಧರಾಗಿ ಎಂದು ಕಾರ್ಯಕರ್ತರು ಹಾಗೂ ಮುಖಂಡರಿಗೆ ಡಿ.ಕೆ.ಶಿವಕುಮಾರ್ ಕರೆ ನಿಡಿದರು.

ಮೈಸೂರು ಮಿತ್ರ ಬುಧವಾರ 22 ಮೇ 2024

ಕೆರಗೋಡು ಅರ್ಜುನ ಸ್ತಂಭದಲ್ಲಿ ಹೊಸ ರಾಷ್ಟ್ರಧ್ವಜ ಹಾರಾಟ

ಮಂಡ್ಯ, ಮೇ 21– ಹನುಮಧ್ವಜ ವಿವಾದ ಭುಗಿಲೆದ್ದಿದ್ದ ಕೆರಗೋಡು ಗ್ರಾಮದ ಅರ್ಜುನ ಸ್ತಂಭದಲ್ಲಿ ಮಂಗಳವಾರ ಹೊಸದಾಗಿ ರಾಷ್ಟ್ರ ಧ್ವಜಾರೋಹಣ ಮಾಡಲಾಯಿತು.



ಇದೀಗ ಜಿಲ್ಲಾಡಳಿತ ಹಳೆಯ ರಾಷ್ಟ್ರಧ್ವಜವನ್ನು ಬದಲಾಯಿಸಿ ಹೊಸ ರಾಷ್ಟ್ರ ಧ್ವಜಾರೋಹಣ ಮಾಡಲಾಗಿದ್ದು, ಕಳೆದ ಜನವರಿ 22ರ ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ನೆನಪಿಗಾಗಿ ಕೆರಗೋಡಿನಲ್ಲಿ 108 ಅಡಿ ಎತ್ತರದ ಅರ್ಜುನ ಸ್ತಂಭದ ಮೇಲೆ ಹನುಮ ಧ್ವಜ ಹಾರಿಸಿದ್ದು ವಿವಾದ ಸೃಷ್ಟಿಸಿತ್ತು.

ಹನುಮ ಧ್ವಜವನ್ನು ಸರ್ಕಾರ ತೆರವುಗೊಳಿಸಿ, ತ್ರಿವರ್ಣ ಧ್ವಜ ಹಾರಿಸಿತ್ತು. ಹನುಮ ಧ್ವಜ ತೆರವುಗೊಳಿಸಿದ್ದಕ್ಕೆ ಗ್ರಾಮಸ್ಥರು, ಹಿಂದೂ ಸಂಘಟನೆಗಳು ಮತ್ತು ಬಿಜೆಪಿ ನಾಯಕರು ವಿರೋಧ ವ್ಯಕ್ತಪಡಿಸಿದ್ದರು. ಜಿಲ್ಲಾಡಳಿತ ಮಂಗಳವಾರ ಬೆಳ್ಳಂಬೆಳಗ್ಗೆ ಬಿಗಿ ಪೊಲೀಸ್ ಭದ್ರತೆಯಲ್ಲಿ ಅಪರ ಜಿಲ್ಲಾಧಿಕಾರಿ ನಾಗರಾಜು ಧ್ವಜಾರೋಹಣ ನೆರವೇರಿಸಿದರು.

ಧ್ವಜಾರೋಹಣ ಬಳಿಕ ಮಾತನಾಡಿದ ಅವರು, ಕೆರಗೋಡು ಗ್ರಾಮದಲ್ಲಿ ಹಿಂದೆ ರಾಷ್ಟ್ರಧ್ವಜ ಹಾರಿಸಲಾಗಿತ್ತು. ಗಾಳಿಗೆ ಧ್ವಜ ಗಂಟಾಗಿ ಸರಿಯಾದ ರೀತಿಯಲ್ಲಿ ಹಾರುತ್ತಿರಲಿಲ್ಲ. ಹೀಗಾಗಿ ಹಳೆಯ ಧ್ವಜ ಬದಲಿಸಿ ಹೊಸ ಧ್ವಜ ಹಾರಿಸಲಾಗಿದೆ. ಹಿಂದೆ ಇದ್ದ ಧ್ವಜದ ಅಳತೆಯಲ್ಲೇ, ಈಗ ಹೊಸ ರಾಷ್ಟ್ರ ಧ್ವಜ ಹಾಕಲಾಗಿದೆ. ಮುಂದಿನ ದಿನಗಳಲ್ಲಿ ದೊಡ್ಡ ರಾಷ್ಟ್ರ ಧ್ವಜ ಹಾರಿಸುತ್ತೇವೆ ಎಂದರು.

ಜಿಲ್ಲಾಡಳಿತದ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದು, ಇಷ್ಟು ದೊಡ್ಡ ಧ್ವಜ ಸ್ತಂಭಕ್ಕೆ ಚಿಕ್ಕ ರಾಷ್ಟ್ರಧ್ವಜ ಸಲ್ಲದು. ಜಿಲ್ಲಾಡಳಿತ ಹಾರಿಸಿದ ರಾಷ್ಟ್ರಧ್ವಜ ಅಸಮಾಧಾನ ತಂದಿದೆ. ದೊಡ್ಡ ರಾಷ್ಟ್ರಧ್ವಜ ಹಾರಿಸುವಂತೆ ಅಧಿಕಾರಿಗಳಿಗೂ ಮನವಿ ಮಾಡಿದ್ದೇವೆ. ತರಾತುರಿಯಾಗಿ ಹೊಸ ಧ್ವಜ ಹಾರಿಸಿದ್ದಾರೆ. ನಮ್ಮ ಧ್ವಜ ಹೋರಾಟ ಇಲ್ಲಿಗೆ ನಿಲ್ಲಲ್ಲ. ಜೂ.4ರ ನಂತರ ಹನುಮ ಧ್ವಜ ಹೋರಾಟ ತೀವ್ರವಾಗಲಿದೆ. ಹೋರಾಟದ ಪರಿಣಾಮ ಸರ್ಕಾರ ಎದುರಿಸಲಿದೆ. ಮತ್ತೆ ಅರ್ಜುನ ಸ್ತಂಭದಲ್ಲಿ ಹನುಮ ಧ್ವಜ ಹಾರಾಡಬೇಕು. ರಾಷ್ಟ್ರೀಯ ಹಬ್ಬದ ಸಂದರ್ಭದಲ್ಲಿ ರಾಷ್ಟ್ರ ಧ್ವಜ ಹಾರಾಡಲು ಅಭ್ಯಂತರವಿಲ್ಲ. ಆದರೆ ಅರ್ಜುನ ಸ್ತಂಭ ನಿರ್ಮಾಣದ ಉದ್ದೇಶ ಹನುಮ ಧ್ವಜ ಹಾರಿಸುವುದು. ಹಾಗಾಗಿ ಮತ್ತೆ ಅರ್ಜುನ ಸ್ತಂಭದಲ್ಲಿ ಹನುಮ ಧ್ವಜ ಹಾರಾಡಬೇಕು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ವಿಸಿ ನಾಲೆ ಕಾಮಗಾರಿ ಅವೈಜ್ಞಾನಿಕ

ಕಾಮಗಾರಿ ಪರಿಶೀಲಿಸಿದ ಬಿಜೆಪಿ ರೈತ ಮೋರ್ಚಾ ನಿಯೋಗದಿಂದ ಆರೋಪ



ಪಾಂಡವಪುರ ತಾಲೂಕಿನಲ್ಲಿ ನಡೆಯುತ್ತಿರುವ ವಿಶ್ವೇಶ್ವರಯ್ಯ ನಾಲೆ(ವಿಸಿ)ಯ ಕಾಮಗಾರಿಯನ್ನು ಮಂಗಳವಾರ ಬಿಜೆಪಿ ರೈತಮೋರ್ಚಾ ಘಟಕದ ನಿಯೋಗ ಪರಿಶೀಲನೆ ನಡೆಸಿತು.

ಪಾಂಡವಪುರ, ಮೇ 21– ತಾಲೂಕಿನಲ್ಲಿ ನಡೆಯುತ್ತಿರುವ ವಿಶ್ವೇಶ್ವರಯ್ಯ ನಾಲೆ(ವಿಸಿ)ಯ ಕಾಮಗಾರಿಯನ್ನು ಮಂಗಳವಾರ ಬಿಜೆಪಿ ರೈತಮೋರ್ಚಾ ಘಟಕದ ನಿಯೋಗ ಪರಿಶೀಲನೆ ನಡೆಸಿತು.

ಬಿಜೆಪಿ ರೈತಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಕುಮಾರ್, ಜಿಲ್ಲಾಧ್ಯಕ್ಷ ಅಶೋಕ್ ಎಸ್.ಡಿ.ಜಯರಾಮ್ ನೇತೃತ್ವದಲ್ಲಿ ಬಿಜೆಪಿಯ ನಿಯೋಗ ತಾಲೂಕಿ ನಾರ್ಥ್ ಬ್ಯಾಂಕ್ ಬಳಿಯಿಂದ ಪಾಂಡವಪುರ ವರೆಗೆ ವಿಸಿ ನಾಲೆಯ ಕಾಮಗಾರಿ ಪರಿಶೀಲಿಸಿತು.

ಬಿಜೆಪಿ ರೈತಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಕುಮಾರ್ ಮಾತನಾಡಿ, ವಿಸಿ ನಾಲೆಯ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಯಾವುದೇ ತಂತ್ರಜ್ಞಾನ ಬಳಕೆ ಮಾಡದೆ ಕಾಮಗಾರಿ ಬಳಕೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಕಾಮಗಾರಿಯ ಗುತ್ತಿಗೆದಾರ ಕಾಮಗಾರಿ ಆರಂಭಿಸುವುದನ್ನೇ ನಿಧಾನ ಮಾಡಿದ್ದಾರೆ, ಜೊತೆಗೆ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದ್ದು ಶೇ.40 ಮಾತ್ರ ಕಾಮಗಾರಿ ಪೂರ್ಣಗೊಳಿಸಿದ್ದಾರೆ. ಗುತ್ತಿಗೆದಾರರು ಇನ್ನೂ 10 ದಿನದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸಬೂಬು ಹೇಳುತ್ತಿದ್ದಾರೆ. ಕಾವೇರಿ ಕಣಿವೆಯಲ್ಲಿ ಉತ್ತಮವಾದ ಮಳೆಯಾಗುತ್ತಿದ್ದು ಅಣೆಕಟ್ಟೆಗೆ ನೀರು ಬಂದರೆ ನಾಲೆಗೆ ನೀರು ಹರಿಸದ ಸ್ಥಿತಿ ನಿರ್ಮಿಸಿದ್ದಾರೆ ಎಂದು ಕಿಡಿಕಾರಿದರು.

ನಾಲಾ ಕಾಮಗಾರಿ ಸಂಪೂರ್ಣವಾಗಿ ಅವೈಜ್ಞಾನಿಕವಾಗಿದೆ. ನಾಲೆ ಒಂದು ಕಡೆ ತಡೆಗೋಡೆಗೆ ಕಾಂಕ್ರಿಟ್ ನಿರ್ಮಿಸಿದ್ದರೆ, ಮತ್ತೊಂದೆಡೆ ಹಾಗೆಯೇ ಬಿಟ್ಟಿದ್ದಾರೆ. ಜತೆಗೆ ಕೆಲವೆಡೆ ನಾಲೆಯ ತಡೆಗೋಡೆಗೆ ಕಾಂಕ್ರಿಟ್ ಹಾಕದೆಯೇ ಮಣ್ಣಿಗೆ ಕಬ್ಬಿಣ ಹಾಕಿ ಗಾರೆ ಹಾಕುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು. ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದ್ದರೂ ಸಹ ರೈತಸಂಘದವರು ಕಾಮಗಾರಿ ವಿರುದ್ಧ ತುಟಿ ಬಿಚ್ಚಿಲ್ಲ. ಕಾಂಗ್ರೆಸ್ ಹಾಗೂ ರೈತಸಂಘದವರು ಇಬ್ಬರು ಶಾಮೀಲಾಗಿ ಅವೈಜ್ಞಾನಿಕವಾಗಿ ಕಾಮಗಾರಿ ನಡೆಯುತ್ತಿದ್ದರೂ ಮೌನವಹಿಸಿದ್ದಾರೆ, ಎಲ್ಲಾ ಗೊತ್ತಿದ್ದರು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸುಮ್ಮನಿದ್ದಾರೆ ಎಂದು ಹರಿಹಾಯ್ದರು.

ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಶೀಘ್ರವೇ ನಾಲೆಯ ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರ ಜಮೀನಿಗೆ ನೀರು ಹರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರಹೋರಾಟ ನಡೆಸಲಾಗುವುದು ಎಂದು ಕಿಡಿಕಾರಿದರು.

ಜಿಲ್ಲಾಧ್ಯಕ್ಷ ಅಶೋಕ್ ಎಸ್.ಡಿ.ಜಯರಾಮ್ ಮಾತನಾಡಿ, ಜಿಲ್ಲೆಯ ರೈತರ ಅನುಕೂಲಕ್ಕಾಗಿ ಗುತ್ತಿಗೆದಾರರು ನಾಲೆಯ ಕಾಮಗಾರಿ ಪೂರ್ಣಗೊಳಿಸಿ ಅನುಕೂಲ ಮಾಡಿಕೊಡಬೇಕು, ಇಲ್ಲವಾದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ನಾಲೆಯ ಅವೈಜ್ಞಾನಿಕ ಕಾಮಗಾರಿಯ ವಿರುದ್ಧವಾಗಿ ನೀರಾವರಿ ನಿಗಮದ ಅಧಿಕಾರಿಗಳಿಗೆ ದೂರು ನೀಡಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಧನಂಜಯ್ಯ, ರೈತ ಮೋರ್ಚಾ ಮಂಡಲ ಅಧ್ಯಕ್ಷ ವಿಶ್ವನಾಥ್, ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಅಶೋಕ್, ರೈತ ಮೋರ್ಚಾ ಮಾಜಿ ಜಿಲ್ಲಾ ಅಧ್ಯಕ್ಷ ಜೋಗಿಗೌಡ, ರಾಜ್ಯ ರೈತಮೋರ್ಚಾ ಕಾರ್ಯದರ್ಶಿ ಮಳವಳ್ಳಿ ಅಶೋಕ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜವರೇಗೌಡ, ಲಿಂಗರಾಜು, ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂತರಾಜು, ಸುರೇಶ್ ಕನ್ನಂಬಾಡಿ, ಪುರಸಭೆ ಮಾಜಿ ಸದಸ್ಯ ಆರ್.ಆರ್.ರಾಮಲಿಂಗಮಂ (ಡೈರಿ ರಾಮು), ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ನಿರಂಜನ್‌ಬಾಬು ಸೇರಿದಂತೆ ಹಲವರು ಹಾಜರಿದ್ದರು.

ಕಪ್ಪುಚುಕ್ಕೆ ಇಲ್ಲದ ರಾಜಕಾರಣಿ ಶ್ರೀನಿವಾಸ್‌ಪ್ರಸಾದ್



ಮಂಡ್ಯ, ಮೇ 21– ಸಂವಿಧಾನ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಧಕ್ಕೆ ಬಂದಾಗ ಸ್ವ ಪಕ್ಷದ ನಾಯಕರ ವಿರುದ್ಧ ತಿರುಗಿ ಬೀಳುತ್ತಿದ್ದ ಸಂಸದ ಶ್ರೀನಿವಾಸ್ ಪ್ರಸಾದ್‌ಗೆ ರಾಜಕೀಯದ ಹಾದಿಯಲ್ಲಿ ಪಕ್ಷ ಮುಖ್ಯವಾಗಿರಲಿಲ್ಲ ಎಂದು ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಶ್ರೀನಿವಾಸ್ ಪ್ರಸಾದ್ ಅಭಿಮಾನಿಗಳ ಬಳಗ, ಸುಂಡಳ್ಳಿ ನಾಗರಾಜ್ ಅಭಿಮಾನಿ ಬಳಗ ಆಯೋಜಿಸಿದ್ದ ಶ್ರೀನಿವಾಸಪ್ರಸಾದ್ ಅವರ ಶ್ರದ್ಧಾಂಜಲಿ ಹಾಗೂ ನುಡಿ ನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬುದ್ಧ ಬಸವ ಅಂಬೇಡ್ಕರ್ ಅವರ ಚಿಂತನೆಯ ಹಾದಿಯಲ್ಲಿ ಮುನ್ನಡೆದು ಸ್ವಜನ ಪಕ್ಷಪಾತ ಇಲ್ಲದೆ ಯಾವುದೇ ಕಪ್ಪುಚುಕ್ಕೆ ಇಲ್ಲದ ಸ್ವಚ್ಛ ರಾಜಕಾರಣ ಮಾಡಿದ ಕೀರ್ತಿ ಇವರಿಗೆ ಸಲ್ಲಲಿದೆ ಎಂದು ಹೇಳಿದರು.

ರಾಜಕೀಯ ಜೀವನದಲ್ಲಿ ಅಂಬೇಡ್ಕರ್ ಆಶಯ ಮೈಗೂಡಿಸಿಕೊಂಡಿದ್ದ ಇವರು ಅಂಬೇಡ್ಕರ್‌ರಂತೆ ಜನಸಾಮಾನ್ಯರಲ್ಲಿ ಹೋರಾಟದ ಕಿಚ್ಚು ಹಚ್ಚಿದವರು, ಸಮುದಾಯದ ಹಿತ ಕಾಪಾಡಲು ಸದಾಕಾಲ ಮುಂದಿದ್ದರು ಆದರೆ ಇವರು ಯಾವುದೇ ಜಾತಿ ಧರ್ಮಕ್ಕೆ ಸೀಮಿತರಾಗಿರಲಿಲ್ಲ. ಬದಲಾಗಿ ಎಲ್ಲಾ ವರ್ಗಕ್ಕೂ ಸಾಮಾಜಿಕ ನ್ಯಾಯ, ನಾಯಕತ್ವವನ್ನು ಕೊಟ್ಟವರು. ಇಂಥವರು ಇಂದಿನ ರಾಜಕಾರಣಿಗಳಿಗೆ ಆದರ್ಶಪ್ರಾಯ, ಇವರ ಸ್ವಾಭಿಮಾನ ನಮ್ಮೆಲ್ಲರಿಗೂ ದಾರಿದೀಪ ಆಗಲಿ ಎಂದು ಆಶಿಸಿದರು.

ಯುವಕರಾಗಿದ್ದಾಗ ಬೂಸಾ ಚಳವಳಿ ನಾಯಕತ್ವ ವಹಿಸಿದ್ದ ಶ್ರೀನಿವಾಸ್‌ಪ್ರಸಾದ್ ಈಗಿನವರಂತೆ ಮನೆಯಲ್ಲಿ ಇದ್ದುಕೊಂಡು ಶಾಸಕ, ಸಂಸದರಾದವರಲ್ಲ, ಬದಲಾಗಿ ಹೋರಾಟದ ಮೂಲಕ ರಾಜಕೀಯ ಸ್ಥಾನಮಾನ ಪಡೆದವರು, ಸ್ವಾಭಿಮಾನದ ಬದುಕು ಇವರದಾಗಿತ್ತು ಎಂದು ಹೇಳಿದರು.

ಬಿಜೆಪಿ ಪಕ್ಷದಲ್ಲಿ ಇದ್ದಾಗಲೇ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೀಕಿಸಿದ್ದರು ಇವರು ನೇರ ನಿಷ್ಠುರವಾದಿ, ದೇವೇಗೌಡರನ್ನು ಸಹ ಬಿಟ್ಟಿರಲಿಲ್ಲ, ಆದರೆ ಯಾರನ್ನು ವೈಯಕ್ತಿಕವಾಗಿ ದ್ವೇಷಿಸುತ್ತಿರಲಿಲ್ಲ, ತಪ್ಪು ಮಾಡಿದವರ ವಿರುದ್ಧ ಸಾತ್ವಿಕ ಸಿಟ್ಟು ಪ್ರದರ್ಶಿಸುತ್ತಿದ್ದರು, ಇವರ ಹೋರಾಟದ ಹಣತೆ ಎಲ್ಲೆಲ್ಲೋ ಬೆಳಗಲಿ ಎಂದರು.

ಬದುಕಿದ್ದಾಗ ವ್ಯಕ್ತಿಯನ್ನು ಪ್ರೀತಿಸಬೇಕು, ಅವರ ಜೊತೆ ಸಾಗಬೇಕು, ಸತ್ತಾಗ ಹೂ ಹಾಕುವ ಬದಲು ಇದ್ದಾಗ ಗೌರವ ಸಲ್ಲಬೇಕು, ರಾಜಕಾರಣಿಯಾಗಿ, ಶಾಸಕ, ಸಂಸದ, ಸಚಿವರಾಗಿ ಪ್ರಸಾದ್‌ರವರ ಆಡಳಿತ ಶೈಲಿ ಎಲ್ಲರಿಗೂ ಮಾದರಿ, ಕಂದಾಯ ಸಚಿವರಾಗಿದ್ದಾಗ ಅವರು ಜಾರಿಗೊಳಿಸಿದ್ದ ಮನಸ್ವಿನಿ ಯೋಜನೆ ಅವರ ಪ್ರೀತಿಯ ಕನಸಾಗಿತ್ತು ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಡಿ.ಎಸ್.ವೀರಯ್ಯ ಮಾತನಾಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸುರೇಶ್ ಕಂಠಿ, ಎಸ್ಸಿ–ಎಸ್ಟಿ ನಿವೃತ್ತ ನೌಕರರ ಸಂಘದ ಗುರುಮೂರ್ತಿ, ಚಂದ್ರಹಾಸ್, ಪ್ರೊ.ಚಂದ್ರಶೇಖರ್, ಸುಂಡಳ್ಳಿ ರಾಜು, ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಅಧ್ಯಕ್ಷ ಅಂಜನಾ ಶ್ರೀಕಾಂತ್, ದೇವರಾಜ್ ಅರಸು ಹಿಂದುಳಿದ ವರ್ಗ ವೇದಿಕೆ ಅಧ್ಯಕ್ಷ ಸಂದೇಶ್, ಮೈಸೂರು ಪಾಲಿಕೆ ಮಾಜಿ ಸದಸ್ಯ ಸಿದ್ದಪ್ಪ, ನಗರಸಭೆ ಸದಸ್ಯ ಶ್ರೀಧರ್, ಗೆಜ್ಜಲಗೆರೆ ಗಂಗಾಧರ್ ಕೊಮ್ಮೇರಹಳ್ಳಿ ಸೀತಾರಾಮು ಇತರರಿದ್ದರು.

ಬರ ಪರಿಹಾರ ನೀಡುವಲ್ಲಿ ರೈತ ಸಮುದಾಯಕ್ಕೆ ಅನ್ಯಾಯ

ಭೂಮಿತಾಯಿ ಹೋರಾಟ ಸಮಿತಿಯಿಂದ ಪ್ರತಿಭಟನೆ

ಶ್ರೀರಂಗಪಟ್ಟಣ, ಮೇ 21– ದೇಶಕ್ಕೆ ಅನ್ನ ಕೊಟ್ಟ ರೈತ ಸಮುದಾಯಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಾ, ರಾಜಕೀಯ ಮಾಡುವ ಮೂಲಕ ಬರ ಪರಿಹಾರದಲ್ಲಿ ವಂಚಿಸುತ್ತಿದೆ ಎಂದು ಆರೋಪಿಸಿ ಸರ್ಕಾರದ ವಿರುದ್ಧ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಪ್ರತಿಭಟಿಸಿದರು.

ಪಟ್ಟಣದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ಹಾಗೂ ಹೋರಾಟಗಾರ ಕೆ.ಎಸ್. ನಂಜುಂಡೇಗೌಡ ನೇತೃತ್ವದಲ್ಲಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಮಂಡ್ಯ ಜಿಲ್ಲೆಯ ರೈತರ ಪಾಲಿಗೆ ನಿರಂತರವಾಗಿ ಅನ್ಯಾಯ ಮಾಡುತ್ತಿರುವ ಸರ್ಕಾರ ಘೋಷಣೆ ಮಾಡಿದ ಬರಪರಿಹಾರದಲ್ಲಿ ತಾರತಮ್ಯ ಮಾಡಿದೆ. ಅಣೆಕಟ್ಟೆಗಳಿಗೆ, ಮಳೆಯಿಂದ ನೀರು ಬರಲು ಪ್ರಾರಂಭವಾಗಿದೆ. ತಮಿಳುನಾಡಿಗೆ ನೀರು ಹರಿಸುವ ಮೂಲಕ, ರಾಜ್ಯ ರೈತರಿಗೆ ಅನ್ಯಾಯವಾಗಿದೆ. ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ ಆ ಕಾರಣ ರೈತರು ಯಾವುದೇ ಬೆಳೆಯನ್ನು ಬೆಳೆಯಬಾರದು ಎಂದು ರಾಜ್ಯ ಸರ್ಕಾರ ಸೂಚನೆ ನೀಡಿ, ನಿರಂತರ 5–6 ತಿಂಗಳು ಕಾಲುವೆಗಳಿಗೆ ನೀರು ಹರಿಸದೆ ಕೃತಕ ಬರ ಸೃಷ್ಟಿಸಿದ ಕೀರ್ತಿ ಈ ರಾಜ್ಯ ಸರ್ಕಾರದ ನೀರಾವರಿ ಇಲಾಖೆಗೆ ಸಲ್ಲುತ್ತದೆ ಎಂದು ಕಿಡಿಕಾರಿದರು.

ಸಮಿತಿ ಕಾರ್ಯದರ್ಶಿ ಮಹದೇವಪುರ ಕೃಷ್ಣ, ಕೆ.ಜಯರಾಮು, ರಾಮಕೃಷ್ಣ, ಸಿದ್ದೇಗೌಡ, ಉಂಡವಾಡಿ ಮಹದೇವು, ಕೆಂಪೇಗೌಡ, ರಮೇಶ್, ಪುರುಷೋತ್ತಮ, ಎಚ್.ಡಿ. ಕೃಷ್ಣ ಸೇರಿದಂತೆ ಇತರ 50ಕ್ಕೂ ಹೆಚ್ಚು ಮಂದಿ ತಹಶೀಲ್ದಾರ್ ಪರುಶುರಾಮ್ ಅವರಿಗೆ ಮನವಿ ಸಲ್ಲಿಸಿದರು.



ಶತಾಯುಷಿ ನಿಧನ



ಶ್ರೀರಂಗಪಟ್ಟಣ, ಮೇ 21– ಮಜ್ಜಿಗೆಪುರ ಗ್ರಾಮದ ಶತಾಯುಷಿ ಪಾಪೇಗೌಡರು (113) ನಿಧನರಾದರು. ಮೃತರು ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ ಚೆಸ್ಕಾಂ ಮಂಡ್ಯ ಶಿವೇಗೌಡ ಸೇರಿದಂತೆ ಆರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಡೆಂಗ್ಯೂ ಜ್ವರ ಜಾಗೃತಿ' ಕುರಿತು ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮ

ಮೈಸೂರು, ಮೇ 21– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ರೇಡಿಯೋ 91.2ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಮೇ 22 ರಂದು ಬೆಳಗ್ಗೆ 11:30 ಗಂಟೆಯಿಂದ 12:30ರವರೆಗೆ ಮೈಸೂರು ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಾದ ಡಾ. ಸುವರ್ಣರವರ ಜೊತೆ "ಡೆಂಗ್ಯೂ ಜ್ವರ ಜಾಗೃತಿ" ಕುರಿತು ಸಂದರ್ಶನ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.


ಸಾರ್ವಜನಿಕರು ಡೆಂಗ್ಯೂ ಜ್ವರಕ್ಕೆ ಕಾರಣಗಳು, ಮುಂಜಾಗ್ರತ ಕ್ರಮಗಳು ಹಾಗೂ ಚಿಕಿತ್ಸೆಗಳ ಕುರಿತಂತೆ ಯಾವುದೇ ಪ್ರಶ್ನೆಗಳು ಇದ್ದಲ್ಲಿ ಕರೆಮಾಡಿ ಅಧಿಕಾರಿಗಳ ಜೊತೆ ನೇರವಾಗಿ ಮಾತನಾಡಬಹುದು. ದೂರವಾಣಿ ಸಂಖ್ಯೆ: 8296725912, 0821–2546563.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	81.00 ಅಡಿ
ಒಳಹರಿವು	1832 ಕ್ಯೂಸೆಕ್
ಹೊರಹರಿವು	272 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2823.21 ಅಡಿ
ಒಳ ಹರಿವು	356 ಕ್ಯೂಸೆಕ್
ಹೊರ ಹರಿವು	200 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಮಂಗಳವಾರ	2256.96 ಅಡಿ
ಒಳ ಹರಿವು	841 ಕ್ಯೂಸೆಕ್
ಹೊರ ಹರಿವು	300 ಕ್ಯೂಸೆಕ್

ಎಸ್‌ಆರ್‌ಹೆಚ್ ವಿರುದ್ಧ ಗೆದ್ದ ಕೆಕೆಆರ್ ಫೈನಲ್‌ಗೆ



ಇಂದಿನ ಪಂದ್ಯ (ಮೇ 22)
ರಾಯಲ್ ಚಾಲೆಂಜರ್ಸ್ ಬೆಂಗಳೂರು / ರಾಜಸ್ಥಾನ್ ರಾಯಲ್ಸ್
ಸ್ಥಳ: ಅಹಮದಾಬಾದ್, ನರೇಂದ್ರ ಮೋದಿ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ.

ಅಹಮದಾಬಾದ್, ಮೇ 21– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ನೀಡಿದ ಕೋಲ್ಕತ್ತಾ ನೈಟ್ ರೈಡರ್ಸ್ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತು.

ಆ ಮೂಲಕ ಕೆಕೆಆರ್ 2012, 2014, 2021ರ ಬಳಿಕ ನಾಲ್ಕನೇ ಬಾರಿಗೆ ಐಪಿಎಲ್ ಫೈನಲ್ ಪ್ರವೇಶಿಸಿತು. ಮತ್ತೊಂದೆಡೆ ಸೋಲು ಅನುಭವಿಸಿದ ಸನ್‌ರೈಸರ್ಸ್ ಹೈದರಾಬಾದ್ ಮೇ 24ರಂದು ನಡೆಯುವ ಕ್ವಾಲಿಫೈಯರ್ –2ನಲ್ಲಿ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಮುಂದಾಗಲಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲ್ಲಲು 160 ರನ್‌ಗಳ ಗುರಿ ಪಡೆದ ಕೋಲ್ಕತ್ತಾ ಇನ್ನೂ 38 ಎಸೆತ ಬಾಕಿ ಇರುವಂತೆಯೇ 13.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 164 ರನ್ ಗಳಿಸುವ ಮೂಲಕ ಜಯ ಗಳಿಸಿತು.

ಸುಲಭ ಗುರಿ ಬೆನ್ನತ್ತಿದ ಕೋಲ್ಕತ್ತಾ ಪರ ಆರಂಭಿಕ ಆಟಗಾರರಾದ ರಹಮಾನುಲ್ಲಾ ಗುರ್ಬಾಜ್ ಹಾಗೂ ಸುನೀಲ್ ನರೈನ್ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಇಳಿದಿದ್ದರು. ಮೊದಲ ವಿಕೆಟ್ 44 ರನ್ ಜೊತೆಯಾಟವಾಡಿದರಾದರೂ 20 ಎಸೆತಗಳಲ್ಲಿ 23 ರನ್ ಗಳಿಸಿ ರಹಮಾನುಲ್ಲಾ ಗುರ್ಬಾಜ್ ನಿರ್ಗಮಿಸಿದರು. ಮತ್ತೊಂದೆಡೆ ಸುನಿಲ್ ನರೈನ್ 21 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಬಳಿಕ 3ನೇ ವಿಕೆಟ್‌ಗೆ ಜೊತೆಯಾದ ನಾಯಕ ಶ್ರೇಯಸ್ ಅಯ್ಯರ್ ಮತ್ತು ವೆಂಕಟೇಶ್ ಅಯ್ಯರ್ 44 ಎಸೆತಗಳಲ್ಲಿ 97 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯವನ್ನು ತಂದುಕೊಟ್ಟರು. ಶ್ರೇಯಸ್ ಅಯ್ಯರ್ 24 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಒಳಗೊಂಡ 58 ರನ್ ಗಳಿಸಿದರೆ, ವೆಂಕಟೇಶ್ ಅಯ್ಯರ್ 28 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಒಳಗೊಂಡ 51 ರನ್ ಗಳಿಸಿ ಅಜೇಯರಾಗಿ ಉಳಿದರು. ಹೈದರಾಬಾದ್ ಪರ ನಾಯಕ ಪ್ಯಾಟ್ ಕಮ್ಮಿನ್ಸ್, ಟಿ.ನಟರಾಜನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ 19.3 ಓವರ್‌ಗಳಲ್ಲಿ 159 ರನ್ ಗಳಿಗೆ ಆಲೌಟಾಯಿತು. ತಂಡದ ಪರ ಲೀಗ್ ಪಂದ್ಯಗಳಲ್ಲಿ ಅಬ್ಬರಿಸಿದ್ದ ಟ್ರಾವಿಸ್ ಹೆಡ್ ಅವರನ್ನು ಇನ್ನಿಂಗ್ಸ್‌ನ ಮೊದಲ ಓವರ್‌ನಲ್ಲೇ ಶೂನ್ಯಕ್ಕೆ ಔಟ್ ಮಾಡಿದರು. ಇನ್ನು 2ನೇ ಓವರ್‌ನಲ್ಲಿ 3 ರನ್ ಗಳಿಸಿ ಅಭಿಷೇಕ್ ಶರ್ಮಾ ವಿಕೆಟ್ ಒಪ್ಪಿಸಿದರು. ಇನ್ನೂ ತಂಡದ ಮೊತ್ತ 39 ರನ್ ಆಗುವಷ್ಟರಲ್ಲಿ ನಿತೀಶ್ ರೆಡ್ಡಿ 9 ಹಾಗೂ ಶಹಬ್ಬಾಜ್ ಅಹಮ್ಮದ್ ಶೂನ್ಯಕ್ಕೆ ಔಟಾದರು. ಈ ಹಂತದಲ್ಲಿ ಜೊತೆಯಾದ ರಾಹುಲ್ ತ್ರಿಪಾಠಿ ಮತ್ತು ಕ್ಲಾಸೆನ್ 37 ಎಸೆತಗಳಲ್ಲಿ 62 ರನ್ ಜೊತೆಯಾಟವಾಡಿ ತಂಡಕ್ಕೆ ಸ್ವಲ್ಪ ಚೇತರಿಕೆ ನೀಡಿದರು. ಆದರೆ ಹೆನ್ರಿಚ್ ಕ್ಲಾಸೆನ್ 21 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 32 ರನ್ ಗಳಿಸಿದ್ದ ವೇಳೆ ಭಾರಿ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರೇ, ರಾಹುಲ್ ತ್ರಿಪಾಠಿ 35 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಒಳಗೊಂಡ 55 ರನ್ ಗಳಿಸಿ ರನೌಟ್‌ಗೆ ಬಲಿಯಾದರು.

ಉಳಿದಂತೆ ನಾಯಕ ಪ್ಯಾಟ್ ಕಮ್ಮಿನ್ಸ್ 30 ರನ್ ಸಿಡಿಸಿ ಔಟಾದರು. ಕೆಕೆಆರ್ ಪರ ಮಿಚೆಲ್ ಸ್ಟಾರ್ಕ್ 3, ವರುಣ್ ಚಕ್ರವರ್ತಿ 2, ವೈಭವ್ ಅರೋರ, ಹರ್ಷಿತ್ ರಾಣಾ, ಸುನೀಲ್ ನರೇನ್, ಆಂಡ್ರೆ ರಸೆಲ್ ತಲಾ ಒಂದೊಂದು ವಿಕೆಟ್ ಪಡೆದರು. ಕೆಕೆಆರ್ ಪರ ಮಿಚೆಲ್ ಸ್ಟಾರ್ಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಡಿವೈಎಸ್ಪಿ ಬ್ಯಾಂಕ್ ಖಾತೆಗೆ ಕನ್ನ; 15.98 ಲಕ್ಷ ದೋಚಿದ ಖದೀಮರು

ಮೈಸೂರು, ಮೇ 21(ಎಸ್‌ಪಿಎನ್)– ಹಾಸನ ಉಪ ವಿಭಾಗದ ಡಿವೈಎಸ್ಪಿ ಪಿ.ಕೆ.ಮುರಳೀಧರ್ ಬ್ಯಾಂಕ್ ಖಾತೆಗೆ ಕನ್ನ ಹಾಕಿರುವ ಖದೀಮರು, ಒಟ್ಟು 15.98 ಲಕ್ಷ ರೂ. ದೋಚಿದ್ದಾರೆ.

ಡಿವೈಎಸ್ಪಿ ಅವರು, ಕೆನರಾ ಬ್ಯಾಂಕ್ ಮಡಿಕೇರಿ ಮುಖ್ಯ ಶಾಖೆ ಹಾಗೂ ಭಾಗಮಂಡಲ ಶಾಖೆಯಲ್ಲಿ ಖಾತೆ ಹೊಂದಿದ್ದಾರೆ. ಮೇ 20 ರಂದು ಮಧ್ಯಾಹ್ನ 1.30ರ ಸುಮಾರಿಗೆ ಅವರ ಮೊಬೈಲ್ ಫೋನ್‌ಗೆ ಹಣ ವರ್ಗಾವಣೆಗೊಂಡಿರುವ ಮೆಸೇಜ್‌ಗಳು ಬಂದಾಗ ತಮ್ಮ ಖಾತೆಯಿಂದ ಖದೀಮರು ಹಣ ದೋಚಿರುವುದು ಮುರುಳೀಧರ್ ಗಮನಕ್ಕೆ ಬಂದಿದೆ. ಮಡಿಕೇರಿ ಮುಖ್ಯಶಾಖೆಯಿಂದ ಒಟ್ಟು 25 ವರ್ಗಾವಣೆ ಮೂಲಕ 12,10,711 ಹಾಗೂ ಭಾಗಮಂಡಲ ಶಾಖೆಯಿಂದ 10 ವರ್ಗಾವಣೆ ಮೂಲಕ ಒಟ್ಟು 3,88,050 ಸೇರಿದಂತೆ ಒಟ್ಟು 15,98,761 ಅನ್ನು ಅಪರಿಚಿತ ಬ್ಯಾಂಕ್ ಖಾತೆಗಳಿಗೆ ವರ್ಗ ಮಾಡಲಾಗಿದೆ. ಹಣ ವರ್ಗಾವಣೆಗೊಂಡಿರುವ ಬ್ಯಾಂಕ್ ಖಾತೆಗಳನ್ನು, ಖಾತೆದಾರರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳುವಂತೆ ಅವರು, ಹಾಸನ ಜಿಲ್ಲಾ ಸೆನ್ ಠಾಣೆಗೆ ದೂರು ನೀಡಿದ್ದಾರೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

ಭಾರತದ ಮರಿಯಪ್ಪನ್ ತಂಗವೇಲು, ಸುಮಿತ್ ಆಂಟಿಲ್, ಏಕ್ತಾ ಭಯಾನ್‌ಗೆ ಚಿನ್ನ

ಟೋಕಿಯೊ: ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಅಥ್ಲೀಟ್‌ಗಳು ಐತಿಹಾಸಿಕ ಸಾಧನೆ ಮಾಡಿದ್ದು, ಭಾರತದ ಮರಿಯಪ್ಪನ್ ತಂಗವೇಲು, ಸುಮಿತ್ ಆಂಟಿಲ್, ಏಕ್ತಾ ಭಯಾನ್ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ.

ಟೋಕಿಯೋ ಪ್ಯಾರಾಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಕ್ರೀಡಾಪಟು ಮರಿಯಪ್ಪನ್ ತಂಗವೇಲು ಎಫ್63 ಹೈಜಂಪ್ ವಿಭಾಗದಲ್ಲಿ 1.88 ಮೀಟರ್ ಎತ್ತರಕ್ಕೆ ಜಿಗಿಯುವ ಮೂಲಕ ದಾಖಲೆಯೊಂದಿಗೆ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು.

ಹಾಲಿ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಸುಮಿತ್ ಆಂಟಿಲ್ ಕೂಡ ಮಂಗಳವಾರ ತಮ್ಮ ಎಫ್ 64 ಜಾವೆಲಿನ್ ಥ್ರೋ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 69.50 ಮೀ ದೂರಕ್ಕೆ ಈಟಿಯನ್ನು ಎಸೆಯುವ ಮೂಲಕ ಸುಮಿತ್ ಆಂಟಿಲ್ ಅಗ್ರಸ್ಥಾನಕ್ಕೇರಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಮಹಿಳೆಯರ ಎಫ್51 ಕ್ಲಬ್ ಥ್ರೋ ಸ್ಪರ್ಧೆಯಲ್ಲಿ ಭಾರತದ ಏಕ್ತಾ ಭಯಾನ್ ಕೂಡ ಚಿನ್ನ ಪದಕಕ್ಕೆ ಭಾಜನರಾಗಿದ್ದು, ಅವರು ಅಂತಿಮ ಸುತ್ತಿನಲ್ಲಿ 20.12 ಮೀಟರ್ ದೂರಕ್ಕೆ ಎಸೆಯುವ ಮೂಲಕ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಹರಿಯಾಣ ಸಿವಿಲ್ ಸರ್ವಿಸಸ್ (ಎಚ್‌ಸಿಎಸ್) ಅಧಿಕಾರಿಯಾಗಿರುವ ಏಕ್ತಾ ಅವರು ಚೀನಾದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಭಾರತದ ಪದಕ ಬೇಟೆ: ಇನ್ನು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಭಾರತದ ಪದಕ ಬೇಟೆ ಮುಂದುವರೆದಿದ್ದು, ಇಂದು ಸುಮಿತ್ ಆಂಟಿಲ್, ತಂಗವೇಲು ಮರಿಯಪ್ಪನ್ ಮತ್ತು ಏಕ್ತಾ ಭಯಾನ್ ಭಾರತದ ಖಾತೆಗೆ ತಲಾ ಒಂದೊಂದು ಚಿನ್ನದ ಪದಕವನ್ನು ಹಾಕುವ ಮೂಲಕ ಪದಕ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನಕ್ಕೆ ಜಿಗಿಯುವಂತೆ ಮಾಡಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ರಾಮಾಯಣ ನೃತ್ಯರೂಪಕ ವೈಭವ...





ಮೈಸೂರಿನ ಊಟಿ ರಸ್ತೆಯ ದತ್ತನಗರದ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 25ನೇ ವಾರ್ಷಿಕೋತ್ಸವದ ಪ್ರಯುಕ್ತ ಆಶ್ರಮದ ನಾದ ಮಂಟಪದಲ್ಲಿ ಮಂಗಳವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ರಚಿತ 'ಶತಶ್ಲೋಕಿ ರಾಮಾಯಣ'ದ ನೃತ್ಯ ರೂಪಕವನ್ನು ಕಲಾವಿದರು ಸಾದರಪಡಿಸಿದರು. ಮತ್ತೊಂದು ಚಿತ್ರದಲ್ಲಿ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ನೃತ್ಯ ರೂಪಕ ವೀಕ್ಷಿಸುತ್ತಿರುವುದನ್ನು ಕಾಣಬಹುದು.

ಶನಿ ಮಹಾಶಾಂತಿ

ಮೈಸೂರು, ಮೇ 21– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಮೇ 23ರ ಗುರುವಾರದಂದು ಶ್ರೀ ಸತ್ಯನಾರಾಯಣ ಪೂಜೆ, ಕರ್ಕಾಟಕ, ತುಲಾ, ಮಕರ, ಮೀನಾ, ಕುಂಭ ರಾಶಿಯವರಿಗೆ ಶನಿ ಮಹಾಶಾಂತಿ ಮತ್ತು ಬಾಧ ನಿವಾರಕ ಸುದರ್ಶನ ಹೋಮ, ಕುಜ ದೋಷ ನಿವೃತ್ತಿ ಶಾಂತಿ, ಆರೋಗ್ಯಕರ ಮಹಾ ಮೃತ್ಯುಂಜಯ ಹೋಮ, ರಾಹು–ಕೇತು ಶಾಂತಿ ಮಾಡಲಾಗುತ್ತದೆ. ಕಾರ್ಯಕ್ರಮಗಳು ಬೆಳಗ್ಗೆ 9ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗಾಗಿ ಮೈ.ಕುಮಾರ್, ಜಾತಕ ವಿಮರ್ಶಕರು, 9845183392 ಅಥವಾ 9845183399 ಅನ್ನು ಸಂಪರ್ಕಿಸಬಹುದು.

ಮೈಸೂರು ಮಿತ್ರ

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಗೆಲುವು ನಿಶ್ಚಿತ

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ

ಮೈಸೂರು, ಮೇ 21(ಎಸ್‌ಬಿಡಿ)– ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಎಲ್ಲರ ಸಹಕಾರದಿಂದ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಕೆ.ವಿವೇಕಾನಂದ ದಾಖಲೆ ಗೆಲುವು ಸಾಧಿಸಲಿದ್ದಾರೆ ಎಂಬ ಆಶಯವಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಿವೇದಿತಾ ನಗರದ ಖಾಸಗಿ ಕನ್ವೆನ್ಷನಲ್ ಹಾಲ್‌ನಲ್ಲಿ ಮಂಗಳವಾರ ರಾತ್ರಿ ನಡೆದ ಬಿಜೆಪಿ–ಜೆಡಿಎಸ್ ಮೈತ್ರಿಕೂಟ(ಎನ್‌ಡಿಎ)ದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್–ಬಿಜೆಪಿ ಜೊತೆಗೂಡಿ ನಡೆಸುತ್ತಿರುವ ಅತ್ಯಂತ ಶಕ್ತಿಯುತ ಚುನಾವಣೆ ಇದಾಗಿದೆ. ರಾಜ್ಯದಲ್ಲೇ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಅತೀ ಹೆಚ್ಚು ಅಂತರದ ಗೆಲುವು ದಾಖಲಿಸಬೇಕೆಂಬ ಆಶಯವಿದೆ. ಇದಕ್ಕೆ ಉಭಯ ಪಕ್ಷಗಳ ಪ್ರತಿಯೊಬ್ಬರ ಸಹಕಾರವೂ ಮಹತ್ವದ್ದಾಗಿದೆ ಎಂದರು.

ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯಾಗಿತ್ತು. ಅವರ ಅವಧಿಯಲ್ಲಿ ಗೋವಿಂದೇಗೌಡರು ಶಿಕ್ಷಣ ಸಚಿವರಾಗಿದ್ದಾಗ 50 ಸಾವಿರ ಮಹಿಳೆಯರು ಸೇರಿದಂತೆ ಒಂದು ಲಕ್ಷ ಶಿಕ್ಷಕರನ್ನು ನೇಮಕ ಮಾಡಲಾಗಿತ್ತು. ಅದಾದ ಬಳಿಕ 2006–07ರಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರವಿದ್ದಾಗಲೇ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಯಾಗಿದ್ದು. ನಾನು ಮುಖ್ಯಮಂತ್ರಿ, ಯಡಿಯೂರಪ್ಪನವರು ಉಪ ಮುಖ್ಯಮಂತ್ರಿ ಹಾಗೂ ಬಸವರಾಜ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಾಗ ದೊಡ್ಡ ಮಟ್ಟದ ಕ್ರಾಂತಿ ಮಾಡಿದೆವು. 56 ಸಾವಿರ ಶಿಕ್ಷಕರ ನೇಮಕಾತಿಯ ಜೊತೆಗೆ, ಪದವಿಪೂರ್ವ, ಪ್ರಥಮ ದರ್ಜೆ, ಡಿಪ್ಲೊಮಾ, ಐಟಿಐ ಸೇರಿದಂತೆ ಎಲ್ಲಾ ಮಾದರಿ ಹೊಸ ಕಾಲೇಜುಗಳನ್ನೂ ಆರಂಭಿಸಲಾಯಿತು. ಶಿಕ್ಷಣ ಕ್ಷೇತ್ರಕ್ಕೆ ಅಪಾರ ಪ್ರಮಾಣದ ಆರ್ಥಿಕ ನೆರವು ನೀಡಲಾಗಿತ್ತು ಎಂದು ತಿಳಿಸಿದರು.

ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಐದು ವರ್ಷ ಹಾಗೂ ಪ್ರಸಕ್ತ ಅವಧಿಯ ಒಂದು ವರ್ಷ ಎಷ್ಟು ಕಾಲೇಜುಗಳನ್ನು ಸ್ಥಾಪಿಸಿದ್ದಾರೆ, ಎಷ್ಟು ಅನುದಾನ ನೀಡಿದ್ದಾರೆ ಎನ್ನುವುದನ್ನು ಮತದಾರರು ಗಮನಿಸಲಿ. ಪ್ರಾಥಮಿಕ ಹಂತದಲ್ಲೇ ಇಂಗ್ಲಿಷ್ ಶಿಕ್ಷಣ ನೀಡುವ ಪಬ್ಲಿಕ್ ಶಾಲೆ ಯೋಜನೆ ಬರೀ ಹೇಳಿಕೆಗಷ್ಟೇ ಸೀಮಿತವಾಗಿದೆ. ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರವಿದ್ದಾಗ 1994 ರೊಳಗೆ ಆರಂಭಿಸಿದ್ದ ಅನುದಾನರಹಿತ ಶಾಲೆಗಳಿಗೆ ಅನುದಾನ ವ್ಯವಸ್ಥೆಯಡಿ ತಂದೆವು. ಆದರೆ ಕಾಂಗ್ರೆಸ್ ಸರ್ಕಾರ ಏನು ಮಾಡಿದೆ? ಎಂದು ಪ್ರಶ್ನಿಸಿದರು.

ಮೈಸೂರು ಭಾಗದಲ್ಲಿ ಜೆಡಿಎಸ್ ಬಲ ಇದೆ. ಈಗ ಬಿಜೆಪಿ ಜೊತೆಗೂಡಿ ಅತ್ಯಂತ ಶಕ್ತಿಯುತ ಚುನಾವಣೆ ನಡೆಸುತ್ತಿದ್ದೇವೆ. ಮೈಸೂರಿನಲ್ಲಿ ಉಭಯ ಪಕ್ಷಗಳ ಹಲವು ಮುಖಂಡರ ಶಕ್ತಿ ಇದೆ. ಇವರೊಂದಿಗೆ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಮತಯಾಚಿಸಬೇಕು. ಶಿಕ್ಷಕರಿಗೆ ತಿಳಿದಿದ್ದರೂ ಸಹ ಮತದಾನದ ಪ್ರಕ್ರಿಯೆ ಬಗ್ಗೆ ತಾವೂ ತಿಳಿಸಬೇಕು. ನಮ್ಮ ಅಭ್ಯರ್ಥಿಗೆ ಹಣದ ಅಗತ್ಯವಿಲ್ಲ. ಸರ್ಕಾರದ ಸೌಲಭ್ಯದ ಜೊತೆಗೆ ವೈಯುಕ್ತಿಕವಾಗಿ ಶಿಕ್ಷಕರ ಕಷ್ಟಸುಖದಲ್ಲಿ ಭಾಗಿಯಾಗುವ ಮನಸ್ಸಿದೆ. ಶಿಕ್ಷಕ ಮತದಾರರು ಎನ್‌ಡಿಎಗೆ ಶಕ್ತಿ ತುಂಬುವ ಮೂಲಕ ಮುಂದಿನ ದಿನಗಳಲ್ಲಿ ನಮ್ಮದೇ ಆದ ಕನಸುಗಳ ಸಾಕಾರಗೊಳಿಸಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಒಗ್ಗಟ್ಟಿನ ಮಂತ್ರ: ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ. ದೇವೇಗೌಡರು, ಮಾಜಿ ಎಂಎಲ್‌ಸಿ ತೋಂಟದಾರ್ಯ, ಹೊಳೆನರಸೀಪುರ ಶಾಸಕ ಹೆಚ್.ಡಿ.ರೇವಣ್ಣ, ಮಾಜಿ ಡಿಸಿಎಂ ಅಶ್ವತ್ ನಾರಾಯಣ್, ಮಾಜಿ ಸಚಿವರಾದ ಸಾ.ರಾ.ಮಹೇಶ್, ಎನ್.ಮಹೇಶ್, ಚನ್ನರಾಯಪಟ್ಟಣ ಶಾಸಕ ಸಿ.ಎನ್. ಬಾಲಕೃಷ್ಣ, ಬೇಲೂರು ಶಾಸಕ ಹೆಚ್.ಕೆ. ಸುರೇಶ್, ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಮಾತನಾಡಿ, ಉಭಯ ಪಕ್ಷಗಳು ಜೊತೆಗೂಡಿ ಕೆ.ವಿವೇಕಾನಂದ ಅವರನ್ನು ಗೆಲ್ಲುವುದ ವಿಶ್ವಾಸದೊಂದಿಗೆ ಒಗ್ಗಟ್ಟಿನ ಮಂತ್ರ ಜಪಿಸಿದರು. ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕರಾದ ಟಿ.ಎಸ್.ಶ್ರೀವತ್ಸ, ಸ್ವರೂಪ್, ಸಿಮೆಂಟ್ ಮಂಜು, ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್‌ಕುಮಾರ್, ನಿರಂಜನ್ ಕುಮಾರ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಮೇಯರ್‌ಗಳಾದ ಶಿವಕುಮಾರ್, ಆರ್.ಲಿಂಗಪ್ಪ, ಮುಖಂಡರಾದ ಕವೀಶ್ ಗೌಡ, ಮೈ.ವಿ. ರವಿಶಂಕರ್, ರಮೇಶ್, ಎಸ್.ಬಾಲರಾಜ್, ನಂಜುಂಡೇಗೌಡ, ಎನ್.ಆರ್. ಸಂತೋಷ್, ಹೆಚ್.ಕೆ.ರಾಮು, ಪ್ರೀತಂ ನಾಗಪ್ಪ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ದಾಕ್ಷಾಯಿಣಿ ಸೇರಿದಂತೆ ಮೈಸೂರು, ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಉಭಯ ಪಕ್ಷಗಳ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



ಮೈಸೂರಿನಲ್ಲಿ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥ ನಾರಾಯಣ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು, ಶಾಸಕರಾದ ಟಿ.ಎಸ್.ಶ್ರೀವತ್ಸ, ಹೆಚ್.ಡಿ.ರೇವಣ್ಣ, ಹೆಚ್.ಕೆ.ರಮೇಶ್, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಹೆಚ್.ಕೆ.ಕುಮಾರಸ್ವಾಮಿ ಸೇರಿದಂತೆ ಉಭಯ ಪಕ್ಷಗಳ ಮುಖಂಡರು ಒಟ್ಟಾಗಿ ಕೈ ಮೇಲೆತ್ತುವ ಮೂಲಕ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.



ಸಹೋದರರಾದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಹೆಚ್.ಡಿ.ರೇವಣ್ಣ ಸಮಾಲೋಚನೆ. ಎಂಎಲ್‌ಸಿ ಸಿ.ಎನ್.ಮಂಜೇಗೌಡ ಚಿತ್ರದಲ್ಲಿದ್ದಾರೆ.

ಶಿಕ್ಷಣ ಸಚಿವರಿಂದ ಅಧಿಕಾರಿಗಳಿಗೆ ಬೆದರಿಕೆ

ಮೈಸೂರು: ಜೆಡಿಎಸ್–ಬಿಜೆಪಿ ಒಗ್ಗಟ್ಟಿನ ಶಕ್ತಿ ಕಂಡು ಕಾಂಗ್ರೆಸ್ ಹೆದರಿದ್ದು, ಶಿಕ್ಷಣ ಸಚಿವರು ಇಲಾಖೆ ಅಧಿಕಾರಿಗಳ ಮೂಲಕ ಶಿಕ್ಷಕ ಮತದಾರರಿಗೆ ಬೆದರಿಕೆ ಹಾಕುತ್ತಿದ್ದಾರೆಂಬ ಮಾಹಿತಿ ಇದೆ ಎಂದು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಆರೋಪಿಸಿದರು.

ಮೈಸೂರಿನಲ್ಲಿ ನಡೆದ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಶಿಕ್ಷಣ ಸಚಿವರು ತಮ್ಮ ಇಲಾಖೆ ಅಧಿಕಾರಿಗಳಿಗೆ ಬೆದರಿಕೆ ಹಾಕುತ್ತಿದ್ದಾರೆ. ಆ ಮೂಲಕ ಶಿಕ್ಷಕರ ಮತ ಪಡೆಯಲು ಯತ್ನಿಸುತ್ತಿರುವುದಾಗಿ ಹೇಳುತ್ತಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್‌ನಿಂದ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಆಗಿದೆ. ನಮ್ಮ ಜವಾಬ್ದಾರಿ ಅರಿತುಕೊಳ್ಳಬೇಕು. ನಾಲ್ಕು ಜಿಲ್ಲೆಗಳಲ್ಲಿ ಎಲ್ಲಾ ಮುಖಂಡರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಮನೆ ಮನೆಗೆ ಹೋಗಿ ಶಿಕ್ಷಕರಿಗೆ ಧೈರ್ಯ ತುಂಬಿ ಮತಯಾಚಿಸಬೇಕು ಎಂದರು.

ಶಾಸಕ ಜಿ.ಟಿ.ದೇವೇಗೌಡ ಆರೋಪ

ಬಿಜೆಪಿಯ ಎಲ್ಲಾ ಆಕಾಂಕ್ಷಿಗಳೂ ಕೆ.ವಿವೇಕಾನಂದ ಅವರಿಗೆ ಬೆಂಬಲ ನೀಡಿದ್ದಾರೆ. ಸ್ವಯಂಪ್ರೇರಿತವಾಗಿ ಅವರ ಗೆಲುವಿಗಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ಜೆಡಿಎಸ್‌ನವರು ಅವರು ಕರೆದಿಲ್ಲ, ಇವರು ಕರೆದಿಲ್ಲ ಎನ್ನುತ್ತಾರೆ ಎಂದು ಹಾಸ್ಯಚಟಾಕಿಯೊಂದಿಗೆ ಚಾಟಿ ಬೀಸಿದ ಜಿಟಿಡಿ, ನಮ್ಮ ಅಭ್ಯರ್ಥಿ ಕೆ.ವಿವೇಕಾನಂದರಿಗೆ ರಾಜಕೀಯಕ್ಕೆ ಬಂದು ಹಣ ಮಾಡುವ ಉದ್ದೇಶವಿಲ್ಲ. ಅವರಿಗೊಂದು ಸೇವಾಕ್ಷೇತ್ರ ಬೇಕು. ಸೇವೆ ಮಾಡುವುದೇ ಗುರಿ. ಉತ್ತಮ ಅಭ್ಯರ್ಥಿ. ಮುಂದಿನ ದಿನಗಳಲ್ಲಿ ಉತ್ತಮ ಸಮಯ ಬರುತ್ತದೆ. ಕಾಂಗ್ರೆಸ್‌ನವರು ಏನೇ ಮಾಡಿದರೂ ನಮ್ಮ ಅಭ್ಯರ್ಥಿ ಗೆಲುವು ನಿಶ್ಚಿತ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಯದುವೀರ್ ಕೂಡ ಗೆಲುವು ಸಾಧಿಸಲಿದ್ದಾರೆ. ಉಭಯ ಪಕ್ಷಗಳಲ್ಲಿ ಹೊಂದಾಣಿಕೆ ಇದೆ. ಎರಡು ಸಾರಿ ಇಬ್ಬರೂ ಅನುಭವಿಸಿದ್ದೇವೆ. ನಾವಿನ್ನೂ ಒಗ್ಗಟ್ಟಾಗಿ ಹೋಗುತ್ತೇವೆ ಎಂದರು.

ವಿವೇಕಾನಂದ ಪರ ಹೆಚ್.ಡಿ.ರೇವಣ್ಣ ಮತಯಾಚನೆ

ಮೈಸೂರು: ಪ್ರಜ್ವಲ್ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಆರೋಪದಡಿ ಎಸ್‌ಐಟಿ ಬಂಧನಕ್ಕೊಳಗಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಹೊಳೆನರಸೀಪುರ ಶಾಸಕ ಹೆಚ್.ಡಿ.ರೇವಣ್ಣ, ದಕ್ಷಿಣ ಶಿಕ್ಷಕರ ಕ್ಷೇತ್ರದ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಎನ್‌ಡಿಎ ಅಭ್ಯರ್ಥಿ ಪರ ಮತ ಯಾಚಿಸಿದರು.

ರಾಜ್ಯದಲ್ಲಿ ಹೆಚ್.ಡಿ.ದೇವೇಗೌಡರ ನಂತರ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಯಾರಾದರೂ ಮುಖ್ಯಮಂತ್ರಿ ಇದ್ದರೆ ಅದು ಕುಮಾರಸ್ವಾಮಿ ಅವರು ಮಾತ್ರ. ಬಹುತೇಕ ತಾಲೂಕು ಕೇಂದ್ರಗಳಲ್ಲಿ ಪ್ರಥಮದರ್ಜೆ ಕಾಲೇಜುಗಳಿರಲಿಲ್ಲ. ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರದ ಮುಖ್ಯಮಂತ್ರಿಯಾಗಿದ್ದಾಗ ಸಾವಿರಾರು ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಸ್ಥಾಪನೆಯೊಂದಿಗೆ 50 ಸಾವಿರಕ್ಕೂ ಹೆಚ್ಚು ಶಿಕ್ಷಕರ ನೇಮಕಾತಿ ಮಾಡಿದರು ಎಂದು ಸ್ಮರಿಸಿಕೊಂಡರು. ಕುಮಾರಸ್ವಾಮಿ ಅವರೊಂದಿಗಿದ್ದು ಬೆಳೆದು ಈಗ ಅವರ ವಿರುದ್ಧವೇ ಮಾತನಾಡುತ್ತಿದ್ದಾರೆ. ಅಂತಹವರ ಬಗ್ಗೆ ಹೆಚ್ಚು ಮಾತನಾಡುವುದು ಬೇಡ. ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಒಳ್ಳೆಯ ಯುವಕ. ಹಾಸನ ಜಿಲ್ಲೆಯಲ್ಲಿ ಜೆಡಿಎಸ್‌ನ ನಾಲ್ಕು ಹಾಗೂ ಬಿಜೆಪಿಯ ಇಬ್ಬರು ಶಾಸಕರಿದ್ದೇವೆ. ಶುಕ್ರವಾರ ಉಭಯ ಪಕ್ಷಗಳ ಮುಖಂಡರ ಜಂಟಿ ಸಭೆ ನಡೆಸಿ, ವಿವೇಕಾನಂದರ ಗೆಲುವಿಗೆ ಕೆಲಸ ಮಾಡುತ್ತೇವೆ ಎಂದರು. ಇದಕ್ಕೂ ಮುನ್ನ ಮಾತನಾಡಿದ ಚನ್ನರಾಯಪಟ್ಟಣ ಶಾಸಕ ಬಾಲಕೃಷ್ಣ, ಹೆಚ್.ಡಿ. ರೇವಣ್ಣನವರ ನೇತೃತ್ವದಲ್ಲೇ ಅಭ್ಯರ್ಥಿ ಗೆಲುವಿಗೆ ಶ್ರಮಿಸುವುದಾಗಿ ತಿಳಿಸಿದರು.

“ಜೂ.3ರಂದು ಚುನಾವಣೆ ನಡೆಯಲಿರುವ ವಿಧಾನಪರಿಷತ್ ಚುನಾವಣೆ ಅತ್ಯಂತ ಮಹತ್ವದ್ದಾಗಿದೆ. ಬಿಜೆಪಿ–ಜೆಡಿಎಸ್ ಮೈತ್ರಿ ಶಕ್ತಿಯನ್ನು ಈಗಾಗಲೇ ದೇಶವೇ ಗಮನಿಸಿದೆ. ಕಾಂಗ್ರೆಸ್‌ಗೆ ಈ ಬಗ್ಗೆ ಭಯ ಶುರುವಾಗಿದೆ. ಆದರೆ ನಾವು ಯಾವುದೇ ಚುನಾವಣೆಯನ್ನೂ ಕಡೆಗಾಣಿಸಬಾರದು. ವಿಧಾನ ಪರಿಷತ್‌ನಲ್ಲಿ ಸಂಖ್ಯೆ ಹೆಚ್ಚಿಸಿಕೊಳ್ಳುವುದು ಬಹಳ ಮುಖ್ಯ. ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರು ಬೇರೊಂದು ಸಭೆಯಲ್ಲಿರುವುದರಿಂದ ಅವರ ಪರವಾಗಿ ಈ ಸಭೆಯಲ್ಲಿ ಭಾಗವಹಿಸಲು ತಿಳಿಸಿದರು. ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಮೂವತ್ತಾರು ವಿಧಾನಸಭಾ ಕ್ಷೇತ್ರಗಳಲ್ಲೂ ನಾವು ಹಗಲಿರುಳು ದುಡಿಯುತ್ತೇವೆ. ಈ ಚುನಾವಣೆಯಲ್ಲಿ ಚಿನ್ಹೆ ಇರುವುದಿಲ್ಲ. ಕ್ರಮ ಸಂಖ್ಯೆ 2ರ ಮುಂದೆ ಒಂದು ಗೀಟು ಎಳೆಯುವ ಮೂಲಕ ವಿವೇಕಾನಂದರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕು.

–ಸಿ.ಎನ್.ಅಶ್ವತ್ಥ ನಾರಾಯಣ, ಮಾಜಿ ಉಪಮುಖ್ಯಮಂತ್ರಿ

“ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 21 ಸಾವಿರಕ್ಕೂ ಹೆಚ್ಚು ಮತದಾರರಿದ್ದು, ಇದರಲ್ಲಿ ಮೈಸೂರು ನಗರ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಏಳು ಸಾವಿರಕ್ಕೂ ಹೆಚ್ಚು ಮತಗಳಿವೆ. ಇಲ್ಲಿ 11 ಬೂತ್‌ಗಳಿವೆ. ಎರಡೂ ಪಕ್ಷದ ಮುಖಂಡರು ಜೊತೆಗೂಡಿ ಯೋಜನಾಬದ್ಧವಾಗಿ ಕೆಲಸ ಮಾಡಿದರೆ ಗೆಲುವು ನಿಶ್ಚಿತ. ಜೆಡಿಎಸ್ ನಿಂದಲೇ ಮೂರು ಬಾರಿ ಎಂಎಲ್‌ಸಿ ಆಗಿ, ಉಪ ಸಭಾಪತಿಯಾಗಿ ಈಗ ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡಿರುವವರು ನಮ್ಮ ನಾಯಕರ ಬಗ್ಗೆಯೇ ಲಘುವಾಗಿ ಮಾತನಾಡುತ್ತಿದ್ದಾರೆ. ಗೆಲ್ಲಲು ಏನೇನೋ ಸಂಚು ನಡೆಸುತ್ತಾರೆ. ಇದು ನಮ್ಮೆಲ್ಲರ ಪ್ರತಿಷ್ಠೆಯ ಪ್ರಶ್ನೆ. ವಿವೇಕಾನಂದ ಎದುರಾಳಿಯಷ್ಟು ವಾಗ್ಮಿಯಲ್ಲ. ಆದರೆ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ. ಹಾಗಾಗಿ ಶಿಕ್ಷಕರು ಇವರನ್ನು ಬೆಂಬಲಿಸುತ್ತಾರೆ.

–ಸಾ.ರಾ.ಮಹೇಶ್, ಮಾಜಿ ಶಾಸಕ

ಮಾಧ್ಯಮಗಳು ಪ್ರಸ್ತುತ ಎಲ್ಲಾ ಕಲೆಗಳನ್ನೂ ಕಬಳಿಸಿವೆ

ಸಂಗೀತ ನಿರ್ದೇಶಕ ಹಂಸಲೇಖ ಅಭಿಮತ

ಮೈಸೂರು, ಮೇ 21(ಎಂಟಿವೈ)– ಸಂಗೀತ ಕ್ಷೇತ್ರದ ಹಿಮಾಲಯ ಪರ್ವತದಂತೆ ಇದ್ದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಲೋಕದ ದಿಗ್ಗಜರಾದ ಡಾ. ಗಂಗೂಬಾಯಿ ಹಾನಗಲ್ ಸಂಗೀತದ ರೂಪದಲ್ಲಿ ಮೈಸೂರಲ್ಲಿ ಹರಿಯುತ್ತಿದ್ದಾರೆ ಎಂದು ಸಂಗೀತ ನಿರ್ದೇಶಕ ಹಂಸಲೇಖ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ರಾಜ್ಯ ಸಂವಹನ ಮತ್ತು ಪತ್ರಿಕೋದ್ಯಮ ಶಿಕ್ಷಣ ಸಂಘದ ವತಿಯಿಂದ ವಿವಿಯ ಆವರಣದಲ್ಲಿ ಮಂಗಳವಾರ 'ಪ್ರದರ್ಶಕ ಕಲೆ ಮತ್ತು ಮಾಧ್ಯಮ: ಸಾಂಸ್ಕೃತಿಕ ದೃಷ್ಟಿಕೋನಗಳು' ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಸಂಗೀತ ಮತ್ತು ಪ್ರದರ್ಶಕ ಕಲೆಗಳು ಬೇರೆ ಬೇರೆ ಮಾಧ್ಯಮ. ಆದರೆ ಸಂಗೀತ ವಿಶ್ವವಿದ್ಯಾಲಯದಲ್ಲಿ ಸಂಗೀತದೊಂದಿಗೆ ಪ್ರದರ್ಶಕ ಕಲೆಗಳನ್ನು ಸಂಯೋಜಿಸಿರುವುದು ಅದ್ಭುತ ಪ್ರಯೋಗ ಹಾಗೂ ಸುಂದರ ಕಲ್ಪನೆ. ಈ ಎರಡು ಮಾಧ್ಯಮಗಳು ಇಂದು ಮಾಧ್ಯಮಗಳ ಮುಂದೆ ಹೋಗುತ್ತಿವೆ. ಮಾಧ್ಯಮಗಳು ಪ್ರಸ್ತುತ ಎಲ್ಲ ಕಲೆಗಳನ್ನು ಕಬಳಿಸಿಕೊಂಡಿವೆ. ಸಂಗೀತ, ಸಂಸ್ಕೃತಿ, ಸಮಾಜದ ನೆಮ್ಮದಿ ಹಾಗೂ ಸಮತೆಯನ್ನು ಕಲೆಗಳ ಮೂಲಕ ಧೈರ್ಯವಾಗಿ ಪ್ರದರ್ಶಿಸುವ ಚೈತನ್ಯ ವಿಶ್ವ ವಿದ್ಯಾಲಯಕ್ಕೆ ದೊರೆಯಲಿ ಎಂದು ಆಶಿಸಿದರು. ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ ಮಾತನಾಡಿ, ಮಾಧ್ಯಮಗಳು ಜನರಿಗೆ ಮನರಂಜನೆ ನೀಡಲು ಪ್ರದರ್ಶಕ ಕಲೆಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳುತ್ತಿವೆ. ಪ್ರದರ್ಶಕ ಕಲೆಗಳು ಈ ಹಿಂದೆ ಕೆಲವೇ ಕೆಲವರ ಸ್ವತ್ತಾಗಿತ್ತು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಸಮುದಾಯ ಈ ಹಿಂದೆ ಮಾಧ್ಯಮ ಪ್ರವೇಶಿಸುವುದು ಕಷ್ಟವಾಗಿತ್ತು. ಆದರೆ, ಪ್ರಸ್ತುತ ಎಲ್ಲರಿಗೂ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ದೊರೆಯುತ್ತಿದೆ ಎಂದರು.

ಅಮೆರಿಕದ ಬ್ರಾಂಡೀಸ್ ವಿಶ್ವ ವಿದ್ಯಾಲಯದ ಪ್ರೊ. ಗೌರಿ ವಿಜಯ ಕುಮಾರ್ ಮಾತನಾಡಿ, ನಾನು ಭಾರತದೊಂದಿಗೆ ಸಂಪರ್ಕ ಇರಿಸಿಕೊಳ್ಳಲು ಭರತನಾಟ್ಯ ಕಲೆಯೇ ಕಾರಣ. ಪ್ರತಿ ವರ್ಷ ನಾನು ದೇಶಕ್ಕೆ ಆಗಮಿಸಿ ಭರತ ನಾಟ್ಯ ಕಲಿಯುತ್ತಿದ್ದೆ. ಕಲೆ, ಸಂಗೀತವು ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಹೊಂದಿದೆ ಎಂದು ಅಭಿಪ್ರಾಯಪಟ್ಟರು.

ಸಂಗೀತ ವಿಶ್ವವಿದ್ಯಾಲಯ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಮಾತನಾಡಿ, ಪ್ರದರ್ಶಕ ಕಲೆಗಳಲ್ಲಿ ಸಾಮಾಜಿಕ ನ್ಯಾಯ ಒದಗಿಸುವುದು ಅನಿವಾರ್ಯ. ಅದನ್ನು ಅರಿತುಕೊಂಡು ನಾವು ಮುಂದೆ ಸಾಗಬೇಕು. ದೇಶಕ್ಕೆ ಸ್ವಾತಂತ್ರ್ಯ ದೊರೆತು 70 ವರ್ಷ ಕಳೆದರೂ ಇನ್ನೂ ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಕ್ಕಿಲ್ಲ ಎಂದು ವಿಷಾದಿಸಿದರು. ಕಾರ್ಯಕ್ರಮದಲ್ಲಿ ಸಂಗೀತ ವಿಶ್ವ ವಿದ್ಯಾಲಯ ಕುಲಸಚಿವೆ ಕೆ.ಎಸ್. ರೇಖಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ಆವರಣದಲ್ಲಿ ನಡೆದ 'ಪ್ರದರ್ಶಕ ಕಲೆ ಮತ್ತು ಮಾಧ್ಯಮ; ಸಾಂಸ್ಕೃತಿಕ ದೃಷ್ಟಿಕೋನಗಳು' ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಸಂಗೀತ ನಿರ್ದೇಶಕ ಹಂಸಲೇಖ ಉದ್ಘಾಟಿಸಿದರು.

ಮೇ 26ರಂದು ವಿದುಷಿ ಶ್ರೀಮತಿ ದೇವಿ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ



ಮೈಸೂರು, ಮೇ 21– ಮೈಸೂರಿನ ಸ್ವರಸಂಕುಲ ಸಂಗೀತ ಸಭಾ ವತಿಯಿಂದ ಕೆ.ವಿ.ಮೂರ್ತಿ ಸ್ಮರಣಾರ್ಥ ಮೇ 26 ರಂದು ಸಂಜೆ 6 ಗಂಟೆಗೆ ಹೆಸರಾಂತ ಕಲಾವಿದೆ ವಿದುಷಿ ಶ್ರೀಮತಿ ದೇವಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮವನ್ನು ಮೈಸೂರು ಕುವೆಂಪುನಗರ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಏರ್ಪಡಿಸಲಾಗಿದೆ. ಇವರಿಗೆ ಪಂ.ಸಾಗರ್ ಭರತ್‌ರಾಜ್ (ತಬಲ), ಪಂ.ಪ್ರಸಾದ್ ಕಾಮತ್ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ.

ಬೆಂಗಳೂರು ಟೆಕ್ಕಿಯ ಖಾತೆಗೆ ದಿಢೀರ್ ಭಾರಿ ಹಣ ಜಮೆ

- ಬೆಂಗಳೂರು ಸೇರಿದಂತೆ 11 ಕಡೆ ಎನ್‌ಐಎ ದಾಳಿ
- ಕರ್ನಾಟಕದ ಇಬ್ಬರು ವೈದ್ಯರು ವಶಕ್ಕೆ

ನವದೆಹಲಿ: ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ತೀವ್ರಗೊಳಿಸಿರುವ ರಾಷ್ಟ್ರೀಯ ತನಿಖಾ ದಳ (NIA) 4 ರಾಜ್ಯಗಳ 11 ಕಡೆ ರೇಡ್ ಮಾಡಿದೆ.

ಬೆಂಗಳೂರಿನ ಕುಮಾರಸ್ವಾಮಿ ಲೇಔಟ್, ಬನಶಂಕರಿ ಸೇರಿ ಐದಕ್ಕೂ ಹೆಚ್ಚು ಕಡೆ ದಾಳಿ ನಡೆಸಿದೆ. ಮತೀನ್, ಶಾಝೀಬ್ ನಾಲ್ಕು ವರ್ಷ ತಲೆಮರೆಸಿಕೊಂಡಿದ್ದ ಅವಧಿಯಲ್ಲಿ ನೆರವು ನೀಡಿದವರಿಗಾಗಿ ಎನ್‌ಐಎ ಈ ಕಾರ್ಯಾಚರಣೆ ಮಾಡಿದೆ.

ತಮಿಳುನಾಡಿನ ಕೊಯಮತ್ತೂರಿನ ಖಾಸಗಿ ಆಸ್ಪತ್ರೆಯೊಂದರ ಮೇಲೆ ರೇಡ್ ಮಾಡಿದ ಎನ್‌ಐಎ, ಕೆಫೆ ಸ್ಫೋಟ ಪ್ರಕರಣದಲ್ಲಿ ಭಾಗಿಯಾದ ಶಂಕೆ ಮೇರೆಗೆ ಕರ್ನಾಟಕ ಮೂಲದ ಇಬ್ಬರು ವೈದ್ಯರನ್ನು ವಶಕ್ಕೆ ಪಡೆದಿದೆ. ಈ ಇಬ್ಬರು ಹಣಕಾಸು ನೆರವು ನೀಡಿರುವ ಶಂಕೆ ವ್ಯಕ್ತವಾಗಿದೆ. ಮತ್ತೊಂದು ಕಡೆ ಆಂಧ್ರದ ರಾಯದುರ್ಗದಲ್ಲಿ ನಿವೃತ್ತ ಶಿಕ್ಷಕ ಅಬ್ದುಲ್ ಮನೆ ಮೇಲೆಯೂ ಎನ್‌ಐಎ ದಾಳಿ ನಡೆಸಿ, ಅವರ ಪುತ್ರ ಸೊಹೇಲ್‌ನನ್ನು ವಶಕ್ಕೆ ಪಡೆದಿದೆ. ಈತ ಬೆಂಗಳೂರಲ್ಲಿ ಟೆಕ್ಕಿಯಾಗಿ ಕೆಲಸ ಮಾಡುತ್ತಿದ್ದ. ಸೊಹೇಲ್ ಬ್ಯಾಂಕ್ ಖಾತೆಗೆ ದಿಢೀರ್ ಎಂದು ಭಾರೀ ಮೊತ್ತದ ಹಣ ಜಮೆಯಾಗಿದ್ದ ಬಗ್ಗೆ ಅವರ ಕುಟುಂಬಸ್ಥರನ್ನು ಎನ್‌ಐಎ ಪ್ರಶ್ನಿಸಿದೆ. ತೆಲಂಗಾಣದಲ್ಲಿಯೂ ಎನ್‌ಐಎ ರೇಡ್ ಮಾಡಿದೆ. ಹಲವು ಮಹತ್ವದ ದಾಖಲೆಗಳನ್ನು ಸೀಜ್ ಮಾಡಿದೆ.

ಮೇ 31ರಿಂದ ಶಾಲೆಗಳು ಪುನಾರಂಭ

ಶಾಲೆಗೆ ತಳಿರು–ತೋರಣ ಕಟ್ಟಿ, ಡೋಲು, ನಗಾರಿ ಮೂಲಕ ವಿದ್ಯಾರ್ಥಿಗಳನ್ನು ಸ್ವಾಗತಿಸಲು ಸೂಚನೆ

ಮೈಸೂರು,ಮೇ21(ಎಸ್‌ಪಿಎನ್)– ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮೇ 31ರಿಂದ ಆರಂಭವಾಗಲಿದ್ದು, ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಡಿಡಿಪಿಐ ಹೆಚ್.ಕೆ.ಪಾಂಡು (ಆಡಳಿತ) ತಿಳಿಸಿದ್ದಾರೆ.

ಮೇ 31 ರಂದು ಶಾಲೆಗೆ ತಳಿರು ತೋರಣ ಕಟ್ಟಿ, ಡೋಲು, ನಗಾರಿ, ಎತ್ತಿನಗಾಡಿ ಮೂಲಕ ಮಕ್ಕಳನ್ನು ಕರೆತಂದು ಗುಲಾಬಿ ನೀಡಿ, ಆತ್ಮೀಯವಾಗಿ ಶಾಲೆಗೆ ಬರ ಮಾಡಿಕೊಳ್ಳಬೇಕು. ಈಗಾಗಲೇ ಸರಬರಾಜಾಗಿರುವ ಪಠ್ಯಪುಸ್ತಕ, ಸಮವಸ್ತ್ರ ವಿತರಣೆ ಮಾಡಬೇಕು. ಪಾಠ ಪ್ರವಚನ ಪ್ರಾರಂಭಿಸಿ, ಬಿಸಿಯೂಟ ಆರಂಭಿಸುವಂತೆ ಸೂಚಿಸಿದ್ದಾರೆ.

ಮೇ 31ರಿಂದ ಶಾಲೆಗಳು ಆರಂಭವಾಗಿರುವುದರಿಂದ ಮೇ 29ರಿಂದಲೇ ಶಾಲಾವರಣ, ಕೊಠಡಿ ಹಾಗೂ ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರು, ಶಾಲಾ ವೇಳಾಪಟ್ಟಿ, ತರಗತಿ ವೇಳಾಪಟ್ಟಿ, ಎಸ್‌ಡಿಪಿ ಕ್ರಿಯಾಯೋಜನೆ ತಯಾರಿ, ಶಿಕ್ಷಕರಿಗೆ ವಿಷಯ ಮತ್ತು ತರಗತಿ ಹಂಚಿಕೆ ಕುರಿತು ಪೂರ್ವ ಸಿದ್ಧತಾ ಸಭೆ ನಡೆಸುವಂತೆ ಅವರು ತಿಳಿಸಿದ್ದಾರೆ.

2023–24ನೇ ಶೈಕ್ಷಣಿಕ ವರ್ಷದ ಫಲಿತಾಂಶ ಹಾಗೂ 2024–25ನೇ ಸಾಲಿಗೆ ದಾಖಲಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು ಎಸ್‌ಎಟಿಎಸ್ ತಂತ್ರಾಂಶದಲ್ಲಿ ದಾಖಲಿಸಬೇಕು. ಮಕ್ಕಳಿಗೆ ಪ್ರಗತಿ ಪತ್ರಗಳನ್ನು ಹಾಗೂ ಬೇರೆ ಶಾಲೆಗೆ ಪ್ರವೇಶ ಪಡೆಯುವ ಮಕ್ಕಳಿಗೆ ವರ್ಗಾವಣೆ ಪತ್ರಗಳನ್ನು ಕೋರಿಕೆ ಮೇರೆಗೆ ವರ್ಗಾಯಿಸುವಂತೆ ಸೂಚಿಸಿದ್ದಾರೆ.

ಅಲ್ಲದೆ, ಮೇ 29ರಂದು ದಾಖಲಾತಿ ಆಂದೋಲನ ನಡೆಸಿ ಮನೆ ಮನೆಗೆ ಭೇಟಿ ಮಾಡಿ ನಿಗದಿತ ವಯೋಮಾನದ ಮಕ್ಕಳನ್ನು ಶಾಲೆಗೆ ದಾಖಲಿಸಲು ಕ್ರಮ ವಹಿಸಬೇಕು. ಈಗಾಗಲೇ ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

ವಾಂತಿ–ಭೇದಿ; ಕೆಆರ್ ಆಸ್ಪತ್ರೆ, ಜಿಲ್ಲಾಸ್ಪತ್ರೆಯಲ್ಲಿ ತಲಾ 25 ಹೆಚ್ಚುವರಿ ಹಾಸಿಗೆ ವ್ಯವಸ್ಥೆ

ನಗರ ಪಾಲಿಕೆಯಿಂದಲೂ ಮುನ್ನೆಚ್ಚರಿಕಾ ಕ್ರಮ



ಮೈಸೂರು ಜಿಲ್ಲಾಸ್ಪತ್ರೆಗೆ ಮಂಗಳವಾರ ರಾತ್ರಿ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡು ಚಿಕಿತ್ಸೆ ಪಡೆಯುತ್ತಿರುವ ಕೆ.ಸಾಲುಂಡಿ ಗ್ರಾಮಸ್ಥರ ಆರೋಗ್ಯ ವಿಚಾರಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಹಾಗೂ ಜಿಲ್ಲಾಸ್ಪತ್ರೆ ವೈದ್ಯರು ಇದ್ದರು.



ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ (ಜಯದೇವ ಆಸ್ಪತ್ರೆ ಇದ್ದ ಕಟ್ಟಡ) ವಾಂತಿ–ಭೇದಿಗಾಗಿ ಹೆಚ್ಚುವರಿ 25 ಹಾಸಿಗೆಗಳ ವ್ಯವಸ್ಥೆ ಮಾಡಿರುವುದು. ಹಲವರು ಇಲ್ಲಿ ಚಿಕಿತ್ಸೆ ಪಡೆಯುತ್ತಿರುವುದನ್ನೂ ಕಾಣಬಹುದು.



ಮೈಸೂರಿನಲ್ಲಿ ಪಾಲಿಕೆಯಿಂದ ಸೊಳ್ಳೆಗಳ ನಿಯಂತ್ರಣಕ್ಕಾಗಿ ಇತ್ತೀಚೆಗೆ ಫಾಗಿಂಗ್ ಮಾಡಿಸಲಾಯಿತು.

ಮೈಸೂರು,ಮೇ 21(ಪಿಎಂ)– ಕಾಲರಾ ಮತ್ತು ವಾಂತಿ–ಭೇದಿ ಜಿಲ್ಲೆಯಲ್ಲಿ ಆತಂಕ ಮೂಡಿಸಿದ್ದು, ಹೀಗಾಗಿ ಆರೋಗ್ಯ ಇಲಾಖೆ ಜಿಲ್ಲೆಯಾದ್ಯಂತ ನಿಗಾ ವಹಿಸಿದೆ. ಮೈಸೂರಿನ ಕೆಆರ್ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಯಲ್ಲಿ ಹೆಚ್ಚುವರಿಯಾಗಿ ತಲಾ 25 ಹಾಸಿಗೆಗಳನ್ನು ವ್ಯವಸ್ಥೆಗೊಳಿಸಲಾಗಿದೆ.

ಜಿಲ್ಲೆಯ ನಂಜನಗೂಡಿನ ತಗಡೂರು ಗ್ರಾಮದಲ್ಲಿ ಮೂವರು ಕಾಲರಾದಿಂದ ಗುಣಮುಖರಾಗಿದ್ದರೂ ಇದರ ಹೊರತಾದ ವಾಂತಿ ಭೇದಿ (ಕರುಳು ಬೇನೆ) ಸಂಪೂರ್ಣ ಮುಕ್ತವಾಗಿಲ್ಲ. ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಕಾಲರಾ ದೃಢಪಟ್ಟಿಲ್ಲವಾದರೂ ವಾಂತಿ ಭೇದಿಗೆ ಯುವಕನೊಬ್ಬ ಬಲಿಯಾಗಿದ್ದು, ಹಲವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ನಡುವೆ ಜಿಲ್ಲೆಯಲ್ಲಿ ಕಾಲರಾ ಭೀತಿ ಕಾಡುವಂತಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಮೈಸೂರಿನ ಕೆಆರ್ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಯಲ್ಲಿ ಹೆಚ್ಚುವರಿ ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ಕೆ.ಸಾಲುಂಡಿಯ ಶಾಲೆಯೊಂದರಲ್ಲಿ ತಾತ್ಕಾಲಿಕ ಕ್ಲಿನಿಕ್ ವ್ಯವಸ್ಥೆಗೊಳಿಸಲಾಗಿದೆ. ಸಾರ್ವಜನಿಕರು ಚೆನ್ನಾಗಿ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು. ಶೌಚಾಲಯ ವನ್ನು ಬಳಸಿದ ನಂತರ ಮತ್ತು ಆಹಾರ ವನ್ನು ತಯಾರಿಸುವ, ಸೇವಿಸುವ ಮೊದಲು ಸಾಬೂನು ಬಳಸಿ ಕೈಗಳನ್ನು ಚೆನ್ನಾಗಿ ತೊಳೆಯಲು ಹೆಚ್ಚಿನ ಗಮನ ನೀಡಬೇಕೆಂದು ಮನವಿ ಮಾಡಿದರಲ್ಲದೆ, ಇಂತಹ ಅಭ್ಯಾಸದಿಂದ ಒಂದು ವೇಳೆ ಕಾಲರಾ ಬ್ಯಾಕ್ಟೀರಿಯಾ ಇದ್ದರೆ, ಸೋಂಕು ಹರಡುವುದು ತಪ್ಪಲಿದೆ ಎಂದರು.

ಪಾಲಿಕೆಯಿಂದಲೂ ಕ್ರಮ: ಸಾಂಕ್ರಾಮಿಕ ರೋಗಗಳ ತಡೆಗೆ ಮೈಸೂರು ನಗರದಲ್ಲಿ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ.ಎಸ್.ಪಿ. ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಮನೆ ಮನೆ ಕಸ ಸಂಗ್ರಹಿಸುವ ಆಟೋರಿಕ್ಷಗಳಲ್ಲಿರುವ ಮೈಕ್‌ಗಳ ಮೂಲಕ ಕಾಲರಾ ಸೇರಿದಂತೆ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಹಕರಿಗೆ ಕುಡಿಯಲು ಬಿಸಿ ನೀರು ನೀಡುವಂತೆ ಹಾಗೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನಿಡುವಂತೆ ಹೋಟೆಲ್‌ಗಳಿಗೆ ಸೂಚನೆ ನೀಡಲಾಗಿದೆ. ಕಲುಷಿತ ನೀರು ಹಾಗೂ ನೀರಿನ ಬಣ್ಣ ಬದಲಾವಣೆ ಕಂಡು ಬಂದರೆ ಕೂಡಲೇ ಪಾಲಿಕೆಗೆ ಮಾಹಿತಿ ನೀಡುವಂತೆ ನಮ್ಮ ಸಿಬ್ಬಂದಿ ಹಾಗೂ ಅವರ ಮೂಲಕ ನಾಗರಿಕರಿಗೂ ತಿಳಿಸುತ್ತಿದ್ದೇವೆ. ಕಸ ಸಂಗ್ರಹಿಸುವ ಸಂದರ್ಭದಲ್ಲೇ ಹೆಚ್ಚಿನ ಜಾಗೃತಿ ಚಟುವಟಿಕೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಮದುವೆ ಸೇರಿದಂತೆ ಇನ್ನಿತರ ಸಭೆ ಸಮಾರಂಭಗಳಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಶುಚಿತ್ವ ಪರಿಶೀಲಿಸಲು ಪಾಲಿಕೆಯ ಹೆಲ್ತ್ ಇನ್ಸ್‌ಪೆಕ್ಟರ್‌ಗಳಿಗೆ ಸೂಚನೆ ನೀಡಲಾಗಿದೆ. ಇದೇ ವೇಳೆ ನೀರಿನ ಶುದ್ಧತೆಯನ್ನು ಅವರು ಪರಿಶೀಲಿಸಲಿದ್ದಾರೆ. ಸೊಳ್ಳೆಗಳ ನಿಯಂತ್ರಣಕ್ಕಾಗಿ ಫಾಗಿಂಗ್ ಮಾಡಿಸಲಾಗುತ್ತಿದೆ. ಲೋಕಸಭಾ ಚುನಾವಣೆ ಸಂಬಂಧ ಸ್ಟ್ರಾಂಗ್ ರೂಮ್ ವ್ಯವಸ್ಥೆಗೊಳಿಸಿರುವ ಮಹಾರಾಣಿ ವಾಣಿಜ್ಯ ಕಾಲೇಜು ಹೊರಾವರಣದಲ್ಲಿ ವಾರಕ್ಕೆ ಎರಡು ಬಾರಿ ಫಾಗಿಂಗ್ ಮಾಡಿಸಲಾಗುತ್ತಿದೆ. ವಾಂತಿ–ಭೇದಿ ಹಾಗೂ ಜ್ವರ ಕಂಡು ಬಂದರೆ ಸಾರ್ವಜನಿಕರು ಕೂಡಲೇ ಆಸ್ಪತ್ರೆಗಳಿಗೆ ಭೇಟಿ ನೀಡಬೇಕೆಂದು ಅವರು ಕೋರಿದರು.

ಆರೋಗ್ಯ ವಿಚಾರಿಸಿದ ಡಿಸಿ: ಮಂಗಳವಾರ ರಾತ್ರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡು ಚಿಕಿತ್ಸೆ ಪಡೆಯುತ್ತಿರುವ ಕೆ.ಸಾಲುಂಡಿ ಗ್ರಾಮಸ್ಥರ ಆರೋಗ್ಯ ವಿಚಾರಿಸಿದರು.

ಕುಶಾಲನಗರದಲ್ಲಿ ಧಾರಾಕಾರ ಮಳೆ

● ತಗ್ಗು ಪ್ರದೇಶಗಳು ಜಲಾವೃತ ● ಜೋರು ಮಳೆಗೆ ಜನಜೀವನ ಅಸ್ತವ್ಯಸ್ತ



ಕುಶಾಲನಗರದಲ್ಲಿ ತಗ್ಗು ಪ್ರದೇಶಗಳು ಜಲಾವೃತಗೊಂಡಿರುವುದು.

ಕುಶಾಲನಗರ, ಮೇ 21–ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಂಗಳವಾರ ಧಾರಾಕಾರ ಮಳೆ ಸುರಿಯಿತು.

ಬೆಳಗ್ಗೆಯಿಂದ ಬಿಸಿಲಿನ ವಾತಾವರಣವಿದ್ದು, ಸಂಜೆ ದಿಢೀರನೆ ಮಳೆ ಆರಂಭಗೊಂಡಿತು. ಕುಶಾಲನಗರ, ಗುಡ್ಡೆಹೊಸೂರು, ಹಾರಂಗಿ, ಮುಳ್ಳುಸೋಗೆ, ಕೂಡಿಗೆ, ಹೆಬ್ಬಾಲೆ, ಆಳುವಾರ, ಸಿದ್ದಲಿಂಗಪುರ, ಬಾಣವಾರ, ಆಲೂರು ಸೇರಿದಂತೆ ವಿವಿಧೆಡೆ ಒಂದು ತಾಸಿಗೂ ಹೆಚ್ಚು ಕಾಲ ಜೋರಾಗಿ ಮಳೆ ಸುರಿಯಿತು. ದಿಢೀರ್ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಕುಶಾಲನಗರದಲ್ಲಿ ಭಾರಿ ಮಳೆಗೆ ಚರಂಡಿಗಳು ತುಂಬಿ ನೀರು ರಸ್ತೆ ಮೇಲೆ ಹರಿಯಿತು. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಮಳೆ ನೀರು ನುಗ್ಗಿ ಪ್ರದೇಶಗಳು ಜಲಾವೃತ್ತಗೊಂಡಿವೆ. ತ್ಯಾಜ್ಯಗಳು ತುಂಬಿರುವುದರಿಂದ ಚರಂಡಿಗಳು ಬ್ಲಾಕ್ ಆಗಿವೆ. ಪಟ್ಟಣದ ಗಂಧದಕೋಟಿ ಬಳಿಯ ಕಾರು ಚಾಲಕರು ಮತ್ತು ಮಾಲೀಕರ ಬಡಾವಣೆಯಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಸೂಕ್ತ ವ್ಯವಸ್ಥೆ ಇಲ್ಲದೆ ಅವಾಂತರ ಸೃಷ್ಟಿಯಾಯಿತು. ಇದರಿಂದ ರಸ್ತೆ ಸಂಪರ್ಕ ಕಡಿತಗೊಳ್ಳುವ ಭೀತಿಯಲ್ಲಿ ನಿವಾಸಿಗಳು ಇದ್ದಾರೆ.

ಚರಂಡಿಯಲ್ಲಿ ಸಿಲುಕಿರುವ ತ್ಯಾಜ್ಯವನ್ನು ಸ್ಥಳೀಯ ನಿವಾಸಿಗಳು ಮಳೆಯಲ್ಲೇ ತೆರವುಗೊಳಿಸಿದರು. ಪ್ರತಿವರ್ಷ ಜಲಾವೃತಗೊಳ್ಳುವ ಪಟ್ಟಣದ ಬಡಾವಣೆಗಳ ಬಗ್ಗೆ ಪುರಸಭೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತವಾಗಿದೆ. ಕೆಲ ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಬಿಸಿಲಿನಿಂದ ಬರಿದಾಗಿದ್ದ ನದಿ ತೊರೆಗಳಲ್ಲಿ ನೀರಿನ ಹರಿವು ಹಾಗೂ ಸಂಗ್ರಹ ಪ್ರಮಾಣದಲ್ಲಿ ಏರಿಕೆಯಾಗಿದೆ.

ಸೂಕ್ತ ಚರಂಡಿ ಇಲ್ಲ: ಕುಶಾಲನಗರದ ಮುಳ್ಳುಸೋಗೆಯ ಚಂದ್ರಕಲಾ ರಸ್ತೆಯ ಬಡಾವಣೆಯಲ್ಲಿ ಸೂಕ್ತ ಚರಂಡಿ ಇಲ್ಲದ ಪರಿಣಾಮ ಜಲಾವೃತಗೊಂಡಿತು. ಇಲ್ಲಿನ ನಿವಾಸಿ ಮಡಿಕೇರಿ ಆಕಾಶವಾಣಿ ನೌಕರ ಮಂಜುನಾಥ ಅವರ ಮನೆಯ ಆವರಣ ಜಲಾವೃತವಾಗಿ ಮನೆಯವರು ಹಾಗೂ ಅಕ್ಕಪಕ್ಕದ ನಿವಾಸಿಗಳು ತಿರುಗಾಡದ ಸ್ಥಿತಿ ನಿರ್ಮಾಣವಾಯಿತು.

ಕೂಡಲೇ ಕುಶಾಲನಗರ ಪುರಸಭೆ ಅಧಿಕಾರಿಗಳು ಇತ್ತ ಧಾವಿಸಿ ನಿವಾಸಿಗಳ ತೊಂದರೆಯನ್ನು ಅರಿತು, ಸಮಸ್ಯೆ ಪರಿಹರಿಸಬೇಕು ಎಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ತಡೆಗೋಡೆ ಕುಸಿದು ಮನೆಗೆ ಹಾನಿ



ಕೂಡ್ಲೂರಿನ ಕೆ.ಕೆ.ನಿಂಗಪ್ಪ ಬಡಾವಣೆಯ ಶಿಕ್ಷಕಿ ಶಾಂತಲಾ ಅವರ ಮನೆ ತಡೆಗೋಡೆ ಕುಸಿದಿರುವುದು.

ಸೋಮವಾರ ಸಂಜೆ ಸುರಿದ ಭಾರಿ ಮಳೆಗೆ ಕೂಡ್ಲೂರಿನ ಕೆ.ಕೆ.ನಿಂಗಪ್ಪ ಬಡಾವಣೆಯಲ್ಲಿ ತಡೆಗೋಡೆ ಕುಸಿದು ಶಿಕ್ಷಕಿ ಶಾಂತಲಾ ಅವರ ಮನೆಗೆ ಅಪಾರ ಹಾನಿ ಉಂಟಾಗಿದೆ.

ಕುಶಾಲನಗರದ ಉರ್ದು ಶಾಲಾ ಶಿಕ್ಷಕಿಯಾಗಿರುವ ಶಾಂತಲಾ ಅವರ ಮನೆಯ ಪಕ್ಕದಲ್ಲಿ ಖಾಸಗಿ ಜಮೀನಿನಿಂದ ಮಳೆ ನೀರು ಹರಿದು ಬರುವುದರಿಂದ ಸುರಕ್ಷತೆ ದೃಷ್ಟಿಯಿಂದ 57 ಅಡಿ ಉದ್ದ, 9 ಅಡಿ ಎತ್ತರದ ತಡೆಗೋಡೆ ನಿರ್ಮಿಸಿದ್ದರು. ಆದರೆ, ಭಾರಿ ಮಳೆಗೆ ಎತ್ತರ ಪ್ರದೇಶದಿಂದ ತಗ್ಗು ಪ್ರದೇಶದತ್ತ ಹರಿದು ಬಂದ ಮಳೆ ನೀರಿನ ಒತ್ತಡಕ್ಕೆ ಬರೆ ಕುಸಿದು ತಡೆಗೋಡೆ ಬಿದ್ದು ಶಾಂತಲಾ ಅವರ ಮನೆಗೆ ಅಪ್ಪಳಿಸಿ, ಹಾನಿಯಾಗಿದೆ. ಇದರಿಂದ ಮನೆಯ ಬೆಡ್ ರೂಂ, ಅಡುಗೆ ಕೋಣೆ, ಡೈನಿಂಗ್ ಹಾಲ್ ಗೋಡೆ ಕುಸಿದು ಬಿದ್ದಿವೆ. ಮನೆ ಮೇಲಿನ ಪ್ಯಾರಾಪಿಟ್ ವಾಲ್ ಕೂಡ ಜಖಂಗೊಂಡಿದೆ.

ಮನೆಯ ಕೋಣೆಗಳ ಗೋಡೆಗಳು ಜಖಂಗೊಂಡಿರುವುದರಿಂದ ಹೊಸದಾಗಿ ನಿರ್ಮಿಸಬೇಕಿದೆ. ಘಟನೆಯಿಂದ 15 ಲಕ್ಷ ರೂ. ನಷ್ಟವಾಗಿದೆ ಎಂದು ಶಿಕ್ಷಕಿ ಶಾಂತಲಾ ಅಳಲು ತೋಡಿಕೊಂಡಿದ್ದಾರೆ. ಸ್ಥಳಕ್ಕೆ ತಹಸೀಲ್ದಾರ್ ಕಿರಣ್ ಗೌರಯ್ಯ, ಕೂಡುಮಂಗಳೂರು ಗ್ರಾಪಂ ಪಿಡಿಒ ಸಂತೋಷ್ ಭೇಟಿ ನೀಡಿ ಪರಿಶೀಲಿಸಿದರು. ಕೂಡಲೇ ಸೂಕ್ತ ಪರಿಹಾರ ಒದಗಿಸುವಂತೆ ಶಾಂತಲಾ ಮನವಿ ಮಾಡಿದ್ದಾರೆ.

ಪ್ರೀತಿಸುತ್ತಿದ್ದ ಯುವತಿಯ ಮನೆಯವರಿಂದ ಯುವಕನಿಗೆ ಬಿಸಿ ನೀರು ಎರಚಿ ಗಾಯ



ಮಡಿಕೇರಿ, ಮೇ 21–ಯುವತಿಯನ್ನು ಪ್ರೀತಿಸುತ್ತಿದ್ದ ಯುವಕನ ಮೇಲೆ ಆಕೆಯ ಮನೆಯವರು ಹಲ್ಲೆ ನಡೆಸಿ, ಮುಖಕ್ಕೆ ಬಿಸಿ ನೀರು ಎರಚಿ ಗಂಭೀರ ಗಾಯಗೊಳಿಸಿರುವ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಮದೆನಾಡಿನಲ್ಲಿ ನಡೆದಿದೆ.

ಮಡಿಕೇರಿಯ ಮಹದೇವಪೇಟೆ ನಿವಾಸಿ ಸುಹೇಲ್ ಎಂಬಾತನೇ ಗಾಯಗೊಂಡ ಯುವಕ. ಬಿಸಿ ನೀರು ಎರಚಿದ ಪರಿಣಾಮ ಸುಹೇಲ್‌ನ ಮುಖ ಹಾಗೂ ಕುತ್ತಿಗೆಯ ಭಾಗದಲ್ಲಿ ಗಂಭೀರವಾಗಿ ಬೆಂದ ಗಾಯಗಳಾಗಿದ್ದು, ಈತನನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಒಂದೇ ಸಮುದಾಯಕ್ಕೆ ಸೇರಿದ ಮದೆನಾಡಿನ ಯುವತಿ ಹಾಗೂ ಸುಹೇಲ್ ಕಳೆದೆರಡು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾಗಿದೆ. ಆದರೆ, ಶನಿವಾರ ರಾತ್ರಿ ಸುಹೇಲ್‌ಗೆ ಕರೆ ಮಾಡಿದ ಯುವತಿ ತನ್ನನ್ನು ಮನೆಯಿಂದ ಕರೆದುಕೊಂಡು ಹೋಗುವಂತೆ ಹೇಳಿದ್ದಾಳೆ. ನಂತರ ಮನೆಯಲ್ಲಿ ಮಲಗಿದ್ದ ಸುಹೇಲ್ ಮದೆನಾಡಿನಲ್ಲಿರುವ ಯುವತಿಯ ಮನೆಗೆ ತನ್ನ ದ್ವಿಚಕ್ರ ವಾಹನದಲ್ಲಿ ತೆರಳಿದ್ದಾನೆ.

ಈ ವೇಳೆ ಯುವತಿಯ ಮನೆಯವರು ಸುಹೇಲ್ ಮೇಲೆ ಹಲ್ಲೆ ನಡೆಸಿ, ಮುಖಕ್ಕೆ ಬಿಸಿ ನೀರು ಎರಚಿದ್ದಾರೆ. ಅಲ್ಲದೇ ಈತನ ದ್ವಿಚಕ್ರ ವಾಹನವನ್ನು ಜಖಂಗೊಳಿಸಿದ್ದಾರೆ. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಭಯೋತ್ಪಾದನಾ ವಿರೋಧಿ ದಿನಾಚರಣೆ ಪ್ರಯುಕ್ತ ನಗರಾಭಿವೃದ್ಧಿ ಯೋಜನಾ ಶಾಖೆಯ ನಿರ್ದೇಶಕ ಬಿ.ಬಸಪ್ಪ ಪ್ರತಿಜ್ಞಾ ವಿಧಿ ಬೋಧಿಸಿದರು. ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟರಾಜು, ಜಿಲ್ಲಾ ಖಜಾನಾಧಿಕಾರಿ ರಘುನಾಥ್, ಜಿಲ್ಲಾ ಸಾಂಖ್ಯಿಕಾಧಿಕಾರಿ ನಾರಾಯಣ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ನಾಗರಾಜು, ಸಾಮಾಜಿಕ ಭದ್ರತಾ ಯೋಜನೆಯ ಸಹಾಯಕ ನಿರ್ದೇಶಕಿ ಮಮತಾ ಇದ್ದರು.

ಜಯಲಕ್ಷ್ಮೀ ಗೋವಿಂದರಾವ್ ನಿಧನ

ವಿರಾಜಪೇಟೆ, ಮೇ 21–ರಾಷ್ಟ್ರಮತ ವಾರ ಪತ್ರಿಕೆಯ ಸಂಸ್ಥಾಪಕಿ ಹಾಗೂ ಜಿಲ್ಲೆಯ ಮೊದಲ ಮಹಿಳಾ ಸಂಪಾದಕರಾದ ಜಯಲಕ್ಷ್ಮೀ ಗೋವಿಂದರಾವ್ (93) ನಗರದ ಜೈನರ ಬೀದಿಯ ತಮ್ಮ ನಿವಾಸದಲ್ಲಿ ಮಂಗಳವಾರ ಮುಂಜಾನೆ ನಿಧನರಾದರು.



ಜಯಲಕ್ಷ್ಮಿ ಗೋವಿಂದರಾವ್ 1974ರಲ್ಲಿ ಆರಂಭವಾದ ರಾಷ್ಟ್ರಮತ ವಾರ ಪತ್ರಿಕೆ ಸಂಪಾದಕರಾಗಿ ದಿಟ್ಟ ಹೆಜ್ಜೆಯಿಂದ ಪತ್ರಿಕೆಯನ್ನು ನಡೆಸಿಕೊಂಡು ಬಂದಿದ್ದರು. ವಿರಾಜಪೇಟೆ ಮಹಿಳಾ ಸಮಾಜದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು ಹಾಗೂ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಮೃತರು ಮೂವರು ಪುತ್ರರು, ಪುತ್ರಿ ಮತ್ತು ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ಅರಸು ನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಜಿಲ್ಲಾ ಮಟ್ಟದ ಟೇಬಲ್ ಟೆನ್ನಿಸ್

ಮಡಿಕೇರಿ, ಮೇ 21–ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದಲ್ಲಿ ಜಿಲ್ಲಾ ಮಟ್ಟದ ಮುಕ್ತ ಟೇಬಲ್ ಟೆನ್ನಿಸ್ ಪಂದ್ಯಾವಳಿ ನಡೆಯಿತು. ವಿವಿಧ ವಿಭಾಗಗಳಲ್ಲಿ ನಡೆದ ಪಂದ್ಯಾವಳಿಯಲ್ಲಿ ಸುಮಾರು 120ಕ್ಕೂ ಹೆಚ್ಚಿನ ಆಟಗಾರರು ಭಾಗವಹಿಸಿದ್ದರು.

ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅರಣ್ಯ ಮಹಾವಿದ್ಯಾನಿಲಯದ ಡೀನ್ ಡಾ.ಜಿ.ಎಂ.ದೇವಗಿರಿ, ವಿದ್ಯಾರ್ಥಿಗಳಿಗೆ ಶುಭಕೋರಿ ಪಂದ್ಯಾವಳಿಯ ಸೋಲು ಗೆಲುವು ಮುಖ್ಯವಲ್ಲ. ಎಲ್ಲವನ್ನು ಸಮಾನವಾಗಿ ಸ್ವೀಕರಿಸಿ ಉನ್ನತ ಸ್ಥಾನಕ್ಕೆ ಏರಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭ ಭಾರತ ಹಾಕಿ ಕ್ರೀಡಾಪಟು ಕೆ.ಟಿ.ಮೋಹನ್ ಉಪಸ್ಥಿತರಿದ್ದರು. ನಂತರ ನಡೆದ ಸಮಾರೋಪದಲ್ಲಿ ಅರಣ್ಯ ಮಹಾವಿದ್ಯಾಲಯದ ಸಹಾಯಕ ಪ್ರಧ್ಯಾಪಕರಾದ ಡಾ.ರಾಮಕೃಷ್ಣ ಹೆಗ್ಡೆ, ಡಾ.ಮಹೇಶರಪ್ಪ, ಗ್ರಂಥಪಾಲಕರಾದ ಸುಬ್ರಮಣಿ, ಪೊನ್ನಂಪೇಟೆ ಚುನಾವಣಾಧಿಕಾರಿ ಮಹೇಶ್ ಹೊಳ್ಳ, ಕೊಡಗು ಜಿಲ್ಲಾ ಟೇಬಲ್ ಟೆನ್ನಿಸ್ ಅಸೋಸಿಯೇಷನ್ ಗೌರವಾಧ್ಯಕ್ಷ ವಿ.ಎಸ್.ಮೊಹಮ್ಮದ್ ಅಸೀಫ್ ಮತ್ತು ಪಿ.ಎಲ್.ಮಂಜುನಾಥ್, ಕೆ.ಎನ್. ಪ್ರವೀಣ್ ಶೇಟ್ ಹಾಜರಿದ್ದರು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪಂದ್ಯಾವಳಿಯನ್ನು ಅರಣ್ಯ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಎ.ಈಶ್ವರ್ ಆಯೋಜಿಸಿದ್ದರು.

ಹೆಗ್ಗಳದಲ್ಲಿ ಚಾಮುಂಡಿ ದೇವಿ ಕೋಲ



ಹೆಗ್ಗಳ ಗ್ರಾಮದಲ್ಲಿ ಕುನ್ನಮ್ಮ ಚಾಮುಂಡಿ ದೇವಿ ಕೋಲ ಮತ್ತು ಅಚ್ಚಪಂಡ ಗುರು ದೇವರ ಹಬ್ಬ ಆಚರಿಸಲಾಯಿತು.

ವಿರಾಜಪೇಟೆ, ಮೇ 21–ಹೆಗ್ಗಳ ಗ್ರಾಮದ ಕೈಮಡದಲ್ಲಿ ಶ್ರೀ ಕುನ್ನಮ್ಮ ಚಾಮುಂಡಿ ದೇವಿ ಕೋಲ ಮತ್ತು ಅಚ್ಚ ಪಂಡ ಗುರು ದೇವರ ಹಬ್ಬವನ್ನು ಎರಡು ದಿನ ವಿಜೃಂಭಣೆಯಿಂದ ಆಚರಿಸಲಾಯಿತು.

ಮೊದಲ ದಿನ ತೋತ ತೆರೆ ಮೇಲೇರಿ ಬೆಂಕಿ ಕೊಡುವುದು, ನಂತರ ಮೊದೇರಪ್ಪ ಹಾಗೂ ಕುಟ್ಟಿಚಾತ ಕೋಲದ ಬಳಿಕ ಅನ್ನಸಂತರ್ಪಣೆ ನಡೆಯಿತು. ಎರಡನೇ ದಿನ ವಿಷ್ಣು ಮೂರ್ತಿ ಕೋಲ, ಗುಳಿಗರಾಜ, ಅಜ್ಜಪ್ಪ ತೆರೆ ನಡೆಯಿತು. ಬಳಿಕ ಶ್ರೀ ಕುನ್ನಮ್ಮ ಚಾಮುಂಡಿ ದೇವಿ ಹಾಗೂ ಪೊಟ್ಟತೆರೆ ಕೋಲ ನಡೆಯಿತು. ನಂತರ ಹೆಗ್ಗಳ ಶ್ರೀ ಈಶ್ವರ ಸಾಸ್ಥವು ಭನಕ್ಕೆ ತೆರಳಿ ಪೂಜೆ ಸಲ್ಲಿಸಲಾಯಿತು.

ದೇವರ ಮನೆಗೆ ಬಂದು, ಅಚ್ಚಪಂಡ ಐನ್ ಮನೆಗೆ ತೆರಳಿದ ಬಳಿಕ ಪ್ರಸಾದ ವಿತರಿಸಿ, ಊರಿನ ಕೈಮಡದಲ್ಲಿ ಪೂಜೆ ಸಲ್ಲಿಸಲಾಯಿತು.

ಇದೇ ವೇಳೆ ಗ್ರಾಮದ ಮುಖ್ಯಸ್ಥರಾದ ಅಚ್ಚಪಂಡ ಮಹೇಶ್ ಗಣಪತಿ, ದೇವತಕ್ಕ ಉಲ್ಲಾಸ್ ಗಣಪತಿ, ಅಧ್ಯಕ್ಷ ಅಚ್ಚಪಂಡ ಗಣೇಶ್ ನಂಜಪ್ಪ, ಕಾರ್ಯದರ್ಶಿ ದಿನೇಶ್, ಉರುತಕ್ಕ ಮುತ್ತಣ್ಣ ಚೋಟು, ಪೊರೇರ ಬಿದ್ದಪ್ಪ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಬೀರುಗ ಗ್ರಾಮದ ನಿವಾಸಿ ನಾಪತ್ತೆ

ಗೋಣಿಕೊಪ್ಪ ಮೇ 21–ಬೀರುಗ ಗ್ರಾಮದ ನಿವಾಸಿ ಚಾತ (60) ನಾಪತ್ತೆಯಾಗಿದ್ದಾರೆ.



ಈತ ಮೇ 14ರಂದ ಬೆಟ್ಟಗೇರಿಯ ಮಗಳ ಮನೆಗೆ ಹೋಗುವುದಾಗಿ ಹೇಳಿ ಹೋದವರು ಇದುವರೆಗೂ ಪತ್ತೆಯಾಗಿಲ್ಲ ಎಂದು ಪುತ್ರಿ ಪಿಲೇಚಿಯವರು ಗೋಣಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈತನಿಗೆ ಗೋದಿ ಬಣ್ಣ, ಕಪ್ಪು ತಲೆ ಕೂದಲು ಇದ್ದು, ಕೊಡವ ಮತ್ತು ಯರವ ಭಾಷೆ ಮಾತನಾಡುತ್ತಾರೆ. ಈತ ಯಾರಿಗಾದರೂ ಪತ್ತೆಯಾದಲ್ಲಿ ಗೋಣಿಕೊಪ್ಪ ಪೊಲೀಸ್ ಠಾಣೆ ಅಥವಾ ದೂ.ಸಂ: 08274–247333ಕ್ಕೆ ತಿಳಿಸಬಹುದು.

ಶ್ರೀನಿವಾಸಪ್ರಸಾದ್ ನಿಷ್ಕಳಂಕ ರಾಜಕಾರಣಿ



ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಶ್ರೀನಿವಾಸಪ್ರಸಾದ್ ನುಡಿನಮನ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿದರು.

ಚಾಮರಾಜನಗರ, ಮೇ 21–ವಿ.ಶ್ರೀನಿವಾಸಪ್ರಸಾದ್ 6 ಬಾರಿ ಸಂಸದರಾಗಿ 50 ವರ್ಷ ಅತ್ಯಂತ ಪ್ರಾಮಾಣಿಕವಾಗಿ ರಾಜಕಾರಣ ಮಾಡಿದ್ದಾರೆ. ಅವರ ಬದುಕು ನಮ್ಮೆಲ್ಲರಿಗೂ ಮಾದರಿ ಆಗಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಶ್ರೀನಿವಾಸಪ್ರಸಾದ್ ಅವರು ರಾಜ್ಯ, ಕೇಂದ್ರದಲ್ಲಿ ಸಚಿವರಾಗಿ ಅತ್ಯಂತ ಪ್ರಾಮಾಣಿಕವಾಗಿ ರಾಜಕಾರಣ ಮಾಡಿದ್ದಾರೆ. ಅವರ ನಿಷ್ಕಳಂಕ ರಾಜಕಾರಣ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಶ್ರೀನಿವಾಸಪ್ರಸಾದ್ ಅತ್ಯಂತ ನೇರ, ನಿಷ್ಠುರ ರಾಜಕಾರಣಿಯಾಗಿದ್ದರು. ಬಿಜೆಪಿ ಸಂಸದರಾಗಿ ಪಕ್ಷದ ತಪ್ಪುಗಳನ್ನು ನೇರವಾಗಿ ಪ್ರಶ್ನೆ ಮಾಡುತ್ತಿದ್ದರು. ಅವರೊಬ್ಬ ಜಾತ್ಯಾತೀತ ವ್ಯಕ್ತಿಯಾಗಿದ್ದರು. ಎಲ್ಲಾ ಸಮುದಾಯದ ಮುಖಂಡರೊಂದಿಗೆ ಉತ್ತಮ ಬಾಂಧವ್ಯವಿಟ್ಟುಕೊಂಡಿದ್ದರು. ಶೋಷಿತ ಜನರ ಧ್ವನಿಯಾಗಿದ್ದರು. ಅವರಿಗೆ ಅವರೇ ಸಾಟಿ ಹೊರತು ಬೇರೆ ಯಾರು ಸಾಟಿ ಇಲ್ಲ ಎಂದು ಸ್ಮರಿಸಿದರು.

ಮೇರು ವ್ಯಕ್ತಿತ್ವ: ಶ್ರೀನಿವಾಸಪ್ರಸಾದ್ ಅವರು ಬಿಜೆಪಿಯೊಂದಿಗೆ ಒಡನಾಟ, ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದರು ನಿಷ್ಠುರವಾಗಿ ಮಾತನಾಡುತ್ತಿದ್ದರು. ಅಷ್ಟೇ ಪ್ರೀತಿ, ವಿಶ್ವಾಸದಿಂದ ಮಾತನಾಡುತ್ತಿದ್ದರು. ಅವರು ಮೇರು ವ್ಯಕ್ತಿತ್ವ ಹೊಂದಿದ್ದರು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಎಸ್.ಬಾಲರಾಜ್, ಹರ್ಷವರ್ಧನ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಮುಖಂಡರಾದ ಆರ್.ಸುಂದರ್, ಹನುಮಂತಶೆಟ್ಟಿ, ಚಾಮುಲ್ ಅಧ್ಯಕ್ಷ ನಾಗೇಂದ್ರ, ಹಾಪ್‌ಕಾಪ್ಸ್ ಅಧ್ಯಕ್ಷ ಲೋಕೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರ, ಮೂಡ್ನಾಕೂಡು ಪ್ರಕಾಶ್, ಚೂಡಾ ಮಾಜಿ ಅಧ್ಯಕ್ಷ ಕುಲಗಾಲ ಶಾಂತಮೂರ್ತಿ, ಬಾಲಸುಬ್ರಹ್ಮಣ್ಯಂ, ಡಾ.ಮೋಹನ್, ಎಸ್ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ನಗರ ಮಂಡಲ ಅಧ್ಯಕ್ಷ ಶಿವರಾಜ್ ಇತರರಿದ್ದರು.

ಸೋಮಹಳ್ಳಿಯಲ್ಲಿ ಹುಲಿ ಹೆಜ್ಜೆ ಪತ್ತೆ



ಬೇಗೂರು, ಮೇ 21–ಸಮೀಪದ ಸೋಮಹಳ್ಳಿ ಕೃಷಿ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಇದರಿಂದ ರೈತರು ಆತಂಕಕ್ಕೆ ಈಡಾಗಿದ್ದಾರೆ.

ಸೋಮಹಳ್ಳಿ ಗ್ರಾಮದ ಮಹೇಶ್ ಅವರ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಕೃಷಿಕರು ಜಮೀನುಗಳಿಗೆ ತೆರಳಲು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಹುಲಿಯನ್ನು ಸೆರೆ ಹಿಡಿದು ನಿರ್ಭೀತಿಯಿಂದ ಕೃಷಿ ಚಟುವಟಿಕೆ ನಡೆಸಲು ಅನುವು ಮಾಡಿಕೊಡಬೇಕೆಂದು ಈ ಭಾಗದ ರೈತರು ಒತ್ತಾಯಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ಬಿರುಸಿನ ಮಳೆ

● ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾಕಷ್ಟು ಅವಾಂತರ ● ಪಾದಚಾರಿಗಳ ಪರದಾಟ



ಬೇಗೂರು ಸಮೀಪದ ಮಂಚಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ಚಿಕ್ಕಣ್ಣ ಅವರ ಮನೆ ಮಳೆಗೆ ಕುಸಿದಿರುವುದು.

ಚಾಮರಾಜನಗರ, ಮೇ 21–ಜಿಲ್ಲಾದ್ಯಂತ ಕಳೆದೆರಡು ದಿನಗಳಿಂದ ಬಿರುಸಿನ ಮಳೆಯಾಗುತ್ತಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾಕಷ್ಟು ಅವಾಂತರ ಸೃಷ್ಟಿಸಿದೆ.

ಮಂಗಳವಾರ ಮಧ್ಯಾಹ್ನ ನಂತರ ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ನಿರ್ಮಾಣವಾಗಿ ಜಿಲ್ಲೆಯ ಹಲವೆಡೆ ಮಳೆಯಾಗಿದೆ. ಜಿಲ್ಲಾ ಕೇಂದ್ರದಲ್ಲಿ ಮಧ್ಯಾಹ್ನ 3.5ಕ್ಕೆ ಆರಂಭವಾದ ಮಳೆ ಅರ್ಧ ಗಂಟೆಗೂ ಹೆಚ್ಚು ಕಾಲ ಬಿರುಸಿನಿಂದ ಸುರಿದಿಯಿತು. ಸಂಜೆ, ರಾತ್ರಿ ಸಮಯದಲ್ಲಿ ಬಿಟ್ಟು ಬಿಟ್ಟು ಮಳೆಯಾಗಿದ್ದು, ಗುಡುಗು–ಮಿಂಚಿನ ಅಬ್ಬರವೂ ಜೋರಾಗಿತ್ತು. ಕಳೆದೆರಡು ದಿನಗಳಿಂದ ಜಿಲ್ಲಾ ಕೇಂದ್ರ ಸೇರಿದಂತೆ ಚಾಮರಾಜನಗರ ತಾಲೂಕಿನಲ್ಲಿ ಜಿಟಿ ಜಿಟಿ ಮಳೆಯಾಗುತ್ತಿದ್ದು, ರಸ್ತೆ ತುಂಬೆಲ್ಲಾ ನೀರು ಹರಿದು ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಪರದಾಡುವಂತಾಯಿತು.

ಯಳಂದೂರಿನಲ್ಲೂ ಉತ್ತಮ ಮಳೆ: ಯಳಂದೂರು ಹಾಗೂ ತಾಲೂಕು ವ್ಯಾಪ್ತಿಯಲ್ಲೂ ಮಂಗಳವಾರ ಮಧ್ಯಾಹ್ನ ಮೋಡ ಮುಸುಕಿದ ವಾತಾವರಣವಿತ್ತು. ಮಧ್ಯಾಹ್ನ 2.30ರಲ್ಲಿ ತುಂತುರು ಹನಿಯಿಂದ ಶುರುವಾದ ಮಳೆ ಸಂಜೆ ವೇಳೆಗೆ ಬಿರುಸು ಪಡೆಯಿತು. ಇದೇ ಮೊದಲ ಬಾರಿಗೆ ಬಿಳಿಗಿರಿರಂಗನಬೆಟ್ಟ ಮತ್ತು ತಾಲೂಕಿನ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲೂ ಮಳೆಯಾಗಿದೆ. ಉತ್ತಮ ಮಳೆಯಿಂದ ಅನ್ನದಾತನ ಮೊಗದಲ್ಲಿ ಹರ್ಷ ಮೂಡಿಸಿದ್ದು, ಕೃಷಿ ಇಲಾಖೆ ಕೇಂದ್ರಗಳಲ್ಲಿ ಬಿತ್ತನೆ ಬೀಜ ಕೊಳ್ಳಲು ಮುಂದಾಗಿದ್ದಾರೆ.


ಸಂತೇಮರಹಳ್ಳಿಯಲ್ಲಿ ಜಿಟಿ–ಜಿಟಿ ಮಳೆ: ಸಂತೇಮರಹಳ್ಳಿ ಹೋಬಳಿಯಾದ್ಯಂತ ಉತ್ತಮ ಮಳೆಯಾಗಿದ್ದು, ರೈತರಲ್ಲಿ ಮಂದಹಾಸ ಮೂಡಿಸಿದೆ. ಮಧ್ಯಾಹ್ನ ಆರಂಭವಾದ ಮಳೆ ಸಂಜೆವರೆಗೂ ಸಾಧಾರಣವಾಗಿ ಸುರಿಯಿತು. ಇದುವರೆಗೆ ಹೋಬಳಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ಪೂರ್ಣ ಪ್ರಮಾಣದಲ್ಲಿ ಮಳೆಯಾಗಿರಲಿಲ್ಲ.

ಇದುವರೆಗೆ ಬಿದ್ದ ಮಳೆಗೆ ಕೆಲ ಭಾಗಗಳಲ್ಲಿ ಬಿತ್ತನೆ ಮಾಡಲು ಸಾಧ್ಯವಿರಲಿಲ್ಲ. ಹಾಗಾಗಿ ರೈತರು ಕೃಷಿ ಚಟುವಟಿಕೆಗಳಿಂದ ದೂರ ಉಳಿದಿದ್ದರು. ಸೋಮವಾರ ಹಾಗೂ ಮಂಗಳವಾರ ಎಲ್ಲೆಡೆ ಮಳೆ ಆಗಿರುವುದರಿಂದ ರೈತರು ಬಿತ್ತನೆಗೆ ಸಜ್ಜುಗೊಂಡಿದ್ದಾರೆ. ಹೋಬಳಿ ವ್ಯಾಪ್ತಿಯ ಹೊಂಗನೂರು, ಇರಸವಾಡಿ, ಮಸಣಾಪುರ, ಗೂಳಿಪುರ, ಕೆಂಪನಪುರ ಹಾಗೂ ಸಂತೇಮರಹಳ್ಳಿ ಭಾಗಕ್ಕೆ ಉತ್ತಮವಾಗಿ ಮಳೆಯಾಗಿದೆ. ಕುದೇರು, ಉಮ್ಮತ್ತೂರು, ನವಿಲೂರು ಹಾಗೂ ಆಲ್ದೂರು ಗ್ರಾಮಗಳಲ್ಲಿ ಸಾಧಾರಣವಾಗಿ ಮಳೆಯಾಗಿದೆ.

ಸಂಚಾರ ಅಸ್ತವ್ಯಸ್ತ: ಜಿಲ್ಲಾದ್ಯಂತ ಸುರಿದ ಮಳೆಯಿಂದ ಹಲವೆಡೆ ವಾಹನ ಸಂಚಾರದಲ್ಲಿ ಅಡೆ–ತಡೆ ಉಂಟಾಯಿತು. ಮಳೆಯಿಂದ ಕೆಲವೆಡೆ ರಸ್ತೆಗಳಲ್ಲಿ ನೀರು ಹರಿದು ಸುಗಮ ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಗೋಪಾಲಸ್ವಾಮಿಬೆಟ್ಟದಲ್ಲಿ ಭಕ್ತರಿಗೆ ತೊಂದರೆ

ಗುಂಡ್ಲುಪೇಟೆ ತಾಲೂಕಿನ ಹಂಗಳ, ಗುಂಡ್ಲುಪೇಟೆ, ಚಿನ್ನಮಲ್ಲಿಪುರ, ಗೋಪಾಲಪುರ, ದೇವರಳ್ಳಿ, ಹೊಂಗಳ್ಳಿ, ಬರಗಿ ಭಾಗಗಳಲ್ಲೂ ಉತ್ತಮ ವರ್ಷಧಾರೆಯಾಗಿದೆ. ಗುಂಡ್ಲುಪೇಟೆ ಪಟ್ಟಣ ಸೇರಿದಂತೆ ತಾಲೂಕಿನ ಇತರ ಕಡೆಗಳಲ್ಲಿ ಸಾಧಾರಣ ಮಳೆ ಸುರಿದಿದೆ.



ಇನ್ನೂ ಹಿಮವದ್ ಗೋಪಾಲಸ್ವಾಮಿಬೆಟ್ಟದಲ್ಲಿ ಮಂಗಳವಾರ ಬೆಳಗ್ಗೆಯಿಂದಲ್ಲೇ ಜೋರಾಗಿ ಸುರಿದ ಮಳೆಯಿಂದ ಭಕ್ತರು ತೊಂದರೆ ಅನುಭವಿಸುವಂತಾಯಿತು. ಮಳೆ ನೀರಿ ಬೆಟ್ಟದ ತಪ್ಪಲಿನಲ್ಲಿ ಹೊಳೆಯ ರೀತಿ ಹರಿದ ಪರಿಣಾಮ ರಸ್ತೆಯಲ್ಲಿ ತಿರುಗಾಡಲು ಪರಿತಪ್ಪಿಸಲಾಯಿತು. ಕೊಳ್ಳೇಗಾಲ, ಹನೂರು, ಮಹದೇಶ್ವರಬೆಟ್ಟ ಹಾಗೂ ತಾಲೂಕು ವ್ಯಾಪ್ತಿಯ ಎಲ್ಲೆಡೆ ಹೆಚ್ಚು ಮಳೆಯಾಗಿದೆ. ಕೊಳ್ಳೇಗಾಲದಲ್ಲಿ ರಸ್ತೆ, ಬಡಾವಣೆಗಳು, ಕ್ರೀಡಾಂಗಣಗಳಲ್ಲಿ ನೀರು ನಿಂತು ಸಮಸ್ಯೆಯಾಯಿತು.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 21– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಿವಿಧ ವಸತಿ ಶಾಲೆಗಳಿಗೆ ಜಿಲ್ಲೆಯ ವಿಕಲಚೇತನ ಮಕ್ಕಳು 2024–25ನೇ ಸಾಲಿನ 6ನೇ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಒಟ್ಟು 826 ವಸತಿ ಶಾಲೆಗಳಲ್ಲಿ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್. ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾ ಗಾಂಧಿ, ಏಕಲವ್ಯ ಮಾದರಿ ವಸತಿ ಶಾಲೆಗಳ ಪೈಕಿ 807 ವಸತಿ ಶಾಲೆಗಳಲ್ಲಿ ಶೇ.25ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳಿಗೆ ಶೇ.10ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ, 6ನೇ ತರಗತಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗಾಗಿ ಸಂಬಂಧಪಟ್ಟ ವಸತಿ ನಿಲಯಗಳ ಮೇಲ್ವಿಚಾರಕರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರ ಸಮಸ್ಯೆಗಳ ಸ್ಪಂದನೆಗೆ ಸರ್ಕಾರ ನಿರ್ಧಾರ



ಚಾಮರಾಜನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮರಿತಿಬ್ಬೇಗೌಡ ಮಾತನಾಡಿದರು.

ಚಾಮರಾಜನಗರ, ಮೇ 21– ಶಿಕ್ಷಕರ ಬಹುದಿನಗಳ ಬೇಡಿಕೆಯಾಗಿರುವ ಓಪಿಎಸ್ ಮರು ಜಾರಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ತಜ್ಞರ ಸಮಿತಿ ರಚನೆ ಮಾಡಿದ್ದು, ಅದರ ವರದಿ ಬಳಿಕ ಸಾಧಕ ಬಾಧಕಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಐದನೇ ಬಾರಿ ಆಯ್ಕೆ ಬಯಸಿ, ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ಕಳೆದ ನಾಲ್ಕು ಅವಧಿಯಿಂದಲ್ಲೂ ಶಿಕ್ಷಕರ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿ ಅವರ ಆಶೋತ್ತರಗಳಿಗೆ ಸ್ಪಂದಿಸುತ್ತಿದ್ದೇನೆ. ಜೊತೆಗೆ ಅವರ ಧ್ವನಿಯಾಗಿದ್ದೇನೆ ಹೀಗಾಗಿ ಶಿಕ್ಷಕ ಬಂಧುಗಳು ನನ್ನಗೆ ಮತ್ತೊಮ್ಮೆ ಆರ್ಶಿವಾದ ಮಾಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಸರ್ಕಾರ ಜನರ ಆಶೋತ್ತರಗಳನ್ನು ಈಡೇಸುವಲ್ಲಿ ಸಫಲವಾಗಿದೆ. ಐದು ಗ್ಯಾರಂಟಿಗಳ ಜೊತೆಗೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಕೊಡುಗೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಕ್ಷಕರ ಸಮಸ್ಯೆಗಳ ಕುರಿತು 2 ದಿನ ಪ್ರತ್ಯೇಕ ವಿಧಾನ ಪರಿಷತ್ ಅಧಿವೇಶನವನ್ನು ವಿಶೇಷವಾಗಿ ನಡೆಸಿ, ಬಹಳಷ್ಟು ಚರ್ಚೆಗಳು ಸದನದಲ್ಲಿ ನಡೆಯುವಂತೆ ನೋಡಿಕೊಂಡಿದ್ದಾರೆ. ನಾನು ನಿಮ್ಮೆಲ್ಲರ ಪ್ರತಿನಿಧಿಯಾಗಿ ಸಮಸ್ಯೆಗಳ ಕುರಿತು ಸರ್ಕಾರದ ಗಮನ ಸೆಳೆದಿದ್ದೇನೆ. ಇದನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಮುಖ್ಯಮಂತ್ರಿಗೆ ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಬಗ್ಗೆ ಅಪಾರವಾದ ಕಾಳಜಿ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಕೆಪಿಸಿಸಿ ಕಾರ್ಯದರ್ಶಿಗಳಾದ ಶ್ರೀಕಂಠು, ರುಜೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್, ಎಸ್ಸಿ ಘಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಮು.ಶ್ರೀನಿವಾಸ ನಾಯಕ, ಮಹದೇವಯ್ಯ ಇತರರು ಇದ್ದರು.

ಚಿಕ್ಕತುಪ್ಪೂರಲ್ಲಿ ಬಸವ ಜಯಂತಿ



ಗುಂಡ್ಲುಪೇಟೆ ತಾಲೂಕಿನ ಚಿಕ್ಕತುಪ್ಪೂರು ಗ್ರಾಮದಲ್ಲಿ ವಿಜೃಂಭಣೆಯಿಂದ ಬಸವ ಜಯಂತಿ ಆಚರಿಸಲಾಯಿತು. ಇದೇ ವೇಳೆ ಬಸವೇಶ್ವರರ ಭಾವಚಿತ್ರವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಶಿವಪೂಜಾ ಮಠದ ಶ್ರೀ ಚನ್ನವೀರಸ್ವಾಮೀಜಿ, ಗ್ರಾಮದ ಮುಖಂಡರು ಹಾಗೂ ಯುವಕರು ಇದ್ದರು.

ಮೈಸೂರು ಮಿತ್ರ ಬುಧವಾರ 22 ಮೇ 2024

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ: ಅನಗತ್ಯ ಹೇಳಿಕೆ ನೀಡದಂತೆ ಸಚಿವರಿಗೆ ಸಿಎಂ ಸಿದ್ದರಾಮಯ್ಯ ಸೂಚನೆ



ಬೆಂಗಳೂರು, ಮೇ 21– ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾಗಿರುವ ಅಶ್ಲೀಲ ವಿಡಿಯೋಗಳಿರುವ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಗತ್ಯ ಹೇಳಿಕೆ ನೀಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂಪುಟದ ಸಚಿವರಿಗೆ ಮಂಗಳವಾರ ಸೂಚನೆ ನೀಡಿದ್ದಾರೆ. ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡ ನಡೆಸುತ್ತಿದೆ. ಪ್ರಕರಣದ ಕುರಿತು ಕೆಲ ಸಚಿವರ ಹೇಳಿಕೆಗಳು ತನಿಖೆಯ ದಾರಿ ತಪ್ಪಿಸುವ ಸಾಧ್ಯತೆ ಇದೆ. ಹೇಳಿಕೆಗಳಿಂದ ಪಕ್ಷಕ್ಕೂ ಕೂಡ ಡ್ಯಾಮೇಜ್ ಆಗುವ ಸಾಧ್ಯತೆ ಇದೆ. ಹೀಗಾಗಿ ಅನಗತ್ಯ ಹೇಳಿಕೆ ನೀಡದಂತೆ ಸಿಎಂ ಸಿದ್ದರಾಮಯ್ಯ ಅವರು ಸಚಿವರಿಗೆ ಕೆಲ ಸೂಚನೆ ನೀಡಿದ್ದಾರೆ. ಪೆನ್‌ಡ್ರೈವ್ ಪ್ರಕರಣದಲ್ಲಿ ಅನಗತ್ಯವಾಗಿ ಪ್ರತಿಕ್ರಿಯೆ ಕೊಡಬೇಡಿ. ಮಾತು ಹೆಚ್ಚಾದರೆ ಇಡೀ ಪ್ರಕರಣದ ದಿಕ್ಕೇ ತಪ್ಪಿ ಹೋಗಬಹುದು. ಹೀಗಾಗಿ ಪ್ರತಿಕ್ರಿಯೆ ಕೊಡುವಾಗ ಎಚ್ಚರಿಕೆ ವಹಿಸಿ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂಪುಟದ ಸಚಿವರಿಗೆ ಸಲಹೆ ನೀಡಿದ್ದಾರೆ. ಮುಖ್ಯಮಂತ್ರಿಗಳ ಈ ಸಲಹೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವರು ಗಂಭೀರವಾಗಿ ಪರಿಗಣಿಸಿದ್ದಾರೆ.

ಪ್ರಜ್ವಲ್ ರೇವಣ್ಣ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ಕೇಂದ್ರಕ್ಕೆ ಸಿಎಂ ಸಿದ್ದರಾಮಯ್ಯ ಪತ್ರ

ಬೆಂಗಳೂರು, ಮೇ 21– ನೂರಾರು ಮಹಿಳೆಯರ ಜೊತೆಗಿನ ರಾಸಲೀಲೆ ವಿಡಿಯೋಗಳು ಬಹಿರಂಗಗೊಂಡ ನಂತರ ವಿದೇಶಕ್ಕೆ ಪರಾರಿ ಯಾಗಿರುವ ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಮಂಗಳಾವರ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಗೃಹ ಸಚಿವರು, ಪ್ರಜ್ವಲ್ ರೇವಣ್ಣ ಬಂಧನಕ್ಕೆ ಈಗಾಗಲೆ ವಾರಂಟ್ ಜಾರಿ ಆಗಿದೆ. ಅದರ ಆಧಾರದ ಮೇಲೆ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಕೋರಿ ಪತ್ರ ಬರೆಯಲಾಗಿದೆ. ಪಾಸ್‌ಪೋರ್ಟ್ ರದ್ದು ಮಾಡಿದರೆ ಪ್ರಜ್ವಲ್ ಭಾರತಕ್ಕೆ ಬರಬೇಕಾಗುತ್ತದೆ ಎಂದರು.

ಇದೇ ವೇಳೆ, ಎಸ್‌ಐಟಿ ಮುಂದೆ ಶರಣಾಗುವಂತೆ ಪ್ರಜ್ವಲ್ ರೇವಣ್ಣ ಅವರಿಗೆ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ ಅವರು, ಇದು ಅವರ ಕುಟುಂಬದ ಆಂತರಿಕ ವಿಚಾರ ಎಂದರು.

ಇನ್ನು ಫೋನ್ ಟ್ಯಾಪ್ ಆಗುತ್ತಿದೆ ಎಂಬ ಮಾಜಿ ಸಿಎಂ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಸರ್ಕಾರದ ವತಿಯಿಂದ ಯಾರ ಫೋನ್ ಸಹ ಟ್ಯಾಪ್ ಮಾಡಿಲ್ಲ. ಒಂದು ವೇಳೆ ಫೋನ್ ಟ್ಯಾಪ್ ಆಗಿದ್ದರೆ ದಾಖಲೆ ಕೊಡಲಿ. ತನಿಖೆ ಮಾಡುತ್ತೇವೆ ಎಂದರು.

ವಕೀಲ ದೇವರಾಜೇಗೌಡ ಆಡಿಯೋ ಬಗ್ಗೆ ಎಸ್‌ಐಟಿ ನೋಡಿಕೊಳ್ಳುತ್ತೆ. ಪ್ರತಿಯೊಂದು ಹಂತದಲ್ಲಿ ತನಿಖೆ ಮಾಡಲು ನಾವು ಹೇಳಲ್ಲ. ತನಿಖೆ ಮಾಡಲು ಎಸ್‌ಐಟಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದೇವೆ ಎಂದು ಹೇಳಿದರು.

ಜಾಮೀನು ಸಿಕ್ಕರೂ ರೇವಣ್ಣಗೆ ತಪ್ಪಿಲ್ಲ ಸಂಕಷ್ಟ: ಹೈಕೋರ್ಟ್ ಮೆಟ್ಟಿಲೇರಿದ ಎಸ್‌ಐಟಿ



ಬೆಂಗಳೂರು, ಮೇ 21– ಮಹಿಳೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಸಿಕ್ಕರೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರಿಗೆ ಕಾನೂನು ಸಂಕಷ್ಟ ತಪ್ಪಿಲ್ಲ. ಜಾಮೀನು ಪಡೆದು ನಿರಾಳವಾಗಿದ್ದ ಹೆಚ್.ಡಿ.ರೇವಣ್ಣಗೆ ವಿಶೇಷ ತನಿಖಾ ತಂಡ ಶಾಕ್ ನೀಡಿದೆ. ಜನಪ್ರತಿನಿಧಿಗಳ ನ್ಯಾಯಾಲಯದ ಜಾಮೀನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದೆ.

ರೇವಣ್ಣ ಜಾಮೀನು ಆದೇಶ ವಜಾ ಮಾಡುವಂತೆ ಹೈಕೋರ್ಟ್‌ಗೆ ಎಸ್‌ಐಟಿ ಅರ್ಜಿ ಅಲ್ಲಿಸಿದೆ. ಹೈಕೋರ್ಟ್‌ನ ಜನಪ್ರತಿನಿಧಿಗಳ ಪೀಠಕ್ಕೆ ಅರ್ಜಿ ಸಲ್ಲಿಸಿದ ಎಸ್‌ಐಟಿ, ಕೆಳ ನ್ಯಾಯಾಲಯದ ಜಾಮೀನು ಆದೇಶ ರದ್ದು ಮಾಡುವಂತೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿ ನಡೆಯುವ ವಾದ–ಪ್ರತಿವಾದ ತೀವ್ರ ಕುತೂಹಲ ಕೆರಳಿಸಿದೆ ಎಸ್‌ಐಟಿ ಪರ ಎಸ್‌ಪಿಪಿ ರವಿವರ್ಮಕುಮಾರ್ ಹಾಗೂ ರೇವಣ್ಣ ಪರ ಸಿ.ವಿ.ನಾಗೇಶ್ ವಾದ ಮಂಡಿಸುವ ಸಾಧ್ಯತೆಗಳಿವೆ. ಇನ್ನು ಎಸ್‌ಐಟಿ ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಗೆ ರೇವಣ್ಣ ಪರ ವಕೀಲರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.



ಮೈಸೂರಿನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ–ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯಲ್ಲಿ ಮಹರ್ಷಿ ಭಗೀರಥ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿಕುಮಾರ್, ನಿರ್ದೇಶಕರಾದ ಚಂದ್ರೇಗೌಡ, ರುದ್ರಸ್ವಾಮಿ, ಸಂತೋಷ್ ಕುಮಾರ್, ಸದಸ್ಯರಾದ ಕಾಳೇಗೌಡ, ಬಲ್ಲೇಗೌಡ, ಪ್ರಕಾಶ್, ಶಾಂತಕುಮಾರ್, ಮಹಾದೇವ್, ಗೋವಿಂದ, ತಿಮ್ಮರಾಜು, ಕೆಂಪೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

2.5 ಟಿಎಂಸಿ ನೀರು ಹರಿಸಿ

ಇದನ್ನು ಆಕ್ಷೇಪಿಸಿದ ಕರ್ನಾಟಕ, ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ನೀರಿಲ್ಲದೇ ಜಲಾಶಯಗಳು ಬರಿದಾಗಿವೆ. ನಮ್ಮಲ್ಲಿರುವ ನೀರು ಕುಡಿಯಲು ಸರಬರಾಜು ಮಾಡುವುದಕ್ಕೆ ಸಾಕಾಗುತ್ತಿಲ್ಲ. ಇರುವ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲೂ ಆಗುವುದಿಲ್ಲ. ಮುಂಗಾರು ಸಾಮಾನ್ಯವಾಗಿದ್ದರೆ ಮಾತ್ರ ತಮಿಳುನಾಡಿಗೆ ನೀರು ಬಿಡಬಹುದು. ಇಲ್ಲದಿದ್ದರೆ ನೀರು ಬಿಡಲು ಸಾಧ್ಯವಿಲ್ಲ ಎಂದು ವಾದ ಮಂಡಿಸಿತು. ವಾದ–ಪ್ರತಿವಾದಗಳನ್ನು ಆಲಿಸಿದ ಸಿಡಬ್ಲ್ಯೂಎಂಎ, ತಮಿಳುನಾಡಿಗೆ ಕರ್ನಾಟಕವು ಮೇ ತಿಂಗಳ ಭಾಗವಾಗಿ 2.5 ಟಿಎಂಸಿ ನೀರು ಹರಿಸಬೇಕು ಎಂದು ನಿರ್ದೇಶನ ನೀಡಿದೆ. ಕರ್ನಾಟಕದ ಹಲವೆಡೆ ಪೂರ್ವ ಮುಂಗಾರು ಮಳೆ ಉತ್ತಮವಾಗಿದೆ. ಕೊಡಗಿನ ತ್ರಿವೇಣಿ ಸಂಗಮ ವ್ಯಾಪ್ತಿಯಲ್ಲಿ ಮಳೆ ಹೆಚ್ಚಾಗಿ ಸುರಿಯುತ್ತಿದ್ದು, ಕಾವೇರಿ ಒಡಲಿಗೆ ಜೀವಕಳೆ ಬಂದಿದೆ. ಕೊಡಗಿನಲ್ಲಿ ಮಳೆಯಾಗುತ್ತಿರುವ ಪರಿಣಾಮ ಕೆಆರ್‌ಎಸ್ ಅಣೆಕಟ್ಟೆಗೂ ಒಳಹರಿವು ಹೆಚ್ಚಾಗಿದೆ. ಕಳೆದ ಒಂದು ವಾರದಲ್ಲಿ ಕೆಆರ್‌ಎಸ್‌ಗೆ ಒಂದು ಟಿಎಂಸಿಯಷ್ಟು ನೀರು ಹರಿದುಬಂದಿದೆ. ಇಂದು ಅಣೆಕಟ್ಟೆಗೆ 1832 ಕ್ಯೂಸೆಕ್ ನೀರು ಹರಿದು ಬಂದಿದ್ದು, ನೀರಿನ ಮಟ್ಟ 81 ಅಡಿಗೆ ಏರಿಕೆ ಆಗಿದೆ. ಈ ನಡುವೆಯೇ ಸಿಡಬ್ಲ್ಯೂಎಂಎ ತಮಿಳುನಾಡಿಗೆ 2.5 ಟಿಎಂಸಿ ನೀರು ಹರಿಸುವಂತೆ ನಿರ್ದೇಶನ ನೀಡಿದೆ.

ಶೇ.35.25ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ

ಸಂಖ್ಯೆಯನ್ನು ಬಳಸಬೇಕು ಮತ್ತು ಲಾಗಿನ್ ವಿಂಡೋದಲ್ಲಿ ವಿಷಯ ಸಂಯೋಜನೆಯನ್ನು ಆಯ್ಕೆ ಮಾಡಬೇಕು. ಕರ್ನಾಟಕ ದ್ವಿತೀಯ ಪಿಯುಸಿ ಪೂರಕ ಫಲಿತಾಂಶ: ಈಗಾಗಲೇ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದೆ. ಆದರೆ ಮೊದಲ ಹಂತದಲ್ಲಿ ಅನುತ್ತೀರ್ಣರಾಗಿ ಎರಡನೇ ಬಾರಿಗೆ ರಾಜ್ಯಾದ್ಯಂತ ಒಟ್ಟು 301 ಪರೀಕ್ಷಾ ಕೇಂದ್ರಗಳಲ್ಲಿ ಏಪ್ರಿಲ್ 29 ರಿಂದ ಮೇ 16ರವರೆಗೆ ದ್ವಿತೀಯ ಪರೀಕ್ಷೆಗಳು ನಡೆಸಲಾಗಿತ್ತು. ಕರ್ನಾಟಕ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ 2024ರಲ್ಲಿ ಒಟ್ಟು 35.25% ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಹುಡುಗರ ಶೇಕಡಾವಾರು ಶೇಕಡಾ 31.31 ರಷ್ಟಿದ್ದರೆ, ಹುಡುಗಿಯರ ಉತ್ತೀರ್ಣ ಶೇಕಡಾ 40.44 ರಷ್ಟಿದೆ. ಈ ವರ್ಷ ಪೂರಕ ಪರೀಕ್ಷೆಗೆ ಒಟ್ಟು 1,49,824 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಇದರಲ್ಲಿ ಒಟ್ಟು 1,48,942 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳಲ್ಲಿ 84,632 ವಿದ್ಯಾರ್ಥಿಗಳು ಮತ್ತು 64,310 ವಿದ್ಯಾರ್ಥಿನಿಯರು ಸೇರಿದ್ದಾರೆ.

ಕರ್ನಾಟಕ ದ್ವಿತೀಯ ಪಿಯುಸಿ ಪೂರಕ ಫಲಿತಾಂಶ 2024 ಪರಿಶೀಲಿಸುವುದು ಹೇಗೆ?: Karresults karresults.nic.inನ ಅಧಿಕೃತ ಸೈಟ್‌ಗೆ ಭೇಟಿ ನೀಡಿ. ಮುಖಪುಟದಲ್ಲಿ ಕರ್ನಾಟಕ PUC II ಪೂರಕ ಫಲಿತಾಂಶ 2024 ಅನ್ನು ಕ್ಲಿಕ್ ಮಾಡಿ. ಲಾಗಿನ್ ವಿವರಗಳನ್ನು ನಮೂದಿಸಿ ಮತ್ತು ಸಲ್ಲಿಸು ಕ್ಲಿಕ್ ಮಾಡಿ. ನಿಮ್ಮ ಫಲಿತಾಂಶವನ್ನು ಪರದೆಯ ಮೇಲೆ ಪ್ರದರ್ಶಿಸಲಾಗುತ್ತದೆ. ಫಲಿತಾಂಶ ಮತ್ತು ಡೌನ್‌ಲೋಡ್ ಪುಟವನ್ನು ಪರಿಶೀಲಿಸಬಹುದು.

ಮುಂಗಾರು ಅಬ್ಬರ ಸಾಧ್ಯತೆ

ಸರ್ವ ಸನ್ನದ್ಧರಾಗುವಂತೆ ಅಧಿಕಾರಿಗಳಿಗೆ ಡಿಸಿ ಸೂಚನೆ

●ಪ್ರತಿಯೊಂದು ಗ್ರಾಮದಲ್ಲೂ ಕಾಳಜಿ ಕೇಂದ್ರ ಸ್ಥಾಪನೆ ●ಮನೆಗೆ ಹಾನಿಯಾದರೆ ಪರಿಹಾರ●ತಾಲೂಕು ಮಟ್ಟದಲ್ಲಿ ಹೆಲ್ಪ್‌ಲೈನ್



ಮೈಸೂರು, ಮೇ 21–ಈ ಬಾರಿ ಉತ್ತಮವಾದ ಮುಂಗಾರು ಮಳೆಯಾಗುವ ಸಾಧ್ಯತೆಯಿದ್ದು, ಅತಿಯಾದ ಮಳೆಯಿಂದ ಮನೆಗೆ ಹಾನಿಯುಂಟಾಗಿ ವಾಸಿಸಲು ಕಷ್ಟವಾಗುವಾಗಬಹುದು. ಹಾಗಾಗಿ ಪ್ರತಿಯೊಂದು ಗ್ರಾಮದಲ್ಲೂ ಕಾಳಜಿ ಕೇಂದ್ರವನ್ನು ಸ್ಥಾಪಿಸಿ, ಅಲ್ಲಿ ಜನರು ವಾಸವಿರಲು ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಕೇಸ್ವಾನ್ ಸಭಾಂಗಣದಲ್ಲಿ ನಡೆದ ಮಳೆ ಮುಂಜಾಗ್ರತಾ ಕ್ರಮಗಳ ಸಭೆಯಲ್ಲಿ ಮಾತನಾಡಿದ ಅವರು, ತಹಶೀಲ್ದಾರರು, ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವಂತಹ ಗ್ರಾಮಗಳಿಗೆ ಸ್ವತಃ ಭೇಟಿ ನೀಡಿ ಮಳೆ ಬಂದ ಸಂದರ್ಭದಲ್ಲಿ ಯಾವ ಯಾವ ಸ್ಥಳಗಳಲ್ಲಿ ನೀರು ನಿಲ್ಲುತ್ತದೆ. ಹಾಗೂ ಎಷ್ಟು ಪ್ರಮಾಣದ ನೀರು ನಿಲ್ಲುತ್ತದೆ ಎಂಬುದನ್ನು ಪರೀಕ್ಷಿಸಬೇಕು. ಜೊತೆಗೆ ಬ್ಲಾಕ್ ಆಗುವ ಡ್ರೈನೇಜ್‌ಗಳನ್ನು ಗುರುತಿಸಿ ಅದರಿಂದ ಯಾವ ಏರಿಯಾಗಳಿಗೆ ತೊಂದರೆ ಇದೆ ಎಂಬುದನ್ನು ತಿಳಿದು ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ನದಿ ಪಾತ್ರಗಳಲ್ಲಿರುವ ಗ್ರಾಮಗಳಲ್ಲಿ ಪ್ರವಾಹ ಆಗುವ ಸಾಧ್ಯತೆಗಳಿದ್ದು, ಅಲ್ಲಿನ ಜನರಿಗೆ ಜಾಗರೂಕತೆಯಿಂದ ಇರುವಂತೆ ಅರಿವು ಮೂಡಿಸಬೇಕು. ಒಂದು ವೇಳೆ ಪ್ರವಾಹ ಅಥವಾ ಅತಿಯಾದ ನೀರಿನ ಒತ್ತಡ ಕಂಡುಬಂದಲ್ಲಿ ಅಲ್ಲಿನ ಜನರನ್ನು ತಕ್ಷಣವೇ ಸ್ಥಳಾಂತರಿಸಲು ವ್ಯವಸ್ಥೆ ಮಾಡಬೇಕು. ತೀಕ್ಷ್ಣತೆಯನ್ನು ಗುರುತಿಸಿಕೊಳ್ಳಲು ಜನರಿಗೆ ಅಲರಾಮಿಂಗ್ ಸಿಸ್ಟಮ್ ಬಗ್ಗೆ ತಿಳಿಸಬೇಕು ಎಂದರು.

ನಗರ ಪ್ರದೇಶಗಳಲ್ಲಿ ಕೃತಕ ಪ್ರವಾಹಗಳು ಆಗುವ ಸಾಧ್ಯತೆಗಳಿದ್ದು, ಅದಕ್ಕೆ ಸಂಬಂಧಿಸಿದಂತೆ ಈಗಿನಿಂದಲೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಜನರು ಎಚ್ಚರಿಕೆಯಿಂದ ಇರುವಂತೆ ಜಾಗೃತಿ ಮೂಡಿಸಬೇಕು. ಪ್ರತಿಯೊಂದು ತಾಲೂಕು ಮಟ್ಟದಲ್ಲೂ ಪ್ರವಾಹ ಅಥವಾ ಮಳೆಗಾಲದ ಹೆಲ್ಪ್‌ಲೈನ್ ಅನ್ನು ಸ್ಥಾಪಿಸಿ ಅದು ದಿನದ 24 ಗಂಟೆಯೂ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಹೆಲ್ಪ್‌ಲೈನ್ ಬಂದಂತಹ ಕರೆಗಳಿಗೆ ತಕ್ಷಣವೇ ಸ್ಪಂದಿಸಿ ಸಮಸ್ಯೆಯನ್ನು ಬಗೆಹರಿಸಲು ಮುಂದಾಗಬೇಕು ಎಂದು ಸೂಚಿಸಿದರು.

ಶಿಥಿಲಗೊಂಡ ಕಟ್ಟಡಗಳು, ಬ್ರಿಡ್ಜ್‌ಗಳು, ಮಣ್ಣಿನ ಮನೆಗಳು ಹಾಗೂ ಒಣ ಮರಗಳಿಂದ ಆದಷ್ಟು ಎಚ್ಚರಿಕೆಯಿಂದ ಇರುವಂತೆ ಜನರಿಗೆ ಮಾಹಿತಿ ನೀಡಬೇಕು. ಇಲ್ಲವಾದರೆ ಅತಿಯಾದ ಮಳೆಗಾಳಿಯ ರಭಸಕ್ಕೆ ಅವು ನೆಲಕ್ಕುರುಳುವ ಸಾಧ್ಯತೆಗಳಿದ್ದು, ಇದರಿಂದ ಪ್ರಾಣ ಹಾನಿಯಾಗುವ ಸಂಭವ ಬರಬಹುದು ಎಂದು ಎಚ್ಚರಿಸಿದರು.

ವಿದ್ಯುತ್ ಸಂಪರ್ಕ ನೀಡುವವರು ಎಲ್ಲಾದರೂ ಸಡಿಲ ಸಂಪರ್ಕ ಆಗಿದೆಯೇ ಅಥವಾ ಅಪಾಯಕಾರಿ ಸಂಪರ್ಕಗಳು ಇದ್ದು ಅದರಿಂದ ಜನರಿಗೆ ತೊಂದರೆಯಾಗುವಂತಿದ್ದರೆ ಅವುಗಳ ಬಗ್ಗೆ ಈಗಲೇ ಕ್ರಮ ಕೈಗೊಳ್ಳಬೇಕು. ಇದರ ಸಂಬಂಧ ಚೆಸ್ಕಾಂ ಮತ್ತು ಅರಣ್ಯ ಇಲಾಖೆಯವರು ಮುಂದಿನ ದಿನಗಳಿಗೆ ಬೇಕಾಗುವ ಸಾಧನಗಳನ್ನು ಈಗಲೇ ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ಸೂಚಿಸಿದರು.

ಮಳೆಗಾಲವಾದ್ದರಿಂದ ನಿಂತ ನೀರಿನಲ್ಲಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿರುತ್ತದೆ. ಇದರಿಂದ ಡೆಂಗ್ಯೂ, ಮಲೇರಿಯಾ ಇತ್ಯಾದಿಗಳು ಹರಡುವ ಸಾಧ್ಯತೆಗಳು ಹೆಚ್ಚು. ಹಾಗಾಗಿ ಜನರಿಗೆ ತಮ್ಮ ಸುತ್ತ–ಮುತ್ತಲಿನ ಪ್ರದೇಶದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವಂತೆ ಮಾಹಿತಿ ನೀಡಬೇಕು.

ಜಾನುವಾರುಗಳು, ಕೋಳಿ ಫಾರಂಗಳಿಗೆ ಸಂಬಂಧಿಸಿದಂತೆ ಅವು ಸಾವನ್ನಪ್ಪಿದರೆ ತಕ್ಷಣವೇ ಅವುಗಳನ್ನು ಶವ ಸಂಸ್ಕಾರ ಮಾಡಿ. ದಾಖಲೆಗಳನ್ನು ಪರೀಕ್ಷಿಸಿ ಪರಿಹಾರವನ್ನು ನೀಡಬೇಕು ಎಂದು ತಿಳಿಸಿದರು.

ಮುಂಗಾರು ಮಳೆಯಲ್ಲಿ ತೋಟಗಾರಿಕಾ ಬೆಳೆಗಳು ನಷ್ಟವಾಗುತ್ತಿದ್ದು, ಅವುಗಳನ್ನು ಗಮನಿಸಿ ಸರಿಯಾದ ಪುರಾವೆಯೊಂದಿಗೆ ರೈತರಿಗೆ ಪರಿಹಾರ ನೀಡಬೇಕು. ಕೃಷಿ ಇಲಾಖೆಯವರು ಇಂದಿನಿಂದಲೇ ರೈತರಿಗೆ ಅವಶ್ಯಕತೆ ಇರುವಂತಹ ಗೊಬ್ಬರ, ಬೀಜಗಳು, ಇತ್ಯಾದಿಗಳನ್ನು ಸಂರಕ್ಷಿಸಿಕೊಂಡು, ಪೂರೈಕೆ ಮಾಡಬೇಕು ಎಂದು ಸೂಚಿಸಿದರು.

ಸದ್ಯಕ್ಕೆ ಅತ್ಯಂತ ಅವಶ್ಯಕವಿರುವ ಪ್ರಮುಖ ಕೆರೆಗಳ ಹೂಳೆತ್ತುವ ಕೆಲಸ ಹಾಗೂ ನಾಲೆಗಳನ್ನು ತೆರೆಯುವ ಕಾರ್ಯಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ ಗಾಯತ್ರಿ ಅವರು ಮಾತನಾಡಿ, ಈ ಸಮಯದಲ್ಲಿ ಆರೋಗ್ಯದ ಸಮಸ್ಯೆ ಹೆಚ್ಚಾಗುವುದರಿಂದ ನೀರನ್ನು ಪರೀಕ್ಷಿಸಿ ಶುದ್ಧ ಕುಡಿಯುವ ನೀರನ್ನು ಸೇವಿಸಬೇಕು. ಅಲ್ಲದೆ ಜನರಿಗೆ ಕುದಿಸಿ ಆರಿಸಿದ ನೀರನ್ನು ಕುಡಿಯುವಂತೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಮಳೆ ಅಥವಾ ಪ್ರವಾಹದಿಂದ ಮನೆಯೊಳಗೆ ನೀರು ನುಗ್ಗುವುದು, ಅಲ್ಲಿನ ವಸ್ತುಗಳಿಗೆ ಹಾನಿಯುಂಟಾದಲ್ಲಿ ಅಂತಹ ಕುಟುಂಬಕ್ಕೆ 5000 ರೂ. ಪರಿಹಾರ ಧನ ನೀಡಬೇಕು ಎಂದು ತಿಳಿಸಿದರು.

ಅತಿಯಾದ ಮಳೆಯಿಂದ ಮನೆಗೆ ಪೂರ್ಣ ಪ್ರಮಾಣದಲ್ಲಿ ಹಾನಿಯುಂಟಾಗಿ ಪುನರ್ ನಿರ್ಮಾಣ ಮಾಡುವ ಪರಿಸ್ಥಿತಿ ಇದ್ದರೆ ಅದಕ್ಕೆ 1 ಲಕ್ಷದ 20 ಸಾವಿರ ರೂ. ಪರಿಹಾರ ಧನ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಹಾನಿಯುಂಟಾಗಿ ರಿಪೇರಿ ಮಾಡಬಹುದಾಗಿದ್ದರೆ ಅಂತಹವರಿಗೆ 6,500 ರೂ. ಪರಿಹಾರ ಧನವನ್ನು ದಾಖಲೆಗಳನ್ನು ಪರಿಶೀಲಿಸಿ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಹವಾಮಾನ ಪರೀಕ್ಷಿಸಲು ಹೊಸ ಆ್ಯಪ್

ಸಿಡಿಲು ಹಾಗೂ ದಾಮಿನಿ ಆ್ಯಪ್‌ಗಳ ಮೂಲಕ ಪ್ರತಿ ದಿನದ ಹವಾಮಾನ ಹಾಗೂ 30 ನಿಮಿಷಕ್ಕೂ ಮುಂಚೆಯೇ ಮಳೆ, ಅಲ್ಲದೆ ಎಷ್ಟು ಪ್ರಮಾಣದಲ್ಲಿ ಮಳೆಯಾಗುತ್ತದೆ ಎಂಬುದರ ಬಗ್ಗೆ ಮುನ್ಸೂಚನೆ ಪಡೆಯಬಹುದಾಗಿದ್ದು, ಇದರಿಂದ ಜನರು ಮುಂಜಾಗ್ರತೆಯನ್ನು ವಹಿಸಿ ಮುಂದಾಗುವ ಅನಾಹುತಗಳಿಂದ ತಪ್ಪಿಸಿಕೊಳ್ಳಬಹುದಾಗಿದೆ.

ಮೈಸೂರು ವೀಕ್ಷಣೆಗೆಂದು ಬರುವ ಪ್ರವಾಸಿಗರಿಗೆ ನದಿಯ ಪಾತ್ರಕ್ಕೆ ಈಜಲು ಹೋಗದಂತೆ ನೋಡಿಕೊಳ್ಳಬೇಕು. ಆದಷ್ಟು ಎಚ್ಚರಿಕೆಯಿಂದ ಇರುವಂತೆ ಅವರಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಶಿವರಾಜು, ಕೃಷಿ ಇಲಾಖೆಯ ಅಧಿಕಾರಿಗಳು, ತೋಟಗಾರಿಕಾ ಇಲಾಖೆ ಅಧಿಕಾರಿಗಳು, ಚೆಸ್ಕಾಂನ ಅಧಿಕಾರಿಗಳು, ಪಶುಸಂಗೋಪನ ಇಲಾಖೆ ಅಧಿಕಾರಿಗಳು ಸೇರಿದಂತೆ ಮಹಾನಗರ ಪಾಲಿಕೆ ಮತ್ತು ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಜೂ.9ರಿಂದ ಮೈಸೂರಲ್ಲಿ ಪಾರಂಪರಿಕ ತ್ಯಾಜ್ಯ ತೆರವು ಕಾರ್ಯ ಆರಂಭ

20 ವರ್ಷಗಳಿಂದ ವಿಲೇವಾರಿಯಾಗದ ಕಸಕ್ಕೆ ಮುಕ್ತಿ

●ಸಂಸದ ಪ್ರತಾಪ್ ಸಿಂಹರ ಕಾಳಜಿಯಿಂದ ಟೆಂಡರ್ ಪ್ರಕ್ರಿಯೆ ಪೂರ್ಣ ●ಈಗಾಗಲೇ ಆರಂಭವಾಗಬೇಕಿದ್ದ ವಿಲೇವಾರಿ ಕಾರ್ಯಕ್ಕೆ ಚುನಾವಣಾ ನೀತಿ ಸಂಹಿತೆ ಅಡ್ಡಿ



ಮೈಸೂರು, ಮೇ 21(ಜಿಎ)–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರಂ ಕಸ ಸಂಗ್ರಹಣಾ ಘಟಕದಲ್ಲಿ 20 ವರ್ಷದಿಂದ ವಿಲೇವಾರಿಯಾಗದೆ ಉಳಿದಿರುವ ಮೈಸೂರಿನ ಅಂದಾಜು 6 ಲಕ್ಷ ಟನ್ ಲೆಗಸಿ ವೇಸ್ಟ್ (ಪಾರಂಪರಿಕ ತ್ಯಾಜ್ಯ)ತೆರವಿನ ಕಾರ್ಯ ಜೂ.9ರಿಂದ ಆರಂಭವಾಗಲಿದೆ.

ಮೈಸೂರಿನಲ್ಲಿ ನಿತ್ಯವೂ 500 ಟನ್ ಕಸ ಉತ್ಪತ್ತಿಯಾಗುತ್ತದೆ. ಅದರಲ್ಲಿ 250 ಟನ್ ಕಸ ವಿಲೇವಾರಿಯಾಗುತ್ತಿದೆ. ನಿತ್ಯ 250 ಟನ್ ಕಸ ಹಾಗೆಯೇ ಬಾಕಿ ಉಳಿಯುತ್ತಿದೆ. ಸುಮಾರು 20 ವರ್ಷಗಳಿಂದ ಹೀಗೆ ಬಾಕಿ ಉಳಿದಿದೆ. ಈ ಕಸವನ್ನು ವಿಲೇವಾರಿ ಮಾಡುವ ಬಗ್ಗೆ ಹಲವು ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 59 ಕೋಟಿ ರೂ. ಕ್ರಿಯಾ ಯೋಜನೆ ಸಿದ್ಧಗೊಳಿಸಲಾಗಿತ್ತು. ಆದರೆ, ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಕಾಮಗಾರಿ ಆರಂಭಿಸಲು ಸಾಧ್ಯವಾಗಲಿಲ್ಲ.

ಸಂಪೂರ್ಣ ವೈಜ್ಞಾನಿಕವಾಗಿ ಕಸ ವಿಲೇವಾರಿ ಆಗಬೇಕಿರುವ ಹಿನ್ನೆಲೆಯಲ್ಲಿ 59 ಕೋಟಿ ರೂಗಳ ಪರಿಷ್ಕೃತ ಡಿಪಿಆರ್ ಸಿದ್ಧಪಡಿಸಿ ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಈ ಪ್ರಸ್ತಾವ ಕುರಿತು ಚುನಾವಣೆ ನೀತಿ ಸಂಹಿತೆ ಜಾರಿಗೂ ಮುನ್ನಾ ದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಯೋಜನೆಗೆ ಅನುಮೋದನೆ ದೊರೆತಿದೆ. ಇದರಿಂದಾಗಿ ಹತ್ತಾರು ವರ್ಷದಿಂದ ಪರಿಸರಕ್ಕೆ ಮಾರಕವಾಗಿರುವ ಹಾಗೂ ಸ್ಥಳೀಯರ ಆರೋಗ್ಯಕ್ಕೆ ಕಂಟಕವಾಗಿರುವ ಈ ಸಮಸ್ಯೆಯು ಪರಿಹಾರದ ಹಂತ ತಲುಪಿದೆ.

2 ಕೋಟಿ ರೂ. ವರೆಗಿನ ಟೆಂಡರ್ ಅನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ, 5 ಕೋಟಿ ರೂ.ವರೆಗಿನ ಟೆಂಡರ್ ಅನ್ನು ವಿಭಾಗೀಯ ಮಟ್ಟದಲ್ಲಿ ಅನುಮೋದನೆ ಪಡೆಯಬಹುದು. ಆದರೆ, ಈ ಯೋಜನೆ 59 ಕೋಟಿ ರೂ. ಆಗಿರುವುದರಿಂದ ಪಾಲಿಕೆ ಹಂತದಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಟೆಂಡರ್ ಪ್ರಕ್ರಿಯೆ ನಡೆಸಿ ಅದನ್ನು ಸರ್ಕಾರಕ್ಕೆ ಕಳುಹಿಸಿ ಸರ್ಕಾರದಿಂದಲೇ ಅನುಮತಿ ಪಡೆಯಬೇಕಿದೆ. ಹೀಗಾಗಿ ಕಳೆದ ಏಪ್ರಿಲ್‌ನಲ್ಲೇ ಸರ್ಕಾರ ಅನುಮೋದನೆ ನೀಡಿದರೂ ತದ ನಂತರ ಚುನಾವಣೆ ನೀತಿ ಸಂಹಿತೆ ಘೋಷಣೆಯಾಯಿತು. ಈ ಹಿನ್ನೆಲೆಯಲ್ಲಿ ಕಾಮಗಾರಿ ತಡವಾಯಿತು.

ಸಂಸದ ಪ್ರತಾಪ್ ಸಿಂಹ ಅವರ ವಿಶೇಷ ಕಾಳಜಿಯಿಂದ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಆಂಧ್ರ ಮೂಲದ ಸಂಸ್ಥೆಗೆ ಟೆಂಡರ್ ನೀಡಲಾಗಿದ್ದು, ಚುನಾವಣಾ ನೀತಿ ಸಂಹಿತೆ ಮುಕ್ತಾಯವಾದ ನಂತರ ಜೂ.9ರಂದು ವಿಶೇಷ ಪೂಜೆ ಸಲ್ಲಿಸಿ ಕಸ ವಿಲೇವಾರಿ ಕಾರ್ಯ ಆರಂಭವಾಗಲಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯೋಜನೆಯಂತೆ 7 ಲಕ್ಷ ಮೆಟ್ರಿಕ್ ಟನ್ ಕಸದಲ್ಲಿರುವ ಗೊಬ್ಬರ, ಮಣ್ಣು, ಲೋಹ, ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ವಿಂಗಡಣೆ ಮಾಡಲಾಗುತ್ತದೆ. ನಂತರ ಉಪಯುಕ್ತವಾದ ಮರುಬಳಕೆ ವಸ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತದೆ. ಆದರೆ ಈ ಕಸದ ರಾಶಿಯಲ್ಲಿ ಹೆಚ್ಚಾಗಿ ಪ್ಲಾಸ್ಟಿಕ್ ಸೇರಿದೆ. ಇದನ್ನು ಸಿಮೆಂಟ್ ತಯಾರಿಕೆಗೆ ನೀಡಲಾಗುತ್ತದೆ. ಈ ಮೂಲಕ ಕಸದ ರಾಶಿ ತೆರವುಗೊಳಿಸಿ, ಬಹಳ ದಿನ ಕಸ ಮುಕ್ತ ಜೆಪಿ ನಗರದ ಕನಸು ನನಸಾಗಲಿದೆ ಎಂದರು.

ಸೋರುತಿಹುದು ಪಾಲಿಕೆ ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡ

ಅಧಿಕಾರಿಗಳು, ತಜ್ಞರಿಂದ ಪರಿಶೀಲನೆ; ಪುನರುಜ್ಜೀವನಕ್ಕೆ ಎಸ್ಟಿಮೇಟ್ ತಯಾರಿಸಲು ನಿರ್ಧಾರ



ಮಳೆಯಿಂದಾಗಿ ಸೋರುತ್ತಿರುವ ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಪಾಲಿಕೆ ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡದ ತಾರಸಿಯನ್ನು ಮಂಗಳವಾರ ಅಧಿಕಾರಿಗಳು, ಪಾರಂಪರಿಕ ತಜ್ಞರು ಪರಿಶೀಲಿಸಿದರು.

ಮೈಸೂರು, ಮೇ 21(ಆರ್‌ಕೆ)– ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡ ಸೋರುತ್ತಿದೆ.

ಸೋಮವಾರ ಸುರಿದ ಧಾರಾಕಾರ ಮಳೆಗೆ ತಾರಸಿಯಿಂದ ನೀರು ಸೋರಿ ಇಂದು ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿಯ ಮೊದಲನೇ ಮಹಡಿಯ ಕೊಠಡಿಗಳಲ್ಲಿ ನೀರು ನಿಂತು ಕೆಲಸಕ್ಕೆ ತೊಂದರೆಯಾಯಿತು.

ಅಧಿಕಾರಿಗಳು ಮತ್ತು ಸಿಬ್ಬಂದಿ ಇಂದು ಬೆಳಗ್ಗೆ ಕಚೇರಿಗೆ ಬಂದಾಗ ನೀರು ತುಂಬಿದ್ದರಿಂದ ಕೆಲ ಕಾಲ ಹೊರಗೆ ನಿಂತಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಪಾಲಿಕೆ ಆಯುಕ್ತೆ ಡಾ. ಎನ್.ಎನ್.ಮಧು ಅವರು, ತಕ್ಷಣವೇ ಪಾರಂಪರಿಕ ತಜ್ಞ ಪ್ರೊ. ಎನ್.ರಂಗರಾಜು ನಮ್ಮ ಮೈಸೂರು ಫೌಂಡೇಷನ್ (NMF) ಸಂಚಾಲಕ ದಶರಥರನ್ನು ಕರೆಸಿಕೊಂಡು ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧು, ನಗರ ಯೋಜನಾ ಅಸಿಸ್ಟೆಂಟ್ ಡೈರೆಕ್ಟರ್ ಸಹನಾ, ಅಸಿಸ್ಟೆಂಟ್ ಇಂಜಿನಿಯರ್ ಶ್ವೇತಾರೊಂದಿಗೆ ಟೆರೆಸ್‌ಗೆ ತೆರಳಿ ಪರಿಶೀಲನೆ ನಡೆಸಿದರು.

ಮಳೆ ನೀರು ಸರಾಗವಾಗಿ ಹರಿದು ಹೋಗಲು ಅಳವಡಿಸಿರುವ ಪೈಪುಗಳು ಬ್ಲಾಕ್ ಆಗಿರುವುದಲ್ಲದೆ, ತಾರಸಿ ಶಿಥಿಲಗೊಂಡಿರುವುದರಿಂದ ನೀರು ಸೋರಲು ಕಾರಣವಾಗಿದೆ ಎಂಬುದು ಕಂಡುಬಂದಿತು. ಆಗಿಂದಾಗ್ಗೆ ತಾರಸಿ ಮೇಲೆ ಸಿಮೆಂಟ್ ಕಾಂಕ್ರೀಟ್ ಹಾಕಿರುವ ಕಾರಣ ನೈಜ ತಾರಸಿಗಿಂತ ಅರ್ಧ ಅಡಿ ಹೆಚ್ಚಿನ ಕಾಂಕ್ರೀಟ್ ಮಾಡಲಾಗಿದೆ. ಅದನ್ನು ತೆರವುಗೊಳಿಸಿ ಪಾರಂಪರಿಕ ಶೈಲಿಯಲ್ಲಿ ಕಪ್ಪೆ ಚಿಪ್ಪು, ಲೈಮ್ ಕಾಂಕ್ರೀಟ್ ಹಾಕಿ ದುರಸ್ತಿ ಮಾಡಬೇಕಾಗಿದೆ ಎಂದು ಪ್ರೊ. ರಂಗರಾಜು ಅವರು ಸಲಹೆ ನೀಡಿದರು.

ತಕ್ಷಣವೇ ಎಸ್ಟಿಮೇಟ್ ತಯಾರಿಸಿ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ತೆರಳಿ ವಸ್ತುಸ್ಥಿತಿ ವಿವರಿಸಿ ಕಟ್ಟಡ ಪುನರುಜ್ಜೀವನ ಮತ್ತು ಸಂರಕ್ಷಣೆಗೆ ಅಗತ್ಯ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿಯೂ ಪಾಲಿಕೆ ಆಯುಕ್ತೆ ಮಧು ಅವರು ತಿಳಿಸಿದರು.

ಮಾಂಟೆಸರಿ ಎನ್‌ಟಿಟಿಸಿ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಮೇ 21– ಭಾರತ ಸರ್ಕಾರ ಹಾಗೂ ನ್ಯಾಷನಲ್ ಡಿಜಿಟಲ್ ಲಿಟ್ರೆಸಿ ಮಿಷನ್‌ನ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿಯು 2024–25ರ ಸಾಲಿನ ಮಾಂಟೆಸರಿ ಡಿಎನ್‌ಟಿಟಿಸಿ ಹಾಗೂ ನರ್ಸರಿ ಶಿಕ್ಷಕರ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ನಂತರದ ಯಾವುದೇ ವಿದ್ಯಾರ್ಹತೆ ಹೊಂದಿರುವ 18ರಿಂದ 55ರ ವಯೋಮಾನದ ಆಸಕ್ತರು ಇದರ ಫಲಾನುಭವಿಗಳಾಗಿರುತ್ತಾರೆ. ಮಾಂಟೆಸರಿ ಶಿಕ್ಷಣ ವ್ಯವಸ್ಥೆ, ಮಾದರಿ ಹಾಗೂ ಪಠ್ಯಕ್ರಮ, ಮಕ್ಕಳ ಬೆಳವಣಿಗೆ, ಆರೋಗ್ಯ ಮತ್ತು ಪೌಷ್ಟಿಕತೆ, ಬೆಳವಣಿಗೆಯ ಹಂತಗಳು ಮತ್ತು ಕಂಪ್ಯೂಟರ್ ಫಂಡಮೆಂಟಲ್ಸ್ ಕುರಿತು ತರಬೇತಿಗಳು ನಡೆಯಲಿವೆ. ತರಬೇತಿ ಹಾಗೂ ನೇರ ಪರೀಕ್ಷೆಗಾಗಿ ನೋಂದಾಯಿಸಿಕೊಳ್ಳಬಯಸುವವರು ಅರ್ಜಿಗಳಿಗಾಗಿ 8310306882 ಅಥವಾ 9964790442 ಸಂಪರ್ಕಿಸಬಹುದು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು ಮೇ 21–ಮೈಸೂರಿನ ಜೆ.ಪಿ. ನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಕೆ.ಎಸ್.ಚೈತ್ರಾ ಅವರು ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ 500ಕ್ಕೆ 466 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈಕೆ ಕೆ.ವಿ.ಶಿವಕುಮಾರ್ ಮತ್ತು ಟಿ.ಜೆರೂಪಾ ದಂಪತಿ ಪುತ್ರಿ

ಚಲಿಸುತ್ತಿದ್ದ ಜೀಪ್‌ಗೆ ಕಲ್ಲು ತೂರಿ ದರೋಡೆಗೆ ಯತ್ನ

ಮೈಸೂರಿನ ಲಿಂಗಾಂಬುದಿ ಪಾಳ್ಯ ಬಳಿ ರಿಂಗ್ ರಸ್ತೆಯ ಮಾರಮ್ಮ ದೇವಸ್ಥಾನ ಸರ್ಕಲ್‌ನಲ್ಲಿ ಘಟನೆ, ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾದ ಇಬ್ಬರು ಉದ್ಯಮಿಗಳು



ಮೈಸೂರು, ಮೇ 21(ಆರ್‌ಕೆ)– ಚಲಿಸುತ್ತಿದ್ದ ಮಹೀಂದ್ರ ಥಾರ್ ಜೀಪ್‌ಗೆ ಕಲ್ಲು ತೂರಿ ಉದ್ಯಮಿಗಳ ಬಳಿ ದರೋಡೆಗೆ ಯತ್ನಿಸಿರುವ ಘಟನೆ ಮೈಸೂರಿನ ಲಿಂಗಾಂಬುದಿ ಪಾಳ್ಯ ಸಮೀಪ ರಿಂಗ್ ರಸ್ತೆಯ ಮಾರಮ್ಮ ದೇವಸ್ಥಾನ ಜಂಕ್ಷನ್‌ನಲ್ಲಿ ಕಳೆದ ಗುರುವಾರ ರಾತ್ರಿ ಸಂಭವಿಸಿದೆ.

ಮೈಸೂರಿನ ಹೆಬ್ಬಾಳು, ಸಂಕ್ರಾಂತಿ ಸರ್ಕಲ್ ಬಳಿಯ ನಿವಾಸಿ ಬಾಬು ಹಾಗೂ ಸರಸ್ವತಿಪುರಂ ನಿವಾಸಿ ಹರೀಶ್ ನಾಯಕ ಎಂಬ ಉದ್ಯಮಿಗಳು ಮೇ 16ರಂದು ರಾತ್ರಿ ಸುಮಾರು 11.30 ಗಂಟೆ ವೇಳೆಗೆ ತಮ್ಮ ಮಹೀಂದ್ರ ಥಾರ್ ಜೀಪ್‌ನಲ್ಲಿ ನಂಜನಗೂಡು ರಸ್ತೆಯಿಂದ ಬೋಗಾದಿ ಕಡೆಗೆ ಬರುತ್ತಿದ್ದಾಗ ಹೆಚ್.ಡಿ.ಕೋಟೆ ರಿಂಗ್ ರಸ್ತೆ ಜಂಕ್ಷನ್ ದಾಟಿ ಉದ್ಯಮಿಗಳು ಬರುತ್ತಿದ್ದರು.

ಮುಂದೆ ಲಿಂಗಾಂಬುದಿ ಪಾಳ್ಯ ಸಮೀಪ ಮಾರಮ್ಮ ದೇವಸ್ಥಾನ ಜಂಕ್ಷನ್ ಬಳಿ ಎಡಗಡೆ ರಸ್ತೆ ಬದಿಯಲ್ಲಿ ಯಾರೋ ನಾಲ್ವರು ಗುಂಪು ಸೇರಿ ಬರ್ತ್‌ಡೇ ಆಚರಿಸಿಕೊಳ್ಳುವಂತೆ ವರ್ತಿಸುತ್ತಿದ್ದರಿಂದ ಜೀಪ್ ಚಾಲನೆ ಮಾಡುತ್ತಿದ್ದ ಬಾಬು ಅವರು ಸ್ವಲ್ಪ ನಿಧಾನ ಮಾಡುತ್ತಿದ್ದಂತೆಯೇ ಬಲಬದಿಯ ರಸ್ತೆ ವಿಭಜಕದ ಗಿಡಗಳ ಪಕ್ಕದಲ್ಲಿ ಅಡಗಿ ನಿಂತಿದ್ದವರು ಜೀಪ್‌ನತ್ತ ಕಲ್ಲು ತೂರಿದರು.

ನೋಡ ನೋಡುತ್ತಿದ್ದಂತೆಯೇ ಜೀಪ್‌ನ ಸುತ್ತ ಗಾಜುಗಳಿಗೆ ಕಲ್ಲುಗಳು ಅಪ್ಪಳಿಸುತ್ತಿದ್ದಂತೆಯೇ ಎಚ್ಚೆತ್ತ ಉದ್ಯಮಿಗಳು ವೇಗವಾಗಿ ಚಾಲನೆ ಮಾಡಿಕೊಂಡು ಪಾರಾದರಾದರೂ, ಬರ್ತ್‌ಡೇ ಮಾಡಿಕೊಳ್ಳುವಂತೆ ವರ್ತಿಸುತ್ತಿದ್ದವರು ಬೈಕ್‌ಗಳಲ್ಲಿ ಕೆಲ ದೂರದವರೆಗೆ ಹಿಂಬಾಲಿಸಿದ್ದಾರೆ.

ತಮಗೆ ಅಪಾಯ ಕಾದಿದೆ ಎಂಬುದು ಖಚಿತವಾಗುತ್ತಿದ್ದಂತೆಯೇ ಜೀಪ್ ಅನ್ನು ದಟ್ಟಗಳ್ಳಿ ಕಡೆಗೆ ವೇಗವಾಗಿ ಚಲಿಸಿ ಉದ್ಯಮಿಗಳು ಪಾರಾದರು. ಬಾಬು ಅವರು ದಿನದ 24 ಗಂಟೆಯೂ ರಕ್ಷಣೆಗಾಗಿ ಶಸ್ತ್ರಾಸ್ತ್ರ ಇರಿಸಿಕೊಂಡೇ ಓಡಾಡುತ್ತಿದ್ದರಾದರೂ, ಲೋಕಸಭಾ ಸಾರ್ವತ್ರಿಕ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಅವರು ವೆಪನ್ ಅನ್ನು ಪೊಲೀಸರ ಬಳಿ ಡೆಪಾಸಿಟ್ ಮಾಡಿದ್ದಾರೆ. ಇಲ್ಲದಿದ್ದರೆ, ಜೀಪ್ ನಿಲ್ಲಿಸಿ ಗಾಳಿಯಲ್ಲಿ ಗುಂಡು ಹಾರಿಸಿ ಬೆದರಿಸಿ ಕಳುಹಿಸುತ್ತಿದ್ದೆವು ಎಂದು ಅವರು ತಿಳಿಸಿದ್ದಾರೆ.

ಘಟನೆಯಿಂದ ಗಾಬರಿಗೊಂಡ ಉದ್ಯಮಿಗಳು ಮರು ದಿನ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಅವರಿಗೆ ಮಾಹಿತಿ ನೀಡಿ ಜೀಪ್‌ನ ಗಾಜುಗಳು ಚೂರಾಗಿರುವುದನ್ನು ತೋರಿಸಿದರು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಆಯುಕ್ತರು ರಿಂಗ್ ರಸ್ತೆ, ನಗರದ ನಿರ್ಜನ ಪ್ರದೇಶಗಳಲ್ಲಿ ರಾತ್ರಿ ಗಸ್ತು ನಡೆಸಿ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು ತನಿಖೆ ನಡೆಸುವಂತೆ ಸಂಬಂಧಪಟ್ಟ ಠಾಣಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ತೀವ್ರಗೊಳಿಸಿರುವ ಪೊಲೀಸರು, ತನಿಖೆ ಚುರುಕುಗೊಳಿಸಿದ್ದಾರೆ.

ತಡರಾತ್ರಿ ಪ್ರಯಾಣ, ನಿರ್ಜನ ಪ್ರದೇಶದಲ್ಲಿ ಓಡಾಡಬಾರದು. ಅನಿವಾರ್ಯವೆನಿಸಿದರೆ, ಎಚ್ಚರಿಕೆಯಿಂದಿರಬೇಕು, ಅಪರಿಚಿತರು ಕಂಡಲ್ಲಿ ವಾಹನ ನಿಲ್ಲಿಸಬಾರದು ವೇಗ ನಿಧಾನಿಸಬಾರದೆಂದು ಪೊಲೀಸರು ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.

ಮೈಸೂರು ಮಿತ್ರ

‘ಅಕ್ವೇರಿಯಂ’ಗೆ ಮೃಗಾಲಯದಿಂದ ಕಾಯಕಲ್ಪ



ಮೃಗಾಲಯದ ಆವರಣದಲ್ಲಿ ನೆನೆಗುದಿಗೆ ಬಿದ್ದಿರುವ ಅಕ್ವೇರಿಯಂ ಕಟ್ಟಡ. ಚಿತ್ರಗಳು: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

● ಸಾರ್ವಜನಿಕ ಸಹಭಾಗಿತ್ವ(ಪಿಪಿಪಿ)ದಲ್ಲಿ ಕಾಮಗಾರಿ ಪೂರ್ಣಗೊಳಿಸಲು ನಿರ್ಧಾರ ● ಕಟ್ಟಡ ಭದ್ರತೆ ಅವಲೋಕಿಸಿ ಡಿಪಿಆರ್ ರಚನೆಗಾಗಿ ವ್ಯವಹಾರಿಕಾ ಸಲಹಾಗಾರರುಳ್ಳ ಏಜೆನ್ಸಿ ನೇಮಕಕ್ಕೆ ಆಹ್ವಾನ ● ಅಕ್ವೇರಿಯಂ ಪೂರ್ಣಗೊಳಿಸಲು 50 ಕೋಟಿ ರೂ. ವೆಚ್ಚದ ನಿರೀಕ್ಷೆ ● ನೀತಿ ಸಂಹಿತೆ ಪೂರ್ಣಗೊಂಡ ನಂತರ ಗ್ಲೋಬಲ್ ಟೆಂಡರ್ ಪ್ರಕ್ರಿಯೆಗೆ ಚಾಲನೆ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಮೇ 21–ಸಾಂಸ್ಕೃತಿಕ ನಗರಿ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮತ್ಸ ಲೋಕ ಪರಿಚಯಿಸುವ ಉದ್ದೇಶದಿಂದ ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಆವರಣದಲ್ಲಿ ನಿರ್ಮಿಸಿ ನೆನೆಗುದಿಗೆ ಬಿದ್ದಿರುವ ‘ಅಕ್ವೇರಿಯಂ’ಗೆ ಕಾಯಕಲ್ಪ ನೀಡಲು ಮೃಗಾಲಯ ಮುಂದಾಗಿದ್ದು, ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ದಲ್ಲಿ ಅಕ್ವೇರಿಯಂ ನಿರ್ಮಾಣಕ್ಕೆ ಡಿಪಿಆರ್ ರಚಿಸಲು ವ್ಯಾವಹಾರಿಕ ಸಲಹೆಗಾರರುಳ್ಳ ಏಜೆನ್ಸಿಯನ್ನು ಆಯ್ಕೆ ಮಾಡುವ ಕಾರ್ಯಕ್ಕೆ ಚಾಲನೆ ದೊರೆತಿದೆ.

ಭಾರತದ ಮುಂಚೂಣಿ ಮೃಗಾಲಯಗಳಲ್ಲಿ ಒಂದಾಗಿರುವ ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಅನೇಕ ವೈವಿಧ್ಯಮಯ ಪ್ರಾಣಿ–ಪಕ್ಷಿ ಸಂಕುಲ ಹೊಂದಿದ್ದು, ಸ್ವಾಯತ್ತ ಮೃಗಾಲಯ ಎಂಬ ಕೀರ್ತಿಗೆ ಪಾತ್ರವಾಗಿದೆ. ದೇಶ–ವಿದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಮೈಸೂರು ಮೃಗಾಲಯಕ್ಕೆ ಬರುವ ಪ್ರವಾಸಿಗರಿಗೆ ಬೃಹತ್ ಅಕ್ವೇರಿಯಂ ನಿರ್ಮಿಸಿ, ಮತ್ಸಲೋಕ ಪರಿಚಯಿಸಲು ನಿರ್ಧರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ನಗರಪಾಲಿಕೆ 2010–11ನೇ ಸಾಲಿನಲ್ಲಿ ಮೃಗಾಲಯ ಹಾಗೂ ಕಾರಂಜಿ ಕೆರೆ ನಡುವೆ ಬೃಹತ್ ಗಾತ್ರದ ಮತ್ಸ್ಯಾಗಾರ (ಅಕ್ವೇರಿಯಂ)ದ ಕಾಮಗಾರಿ ಆರಂಭಿಸಿತ್ತು. 4.26 ಕೋಟಿ ರೂ ವೆಚ್ಚದಲ್ಲಿ 6 ಸಾವಿರ ಚದುರ ಅಡಿ ವಿಸ್ತೀರ್ಣದಲ್ಲಿ ಅಕ್ವೇರಿಯಂಗಾಗಿ ಕಟ್ಟಡ ನಿರ್ಮಿಸಿತ್ತು. ಆದರೆ ಅಕ್ವೇರಿಯಂ ಕಾಮಗಾರಿ ಪೂರ್ಣಗೊಳಿಸಲು 30ರಿಂದ 40 ಕೋಟಿ ರೂ. ವೆಚ್ಚವಾಗುವುದನ್ನು ಮನಗಂಡು ಕಾಮಗಾರಿ ಪೂರ್ಣಗೊಳಿಸಲು ಬೇಕಾದ ಅನುದಾನ ನೀಡಲು ಪಾಲಿಕೆ ಹಿಂದೇಟು ಹಾಕಿತ್ತು. ಇದರಿಂದ ಅಕ್ವೇರಿಯಂಗಾಗಿ ನಿರ್ಮಿಸಲಾಗಿದ್ದ ಕಾಂಕ್ರಿಟ್ ಕಟ್ಟಡ ನಿಷ್ಪ್ರಯೋಜಕವಾಗಿ ನೆನೆಗುದಿಗೆ ಬಿದ್ದಿತ್ತು.

ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾದ ಹಿನ್ನೆಲೆಯಲ್ಲಿ 2018ರ ಜು.14ರಂದು ಅಕ್ವೇರಿಯಂ ಕಟ್ಟಡವನ್ನು ಮೃಗಾಲಯದ ವ್ಯಾಪ್ತಿಗೆ ಹಸ್ತಾಂತರಿಸಲಾಗಿತ್ತು. ಇದರಿಂದಾಗಿ ಮೃಗಾಲಯದ ಅಧಿಕಾರಿಗಳೇ ಮತ್ಸಾಗಾರದ ಕಾಮಗಾರಿಯನ್ನು ಪೂರ್ಣಗೊಳಿಸಲು ಇಚ್ಛಾಸಕ್ತಿ ಪ್ರದರ್ಶಿಸಿ, ವಿವಿಧೆಡೆ ನಿರ್ಮಿಸಲಾಗಿರುವ ಬೃಹತ್ ಅಕ್ವೇರಿಯಂಗಳ ಬಗ್ಗೆ ಮಾಹಿತಿ ಕಲೆಹಾಕಿತ್ತು. ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಿಪಿಪಿ) ಮಾದರಿಯಲ್ಲಿ ಅಕ್ವೇರಿಯಂ ಪೂರ್ಣಗೊಳಿಸಲು ಮೃಗಾಲಯ ಪ್ರಾಧಿಕಾರ ಸಮ್ಮತಿ ನೀಡಿತ್ತು. ಆದರೂ, ಕೆಲ ಕಾರಣದಿಂದ ಅಕ್ವೇರಿಯಂ ಪೂರ್ಣಗೊಳಿಸುವ ಕಾಮಗಾರಿ ಮುಂದುವರೆಯದೇ 4.26 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅಕ್ವೇರಿಯಂ ಕಟ್ಟಡ ನಿರುಪಯುಕ್ತವಾಗಿ ನಿಂತಿದೆ. ಇದೀಗ ಮತ್ತೆ ಅಕ್ವೇರಿಯಂ ಕಟ್ಟಡವನ್ನು ಸದ್ಬಳಕೆ ಮಾಡಿಕೊಳ್ಳುವ ಪ್ರಯತ್ನಕ್ಕೆ ಚಾಲನೆ ನೀಡಲಾಗಿದೆ.

ವ್ಯವಹಾರಿಕ ಸಲಹೆಗಾರರುಳ್ಳ ಏಜೆನ್ಸಿ: ಲೋಕಸಭಾ ಚುನಾವಣಾ ನೀತಿ ಸಂಹಿತೆ ಜೂನ್ 6ಕ್ಕೆ ಪೂರ್ಣಗೊಳ್ಳಲಿದ್ದು, ಆ ನಂತರ ಅಕ್ವೇರಿಯಂ ಕಾಮಗಾರಿ ಮುಂದುವರೆಸಲು ಕ್ರಮಬದ್ಧವಾಗಿ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಅಕ್ವೇರಿಯಂ ಕಟ್ಟಡ ನಿರ್ಮಾಣವಾಗಿ ದಶಕವೇ ಉರುಳಿದ್ದು, ಆ ಹಿನ್ನೆಲೆಯಲ್ಲಿ ಕಟ್ಟಡದ ಸತ್ವ, ಭದ್ರತೆ ಸೇರಿದಂತೆ ಇನ್ನಿತರ ಆಯಾಮಗಳಲ್ಲಿ ಪರಿಶೀಲಿಸಲು ವ್ಯವಹಾರಿಕ ಸಲಹೆಗಾರರುಳ್ಳ (ಟ್ರಾನ್ಸಾಕ್ಷನರಿ ಅಡ್ವೈಸರ್ಸ್) ಸಂಸ್ಥೆಯನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ.

ಆಯ್ಕೆಯಾದ ಏಜೆನ್ಸಿಯಿಂದ ತಾಂತ್ರಿಕ ಪರಿಣಿತರ ತಂಡ ಮೃಗಾಲಯದ ಆವರಣದಲ್ಲಿರುವ ಅಕ್ವೇರಿಯಂ ಕಟ್ಟಡವನ್ನು ತಾಂತ್ರಿಕ ಹಾಗೂ ಹಣಕಾಸು ದೃಷ್ಟಿಕೋನದಲ್ಲಿ ಪರಿಶೀಲನೆ ನಡೆಸಲಿದೆ. ಈ ಏಜೆನ್ಸಿ ಕನ್ಸಲ್ಟೆಂಟ್ ಏಜೆನ್ಸಿಯಂತೆ ಕಾರ್ಯನಿರ್ವಹಿಸಲಿದೆ. ನೆನೆಗುದಿಗೆ ಬಿದ್ದಿರುವ ಕಟ್ಟಡ ಹಾಗೂ ಅಲ್ಲಿರುವ ಖಾಲಿ ಜಾಗ ಬಳಸಿಕೊಂಡು ಅಕ್ವೇರಿಯಂ ನಿರ್ಮಿಸಬಹುದಾ?. ಹಾಲಿ ಇರುವ ಕಟ್ಟಡ ಸುಭದ್ರವಾಗಿದೆಯಾ? ಹಾಗೂ ಇನ್ನಿತರ ಆಯಾಮಗಳಲ್ಲಿ ಪರಿಶೀಲನೆ ನಡೆಸುತ್ತದೆ.

ಫೈನಾಶಿಯಲ್ ಫಿಸಿಬಿಲಿಟಿ(ಹೂಡಿಕೆ ಹಣ ಹಿಂಪಡೆಯುವ ಸಾಧ್ಯತೆ)ಯಲ್ಲಿ ಅಕ್ವೇರಿಯಂ ನಿರ್ಮಾಣಕ್ಕೆ ಎಷ್ಟು ಹಣ ಬೇಕಾಗುತ್ತದೆ. ಹೂಡಿಕೆ ಮಾಡಿದ ಹಣ ಹಿಂಪಡೆಯಲು ಅನುಸರಿಸಬೇಕಾದ ಕ್ರಮ, ಅಕ್ವೇರಿಯಂ ವೀಕ್ಷಣೆಗೆ ಪ್ರವಾಸಿಗರ ಬರುವಿಕೆ, ವಾಣಿಜ್ಯ ದೃಷ್ಟಿಕೋನದಲ್ಲಿ ಅಕ್ವೇರಿಯಂ ಬಳಕೆ ಮಾಡಬಹುದಾ? ಎಂಬ ಲೆಕ್ಕಾಚಾರವನ್ನು ಕನ್ಸಲ್ಟೆಂಟ್ ಏಜೆನ್ಸಿ ಅವಲೋಕಿಸಲಿದೆ. ಆ ನಂತರವಷ್ಟೇ ಡಿಪಿಆರ್ ಸಿದ್ಧಪಡಿಸಿ, ತ್ರಿಡಿ ಚಿತ್ರಗಳೊಂದಿಗೆ ಅಕ್ವೇರಿಯಂ ಯಾವ ಮಾದರಿಯಲ್ಲಿ ರೂಪುಗೊಳ್ಳುತ್ತದೆ ಎಂಬ ವರದಿಯನ್ನು ಮೃಗಾಲಯಕ್ಕೆ ನೀಡುತ್ತದೆ.

ಡಿಪಿಆರ್ ಬಳಿಕ ಟೆಂಡರ್

ಕಟ್ಟಡವನ್ನು ಪರಿಶೀಲಿಸಿ ಡಿಪಿಆರ್ ಸಿದ್ಧಪಡಿಸಿದ ಬಳಿಕ ಪಿಪಿಪಿ ಮಾದರಿಯಲ್ಲಿ ಅಕ್ವೇರಿಯಂ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗುತ್ತದೆ. ಟೆಂಡರ್ ಪಡೆಯುವ ಖಾಸಗಿ ಸಂಸ್ಥೆ ಷರತ್ತನ್ನು ಅನುಸರಿಸಿ ಅಕ್ವೇರಿಯಂ ನಿರ್ಮಿಸಿ, ಬಿಲ್ಡ್ ಆಪರೇಟ್ ಟ್ರಾನ್ಸ್‌ಫರ್ ಮೋಡ್ ವಿಧಾನದಲ್ಲಿ ಮೃಗಾಲಯಕ್ಕೆ ಒಪ್ಪಿಸುತ್ತಾರೆ. ಒಪ್ಪಂದಕ್ಕೆ ಅನುಗುಣವಾಗಿ ಹಣ ಹೂಡಿಕೆ ಮಾಡಿದ ಸಂಸ್ಥೆಗೆ ಎಷ್ಟು ವರ್ಷ ಪ್ರವೇಶ ಶುಲ್ಕ ಸಂಗ್ರಹದ ಜವಾಬ್ದಾರಿ ನೀಡಬೇಕು. ನಿರ್ವಹಣೆ ಹೇಗೆ ಮಾಡಬೇಕು ಎನ್ನುವುದನ್ನು ನಿರ್ಧರಿಸಲಾಗುತ್ತದೆ.



ಕನ್ಸಲ್ಟೆಂನ್ಸಿ ಏಜೆನ್ಸಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ

“ಅಕ್ವೇರಿಯಂ ಕಾಮಗಾರಿ ಪೂರ್ಣಗೊಳಿಸಲು ಪಿಪಿಪಿ ಮಾದರಿ ಅನುಸರಿಸಲು ಈಗಾಗಲೇ ಅನುಮತಿ ಸಿಕ್ಕಿದೆ. ಕಟ್ಟಡವನ್ನು ತಾಂತ್ರಿಕವಾಗಿ ಪರಿಶೀಲಿಸಲು ಟ್ರಾನ್ಸಾಕ್ಷನರಿ ಅಡ್ವೈಸರ್ ಕನ್ಸಲ್ಟೆಂನ್ಸಿ ಏಜೆನ್ಸಿ ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ನೀತಿ ಸಂಹಿತೆ ಮುಗಿದ ಬಳಿಕ ಈ ಏಜೆನ್ಸಿ ಆಯ್ಕೆ ಮಾಡಲಾಗುತ್ತದೆ. ಆ ಏಜೆನ್ಸಿಯ ತಜ್ಞರು ಕಟ್ಟಡವನ್ನು ತಾಂತ್ರಿಕವಾಗಿ ಪರಿಶೀಲಿಸಿ ಡಿಪಿಆರ್ ಸಿದ್ಧಪಡಿಸಿ ನೀಡಲಿದ್ದಾರೆ. ಆ ನಂತರ ಪಿಪಿಪಿ ಮಾದರಿಯಲ್ಲಿ ಟೆಂಡರ್ ಕರೆದು ಅಕ್ವೇರಿಯಂ ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ತ್ವರಿತಗತಿಯಲ್ಲಿ ಅಕ್ವೇರಿಯಂ ನಿರ್ಮಿಸಿ, ಪ್ರವಾಸಿಗರ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕು ಎಂಬುದು ಮೃಗಾಲಯದ ಆಶಯವಾಗಿದೆ. ಇದರಿಂದ ಮೃಗಾಲಯಕ್ಕೆ ಯಾವುದೇ ಹೊರೆಯಾಗುವುದಿಲ್ಲ. ಕನ್ಸಲ್ಟೆಂನ್ಸಿ ಏಜೆನ್ಸಿ ಆಯ್ಕೆಗೆ ಮಾತ್ರ ಮೃಗಾಲಯದ ವತಿಯಿಂದ ಶುಲ್ಕ ನೀಡಬೇಕಾಗಿದ್ದು, ಈ ಹಣವನ್ನು ಕೇಂದ್ರ ಸರ್ಕಾರ ಹಂತಹಂತವಾಗಿ ಹಿಂದಿರುಗಿಸಲಿದೆ. ಅಕ್ವೇರಿಯಂ ಕಟ್ಟಡಕ್ಕೆ ಬೇಕಾಗುವ ಮೊತ್ತವನ್ನು ಟೆಂಡರ್ ಪಡೆದ ಖಾಸಗಿ ಸಂಸ್ಥೆ ವಿನಿಯೋಗಿಸಲಿದೆ.

–ಡಿ.ಮಹೇಶ್‌ಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕ, ಮೃಗಾಲಯ





ಎಸ್‌ಎಸ್‌ಎಲ್‌ಸಿ ಪರೀಕ್ಷೆ ಟಾಪ್ ವಿದ್ಯಾರ್ಥಿನಿಗೆ ಅಭಿನಂದನೆ



2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ, ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಡಿ.ಎಸ್.ಧನ್ವಿ (623/625) ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ರಾಜ್ಯ ಸಮಿತಿ ಸದಸ್ಯರಾದ ಶಂಕರನಾರಾಯಣ, ಗಾಯತ್ರಿ ವಿಪ್ರ ಸಂಘದ ಪ್ರಧಾನ ಕಾರ್ಯದರ್ಶಿ ಮಹೇಶ್‌ಕುಮಾರ್ ಅಭಿನಂದಿಸಿದರು. ಪೋಷಕರಾದ ಡಿ.ಪಿ.ಸುಧನ್ವ, ಎನ್.ಎಸ್.ಕುಸುಮ ಉಪಸ್ಥಿತರಿದ್ದರು.

ಸಂಗೀತದಲ್ಲಿ ದಾಸ ಸಾಹಿತ್ಯದ ಹೊನಲು; ಮಂತ್ರಮುಗ್ಧರಾದ ಶ್ರೋತೃ ವರ್ಗ




ಮೈಸೂರು, ಮೇ 21(ಪಿಎಂ)– ದಾಸ ಸಾಹಿತ್ಯದ ಹೊನಲು ಶಾಸ್ತ್ರೀಯ ಸಂಗೀತದಲ್ಲಿ ಹರಿಯುವ ಮೂಲಕ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿತು.

ಮೈಸೂರಿನ ಊಟಿ ರಸ್ತೆಯ ದತ್ತ ನಗರದ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದಲ್ಲಿ ಸೋಮವಾರ ಕ್ಷೇತ್ರದ 25ನೇ ವಾರ್ಷಿಕೋತ್ಸವದ ಪ್ರಯುಕ್ತ ನಡೆದ ಮೊದಲ ದಿನದ ಸಾಂಸ್ಕೃತಿಕ ಕಾರ್ಯಕ್ರಮದ ಸೊಗಸು ಇದು.

ಗಾಯಕರಾದ ದಿವ್ಯ ಗಿರಿಧರ್, ಅನಂತ್ ರಾಜ್ ಮಿಸ್ತ್ರಿ ಸುಶ್ರಾವ್ಯವಾಗಿ ದಾಸ ಸಾಹಿತ್ಯದ ವಿವಿಧ ಗೀತೆಗಳನ್ನು ಸಾದರಪಡಿಸಿ ಸಭಿಕರು ತಲೆದೂಗುವಂತೆ ಮಾಡಿದರು. ರಾಕೇಶ್ (ಕೊಳಲು), ರಘು (ತಬಲ), ಷಣ್ಮುಗಂ (ಕೀ ಬೋರ್ಡ್), ವಿನಯ್ ರಂಗದೋಳ್ (ರಿದಂ ಪ್ಯಾಡ್) ಪಕ್ಕವಾದ್ಯದಲ್ಲಿ ಸಹಕಾರ ನೀಡಿ ಸಂಗೀತ ಕಛೇರಿಗೆ ಮತ್ತಷ್ಟು ಇಂಪು ನೀಡಿದರು. ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಸೆ.23ರಂದು ಮೌಂಟ್ ಅಬುವಿನಿಂದ ಚಾ.ನಗರಕ್ಕೆ ರಾಜುಬಾಯೀಜೀ ಆಗಮನ

ಮೈಸೂರು, ಮೇ 21– ಚಾಮರಾಜನಗರ–ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯಗಳ ಮುಖ್ಯಾಲಯ ಮೌಂಟ್ ಅಬು ರಾಜಾಸ್ಥಾನದಿಂದ ಸೆ.23ರಂದು ಬೆಳಗ್ಗೆ ರಾಜಯೋಗಿ ಬ್ರಹ್ಮಾಕುಮಾರ ರಾಜುಬಾಯಿಜೀಯವರು ನಗರದ ಪ್ರಕಾಶ ಭವನಕ್ಕೆ ಭೇಟಿ ನೀಡಲಿದ್ದಾರೆ.



ಸಹೋದರರು ಈಶ್ವರೀಯ ವಿವಿಯಲ್ಲಿ 50 ವರ್ಷದಿಂದ ಸಮರ್ಪಿತರಾಗಿ ಮುರಳಿ ವಿಭಾಗದಲ್ಲಿ ಇಡೀ ಜಗತ್ತಿಗೆ ಭಗವಂತನ ಮಹಾವಾಖ್ಯಗಳನ್ನು ಕಳಿಸುವ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ಸೇವಾ ವಿಭಾಗದಲ್ಲಿ ರಾಷ್ಟ್ರಾಧ್ಯಕ್ಷರಾಗಿ ಯೋಗಿಕ ಕೃಷಿಯ ಬೇಸಾಯ ಪದ್ಧತಿಯಲ್ಲಿ ಸಂಶೋಧಕರಾಗಿದ್ದಾರೆ.

ಗುರುವಾರ ಬೆಳಗ್ಗೆ 10 ಗಂಟೆಗೆ ಜಿಲ್ಲಾ ರಾಜಯೋಗ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಬೋದನೆ ಮಾಡಲಿದ್ದಾರೆ. 12 ಗಂಟೆಗೆ ಯೋಗಿಕ ಬೇಸಾಯ ಪದ್ಧತಿ ಕುರಿತು ರೈತರೊಂದಿಗೆ ಸಂವಾದ ಮಾಡಲಿದ್ದಾರೆ. ಸಂವಾದದಲ್ಲಿ ಭಾಗವಹಿಸುವ ರೈತರು ಮೊದಲೇ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಮೊದಲು ಬರುವ 50 ಜನರಿಗೆ ಪ್ರವೇಶ ಅವಕಾಶವಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಮೊ.ಸಂ.7483520495, 7899820430 ಸಂಪರ್ಕಿಸಬಹುದು.

ವಿಕಲಚೇತನ ಮಕ್ಕಳಿಗೆ ಅಗತ್ಯ ವಸ್ತುಗಳ ವಿತರಣೆ



ಮೈಸೂರು, ಮೇ 21– ಮೈಸೂರಿನ ಶಿವರಾಂಪುರದಲ್ಲಿರುವ ನವಚೇತನ ಬಸವೇಶ್ವರ ಟ್ರಸ್ಟ್‌ನಲ್ಲಿರುವ ವಿಕಲಚೇತನ ಮಕ್ಕಳಿಗೆ ಸುಮಾರು ಒಂದು ಲಕ್ಷ ಮೌಲ್ಯದ ವಸ್ತುಗಳನ್ನು ಹಸ್ತಾಂತರಿಸಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಬೆಂಗಳೂರು ಮೂಲದ ಡಾ. ಪ್ರದೀಪ್ ಮತ್ತು ಪೂಜಾ ದಂಪತಿ ಸುಪುತ್ರಿ ಪುಟಾಣಿ ಆರಾಧ್ಯಳ ಹುಟ್ಟುಹಬ್ಬದ ಪ್ರಯುಕ್ತ ನೆರವು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರೂ ಆದ ಹೆಚ್.ವಿ. ರಾಜೀವ್, ಹುಟ್ಟುಹಬ್ಬ ಎಂದರೆ ಮೋಜು ಮಸ್ತಿ ಎನ್ನುವ ಈ ಕಾಲಘಟ್ಟದಲ್ಲಿ ಮಗುವಿನ ಹುಟ್ಟುಹಬ್ಬವನ್ನು ಈ ರೀತಿ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಎಲ್ಲರೂ ತಮ್ಮ ತಮ್ಮ ಹುಟ್ಟುಹಬ್ಬವನ್ನು ಇಂತಹ ಮಕ್ಕಳೊಂದಿಗೆ ಆಚರಿಸಿ ಎಂದು ಕರೆ ಕೊಟ್ಟರು. ಮೂರು ವರ್ಷಗಳಿಂದ ಇಂತಹ ವಿಶೇಷ ಮಕ್ಕಳ ಶಾಲೆಗಳನ್ನು ಹುಡುಕಿ ಅವರಿಗೆ ಅವಶ್ಯಕತೆ ಇರುವ ವಸ್ತುಗಳನ್ನು ನೀಡಲು ಸಹಕರಿಸುತ್ತಿರುವ ರಂಗನಾಥ ಅವರ ಸೇವೆ ಶ್ಲಾಘನೀಯ ಎಂದು ತಿಳಿಸಿದರು.

ಒಂದು ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಹಸ್ತಾಂತರಿಸುವುದರ ಜೊತೆಗೆ ತಾವೂ 50 ಸಾವಿರ ರೂ.ಗಳನ್ನು ಕೊಡುಗೆಯಾಗಿ ನೀಡುವುದಾಗಿ ಪ್ರಕಟಿಸಿದರು.

ನಂತರ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಮರಿಗೌಡ ನಮ್ಮಲ್ಲಿರುವ ಮಕ್ಕಳಿಗೆ ಊಟ, ತಿಂಡಿ ಮಕ್ಕಳನ್ನು ಕರೆದೊಯ್ಯುವ ವಾಹನಕ್ಕೆ ಇಂಧನ ಹೀಗೆ ನೆರವು ನೀಡುವವರು 8861487299 ಸಂಪರ್ಕಿಸುವಂತೆ ಮನವಿ ಮಾಡಿದರು.

ನಂತರ ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ರಂಗನಾಥ ಮಾತನಾಡಿ, ಬೆಂಗಳೂರಿನಲ್ಲಿ ನೆಲೆಸಿರುವ ಡಾ.ಪೂಜಾ ಪ್ರದೀಪ್ ಮತ್ತು ಡಾ.ಪ್ರದೀಪ್ ದಂಪತಿ ಮಗಳಾದ ಪುಟಾಣಿ ಆರಾಧ್ಯಳ ಮೂರನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಮಕ್ಕಳ ಶಾಲೆಗೆ ಕಮರ್ಷಿಯಲ್ ಗ್ಯಾಸ್‌ಸ್ಟವ್, ಜಮ್ಕಾನಾ, ಮೂರು ವಾಕರ್, ಒಂದು ವೀಲ್ ಚೇರ್, ಎಲ್ಲಾ ಮಕ್ಕಳಿಗೂ ಚಪ್ಪಲಿ ಹಾಗೂ ದಿನಸಿ ವಸ್ತುಗಳನ್ನು ನೀಡುತ್ತಿದ್ದು, ಈ ಮೊದಲು ಚಾಮುಂಡಿಪುರಂನಲ್ಲಿರುವ ಅರುಣೋದಯ ವಿಶೇಷ ಮಕ್ಕಳ ಶಾಲ, ಬಂಬೂ ಬಜಾರ್‌ನಲ್ಲಿರುವ ಡಿಫೆಂಡೆನ್ಸ್ ಸ್ಕೂಲ್‌ಗೆ ಕೆಲವು ವಸ್ತುಗಳನ್ನು ದೇಣಿಗೆ ನೀಡಿದ್ದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಾಲುಂಡಿ ಮಾಜಿ ಅಧ್ಯಕ್ಷ ಬಸಪ್ಪ, ಸಿದ್ದಣ್ಣ, ಸಿದ್ದರಾಮು, ರಾಮು, ಪ್ರಶಾಂತ್, ಶೇಷ ಪ್ರಸಾದ್, ವಿಕ್ರಂ ಅಯ್ಯಂಗಾರ್, ಪ್ರಕಾಶ್ ಪ್ರಿಯದರ್ಶನ್, ಜಯಂತ್, ರಾಜೇಶ್, ರಾಕೇಶ್, ನಿತಿನ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆಯಿಂದ ಕದಂಬ ನಗೆ ನಾಟಕೋತ್ಸವ

ಮೈಸೂರು, ಮೇ 21(ಜಿಎ)– ಮೈಸೂರು ಕದಂಬ ರಂಗ ವೇದಿಕೆ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮೇ 23ರಿಂದ ಮೂರು ದಿನ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗ ಮಂದಿರದಲ್ಲಿ ಕದಂಬ ನಗೆ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ನಾಟಕೋತ್ಸವದ ಭಿತ್ತಿಪತ್ರ ಬಿಡುಗಡೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 23ರಂದು ಸಂಜೆ 6.30ಕ್ಕೆ ಪಂಚಾಕ್ಷರ ನಾಟ್ಯ ಸಂಘದ ಮಾಲೀಕ ಜೇವರ್ಗಿ ರಾಜಣ್ಣ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮೈಸೂರು ಆನಂದ್ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

ನಂತರ ಸಂಜೆ 7 ಗಂಟೆಗೆ ಕದಂಬ ರಂಗ ವೇದಿಕೆ ವತಿಯಿಂದ ಶಶಿರಾಜ್ ರಾವ್ ಕಾವೂರು ರಚನೆಯ ಜೀವನ್‌ಕುಮಾರ್ ಹೆಗ್ಗೋಡು ನಿರ್ದೇಶನದ ‘ನೆಮ್ಮದಿ ಅಪಾರ್ಟ್‌ಮೆಂಟ್’ ನಾಟಕ ಪ್ರದರ್ಶನ ವಿರಲಿದೆ. ಮೇ24ರಂದು ಬೆಂಗಳೂರಿನ ಸೈಡ್ ವಿಂಗ್ ವತಿಯಿಂದ ಎಂ.ಎಂ.ಶೈಲೇಶ್‌ಕುಮಾರ್ ನಿರ್ಮಾಣದ ಭರತ್ ಸ.ಜಗನ್ನಾಥ್ ರಚಿಸಿ ನಿರ್ದೇಶಿಸಿರುವ ‘ಈ ಪ್ರೇಮ ಲೋಕದಾ ಗೀತೆಯೂ’ ನಾಟಕ ಪ್ರದರ್ಶನವಾಗಲಿದೆ. ಮೇ 25ರಂದು ಅಂತರಂಗ ಬಹಿರಂಗ ತಂಡದಿಂದ ಎಸ್.ವಿಕಾಸ್ ನಿರ್ದೇಶನದ ಮೊಲಿಯೇರ್ ವಿರಚಿತ ‘ಅನುಮಾನದ ಅವಾಂತರ’ ನಾಟಕ ಪ್ರದರ್ಶನ ವಿರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗ ಕಲಾವಿದ ಮೈಮ್ ರಮೇಶ್ ನಾಟಕೋತ್ಸವದ ಭಿತ್ತಿಚಿತ್ರ ಬಿಡುಗಡೆಗೊಳಿಸಿದರು. ಅಶ್ವಥ್ ಕದಂಬ, ಸೂರಜ್ ಸುರೇಶ್, ಸುನೀತಾ ಉಪಸ್ಥಿತರಿದ್ದರು.

ಮುಳ್ಳೂರು ಗುರುಪ್ರಸಾದ್ ನೇಮಕ



ಮೈಸೂರು, ಮೇ 21– ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘಕ್ಕೆ ಕುವೆಂಪುನಗರದ ನಿವಾಸಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಗೌರವಾಧ್ಯಕ್ಷರೂ ಆದ ಉದ್ಯಮಿ ಮುಳ್ಳೂರು ಗುರುಪ್ರಸಾದ್ ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ದೇಶದ ಗ್ರಾಮ ಪಂಚಾಯಿತಿಗಳಲ್ಲಿ ಅಧಿಕಾರಿ ಸಂಸ್ಕೃತಿ ಹೆಚ್ಚಾಗುತ್ತಿದೆ

ವಿಎಓ, ಪಿಡಿಓಗಳಿಗೆ ಆಯೋಜಿಸಿದ್ದ ಪರೀಕ್ಷಾ ತರಬೇತಿ ಶಿಬಿರದಲ್ಲಿ ಹಿರಿಯ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ವಿಷಾದ



ಜ್ಞಾನಬುತ್ತಿ ವತಿಯಿಂದ ಗ್ರಾಮ ಆಡಳಿತಾಧಿಕಾರಿ (ವಿಎಓ), ಪಂಚಾಯತ್ ಅಭಿವೃದ್ಧಿ ಅಧಿಕಾರಿ(ಪಿಡಿಓ) ಪರೀಕ್ಷೆ ತರಬೇತಿ ಶಿಬಿರ ಉದ್ಘಾಟಿಸಲಾಯಿತು.

ಮೈಸೂರು, ಮೇ 21(ಎಸ್‌ಪಿಎನ್)– ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಹೇಳುತ್ತೇವೆ. ಆದರೆ, ದೇಶದ ಪ್ರತಿ ಗ್ರಾಮ ಪಂಚಾಯಿತಿ ಹುದ್ದೆಗಳಲ್ಲೂ ಅಧಿಕಾರಿ ಸಂಸ್ಕೃತಿ ಹೆಚ್ಚಾಗುತ್ತಿದೆ ಎಂದು ಹಿರಿಯ ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ವಿಷಾದಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂನ ಸರ್ಕಾರಿ ಪ್ರೌಢಶಾಲೆ ಮತ್ತು ಪಿಯು ಕಾಲೇಜು ಆವರಣದಲ್ಲಿ ಜ್ಞಾನಬುತ್ತಿ ವತಿಯಿಂದ ಗ್ರಾಮ ಆಡಳಿತಾಧಿಕಾರಿ (ವಿಎಓ), ಪಂಚಾಯತ್ ಅಭಿವೃದ್ಧಿ ಅಧಿಕಾರಿ(ಪಿಡಿಓ) ಪರೀಕ್ಷೆ ತರಬೇತಿ ಶಿಬಿರದಲ್ಲಿ ಭಾಗವಹಿಸಿ, ಮಾತನಾಡಿದರು.

ಪ್ರಜೆಗಳು ಸರ್ಕಾರಿ ಅಧಿಕಾರಿಗೆ ಪತ್ರ ಬರೆದು ಮನವಿ ಮಾಡಬೇಕಾದರೆ, ಬಹುವಚನದಲ್ಲಿ ಸಂಬೋಧಿಸಿ ಪತ್ರ ಬರೆಯಬೇಕು. ಆದರೆ, ಅದೇ ಸರ್ಕಾರದ ಅಧಿಕಾರಿಗಳು ಪ್ರಜೆಗಳಿಗೆ ಪತ್ರ ನೀಡಬೇಕಾದರೆ, ಪತ್ರದ ಒಕ್ಕಣೆಯೇ ಸರ್ವಾಧಿಕಾರಿಗಳ ಧೋರಣೆಯಿಂದ ಕೂಡಿರುತ್ತದೆ. ಈ ಹಿಂದೆ ಗ್ರಾಪಂ ಹುದ್ದೆಗಳ ಪದನಾಮಗಳು ಗ್ರಾಮ ಲೆಕ್ಕಿಗ, ಗ್ರಾಮಸೇವಕ, ಗ್ರಾಮ ಸಹಾಯಕ ಎಂದು ಕರೆಯುತ್ತಿದ್ದರು.

ಏಕೆಂದರೆ ಗ್ರಾಮಗಳಲ್ಲಿ ಜನರು ಮತ್ತು ಪಂಚಾಯ್ತಿ ಸಿಬ್ಬಂದಿಗಳ ನಡುವೆ ಸಾಮಾಜಿಕ ವ್ಯತ್ಯಾಸಗಳು ಇರದಂತೆ ಎಲ್ಲರೂ ಒಂದೇ ಎನ್ನುವ ಭಾವನೆಯೊಂದಿಗೆ ಈ ರೀತಿಯ ಪದನಾಮದಿಂದ ಕರೆಯಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ ಸೇರಿದಂತೆ ಎಲ್ಲಾ ಹುದ್ದೆಗಳು ಜನರಿಗೆ ಸೂಚನೆ ನೀಡುವಂತಹ ಪದಗಳಿಂದ ಗುರುತಿಸಲಾಗುತ್ತಿದೆ. ಇದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಪಂ ಪಂಚಾಯ್ತಿಗಳಲ್ಲಿ ಪಿಡಿಓ ನೇಮಕಕ್ಕೆ ಮೊದಲ ಆದ್ಯತೆ ನೀಡುತ್ತಿರುವ ಸರ್ಕಾರ, ವಿಶ್ವವಿದ್ಯಾನಿಲಯದ ಕುಲಪತಿ, ಪ್ರಾಧ್ಯಾಪಕ ಹುದ್ದೆಗಳ ನೇಮಕದಲ್ಲಿ ನಿರ್ಲಕ್ಷ್ಯ ಧೋರಣೆ ತಳದಿದೆ. ಕಲಿಕಾ ಕೇಂದ್ರಗಳಿಗೆ ಸಿಬ್ಬಂದಿ ನೇಮಕದಲ್ಲಿ ನೀಡಬೇಕಾದ ಪ್ರಾಮುಖ್ಯತೆ ನೀಡಿಲ್ಲ. ಇಂದಿಗೂ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ ಹುದ್ದೆಗಳಿಗೆ ಶೇ.30ರಷ್ಟು ಬಿಟ್ಟರೆ, ಬಹುತೇಕ ಹುದ್ದೆಗಳ ಖಾಲಿ ಇವೆ. ಸರ್ಕಾರ ಧೋರಣೆ ಎತ್ತ ಸಾಗುತ್ತಿವೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ವಿವಿಗಳು ವಿದ್ಯಾರ್ಥಿಗಳಿಗೆ ಜ್ಞಾನವನ್ನು ಕಲಿಸುವ ಕೇಂದ್ರಗಳಾಗಬೇಕು. ಆದರೆ, ಇತ್ತೀಚೆಗೆ ಆರು ತಿಂಗಳಿಗೊಮ್ಮೆ ಪರೀಕ್ಷೆಗಳನ್ನು ಆಯೋಜಿಸುವುದೇ ದೊಡ್ಡ ಕೆಲಸವಾಗುತ್ತಿದೆ ಎಂದು ಬೇಸರ ಹೊರಹಾಕಿದರು.

“ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಭುಗಳು ಎಂದಾದ ಮೇಲೆ ಕಾರ್ಯಾಂಗದ ಹುದ್ದೆಗಳು ಜನರ ಸೇವಕರಂತೆ ಬಿಂಬಿಸುವ ಪದನಾಮಗಳು ಸೃಷ್ಟಿಯಾಗಬೇಕು. ಎಲ್ಲಾ ಹುದ್ದೆಗಳು ಆದೇಶ ಮಾಡುವಂತಿದ್ದರೆ, ಪ್ರಜಾಪ್ರಭುತ್ವದ ಲಕ್ಷಣವೇನು? ಅರ್ಥವೇನು?. ನಮ್ಮ ವ್ಯವಸ್ಥೆಗಳು ಬದಲಾಗುತ್ತಿದ್ದರೂ ಜನರಿಗೆ ಅದರ ಅರಿವು ಗೊತ್ತಾಗುತ್ತಿಲ್ಲ. ಏಕೆಂದರೆ, ಪ್ರಜಾಪ್ರಭುತ್ವದ ಅರಿವು ಜನಸಾಮಾನ್ಯರಿಗೆ ತಿಳಿಯದ ಹಿನ್ನೆಲೆಯಲ್ಲಿ ಸರ್ಕಾರದ ಕಡೆಯಿಂದ ಈ ರೀತಿ ಪ್ರಮಾದಗಳಾಗುತ್ತಿವೆ. ನೀಟ್, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷಾ ಕೇಂದ್ರದಲ್ಲಿ ಪೊಲೀಸರೇ ತುಂಬಿರುತ್ತಾರೆ. ಕಲಿಕಾ ಕೇಂದ್ರದಲ್ಲಿ ಪೊಲೀಸರಿಗೇನು ಕೆಲಸ?.

–ಪ್ರೊ.ಎಂ.ಕೃಷ್ಣೇಗೌಡ, ಹಿರಿಯ ವಾಗ್ಮಿ

ಆಡಳಿತ ತರಬೇತಿ ಸಂಸ್ಥೆಯ ಪ್ರಶಿಕ್ಷಣಾರ್ಥಿ ಪಿ.ಶ್ರವಣ್‌ಕುಮಾರ್ ಮಾತನಾಡಿ, ಪ್ರತಿಯೊಬ್ಬರಿಗೂ ಸೂಕ್ತ ಮಾರ್ಗದರ್ಶನ, ತರಬೇತಿ ಸಿಕ್ಕಿದರೆ ಇಂದಿನ ಯುವಕರು ಪಿಡಿಓ, ವಿಎ ಸೇರಿದಂತೆ ಯುಪಿಎಸ್‌ಸಿ, ಕೆಪಿಎಸ್‌ಸಿಯಂತಹ ನಾಗರಿಕ ಸೇವಾ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಬಹುದು ಎಂದು ತಿಳಿಸಿದರು.

ಹುಣಸೂರು ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೇರ್ ಮಾತನಾಡಿ, ಯಾವುದೇ ಪರೀಕ್ಷೆಗೆ ನಿಮ್ಮ ಸ್ವಂತ ಟಿಪ್ಪಣಿಗಳನ್ನು ಸಿದ್ಧಪಡಿಸುವುದು ಅತ್ಯಗತ್ಯ. ನೀವು ಒಮ್ಮೆ ಸಿದ್ಧಪಡಿಸಿದರೆ, ಮುಂದಿನ ಬಾರಿ ಓದುವಾಗ ನೀವು ಪ್ರಶ್ನೆಗಳಿಗೆ ಉತ್ತರಗಳನ್ನು ಸುಲಭವಾಗಿ ನೆನಪಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಪ್ರೊ.ಕೆ.ಎಂ.ಪ್ರಸನ್ನಕುಮಾರ್, ಡಾ.ಹೊನ್ನಯ್ಯ, ಡಾ.ನಾಗಚಾರ್, ಡಾ. ಉಮೇಶ್ ಬೇವಿನಹಳ್ಳಿ, ಡಿ.ಎ.ಹೇಮಚಂದ್ರ ಡಾ.ಪಿ.ಎನ್.ಹೇಮಚಂದ್ರ, ಮೋಹನ್ ಸಿ, ಡಾ.ಈ.ಶಿವಪ್ರಸಾದ್, ಎಸ್.ಗಣೇಶ, ಡಾ.ಪಳನಿಸ್ವಾಮಿ ಮೂಡಗೂರು, ಡಾ.ಹೆಚ್.ಎಂ.ಸುದರ್ಶನ್, ವಿ.ಜಯಪ್ರಕಾಶ್, ರವಿಕುಮಾರ್, ಯು.ಎಂ.ಶರದ್ ರಾವ್, ನಾಗರಾಜು ಬಿಜಗನಹಳ್ಳಿ, ರಾಜೀವ್ ಶರ್ಮ, ಡಾ.ವಸಂತಕುಮಾರ್ ಐಪನಹಳ್ಳಿ, ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಇದ್ದರು.

ಬೆಳೆ ನಷ್ಟಕ್ಕೊಳಗಾಗಿರುವ ರೈತರಿಗೆ ವಿಶೇಷ ಪ್ಯಾಕೇಜ್‌ಗೆ ಒತ್ತಾಯಿಸಿ

ಕಬ್ಬು ಬೆಳೆಗಾರರ ಸಂಘದಿಂದ ರಸ್ತೆ ತಡೆದು ಪ್ರತಿಭಟನೆ



ತಿರುಮಕೂಡಲಿನ ಕಾವೇರಿ–ಕಪಿಲ ಸೇತುವೆ ಬಳಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಮೇ 21– ಬೆಳೆ ನಷ್ಟಕ್ಕೊಳಗಾಗಿರುವ ರೈತರಿಗೆ ವೈಜ್ಞಾನಿಕ ಪರಿಹಾರ ನೀಡುವ ಜೊತೆಗೆ ಬಾಳೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ತಿರುಮಕೂಡಲಿನ ಕಾವೇರಿ–ಕಪಿಲಾ ಸೇತುವೆ ಬಳಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ತಿ.ನರಸೀಪುರ–ಮೈಸೂರು ರಸ್ತೆಯಲ್ಲಿ ಜಮಾಯಿಸಿದ ರೈತರು, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸುಮಾರು ಅರ್ಧ ಗಂಟೆ ರಾಷ್ಟ್ರೀಯ ಹೆದ್ದಾರಿ ತಡೆದಿದ್ದರಿಂದ ರಸ್ತೆಯ ಎರಡೂ ಕಡೆ ಕಿಲೋಮೀಟರ್ ಗಟ್ಟಲೇ ವಾಹನಗಳು ನಿಂತು ಸಾರ್ವಜನಿಕರು ತೀವ್ರ ತೊಂದರೆಗೊಳಗಾದರು.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಮೈಸೂರು–ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬಿರುಗಾಳಿಯಿಂದ 2 ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದಿದ್ದ ಬಾಳೆ ಬೆಳೆ ನಾಶವಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು ಗ್ರಾಮೀಣ ರೈತರ ಸಮಸ್ಯೆಗಳನ್ನು ಆಲಿಸುವಲ್ಲಿ ವಿಫಲರಾಗಿದ್ದಾರೆ. ಅಲ್ಲದೇ ನಷ್ಟ ಅನುಭವಿಸಿದ ರೈತರ ಬೆಳೆ ಸಮೀಕ್ಷೆ ನಡೆಸಿ ವರದಿ ಸಲ್ಲಿಸಿ ವಿಶೇಷ ಪ್ಯಾಕೇಜ್ ಘೋಷಿಸಲು ಸರ್ಕಾರವನ್ನು ಒತ್ತಾಯಿಸುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಜಿಲ್ಲಾಡಳಿತ ಸಮರ್ಪಕ ವರದಿ ತಯಾರಿಸಿ ಸರ್ಕಾರಕ್ಕೆ ವಿಶೇಷ ಪ್ಯಾಕೇಜ್‌ಗೆ ಮನವಿ ಸಲ್ಲಿಸಬೇಕು. ಜಿಲ್ಲಾ ಮಂತ್ರಿಗಳು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಜವಾಬ್ದಾರಿ ತೆಗೆದುಕೊಂಡು ಸಂಬಂಧಿಸಿದ ಸಚಿವರು, ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ರೈತರಿಗೆ ನ್ಯಾಯ ಕೊಡಿಸುವಲ್ಲಿ ಮುಂದಾಗಬೇಕು ಎಂದು ಒತ್ತಾಯಿಸಿದರು.

ಪ್ರತಿ ಎಕರೆಗೆ ಒಂದು ಲಕ್ಷ ರೂ. ಪರಿಹಾರ ನೀಡಬೇಕು. ಪ್ರಕೃತಿ ವಿಕೋಪದಡಿ ಪ್ರತಿ ಎಕರೆಗೆ 6800 ರೂ. ನೀಡುವ ಮಾನದಂಡ ಕೈ ಬಿಟ್ಟು ನೊಂದ ಬಾಳೆ ಬೆಳೆಗಾರರ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಬರ ಪರಿಹಾರ ನೀಡುವಲ್ಲಿ ತಾರತಮ್ಯ ಎಸಗಲಾಗುತ್ತಿದೆ. ಕಾವೇರಿ, ಕಬಿನಿ ನೀರನ್ನು ತಮಿಳುನಾಡಿಗೆ ಹರಿಸಿ ಅಚ್ಚುಕಟ್ಟು ಭಾಗದ ರೈತರಿಗೆ ಬೆಳೆ ಬೆಳೆಯಲು ನೀರು ನೀಡದೇ ರಾಜ್ಯ ಸರ್ಕಾರ ರೈತರಿಗೆ ದ್ರೋಹ ಮಾಡಿದೆ ಎಂದು ಆರೋಪಿಸಿದರು.

ಹೊಸ ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮ– ಸಕ್ರಮ ಯೋಜನೆ ಮರು ಜಾರಿ ಮಾಡಬೇಕು. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 10 ರೂ. ಹೆಚ್ಚುವರಿ ಪ್ರೋತ್ಸಾಹ ಧನ ನೀಡಬೇಕು. ಹಗಲು ವೇಳೆ 10 ಗಂಟೆ ವಿದ್ಯುತ್ ನೀಡಬೇಕು. ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳು ಕೃಷಿಗೆ ಸಾಲ ನೀಡಿ ಸಾಲದ ಮೊತ್ತಕ್ಕೆ ಟ್ರಾಕ್ಟರ್ ಮತ್ತು ಮತ್ತಿತರ ಕೃಷಿ ಯಂತ್ರೋಪಕರಣಗಳನ್ನು ಜಪ್ತಿ ಮಾಡಿ ಹೊರ ರಾಜ್ಯಗಳಲ್ಲಿ ಪ್ರಕರಣ ದಾಖಲಿಸುವುದನ್ನು ನಿಲ್ಲಿಸಬೇಕು. ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಪರಿಗಣನೆ ಕೈಬಿಡಬೇಕು ಹಾಗೂ ದ್ವಿಪಕ್ಷೀಯ ಒಪ್ಪಂದ ಪತ್ರ ಜಾರಿಗೆ ತರಬೇಕು. ಕಬ್ಬು ಬೆಳೆಗಾರರಿಗೆ ಬರಬೇಕಾದ 950 ಕೋಟಿ ರೂ. ಲಾಭಾಂಶವನ್ನು ರೈತರಿಗೆ ಹಂಚಿಕೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲಿಯೂರು ಹರ್ಷ, ದೇವಿರಮ್ಮನಹಳ್ಳಿ ಮಹೇಶ್, ತಾಲೂಕು ಅಧ್ಯಕ್ಷ ಸುಜ್ಜಲೂರು ಜಯಸ್ವಾಮಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬನಹಳ್ಳಿಹುಂಡಿ ರಾಜೇಂದ್ರ, ಮೂಗೂರು ಶರತ್, ಶಂಭುದೇವನಪುರ ನಂಜುಂಡಸ್ವಾಮಿ, ಹಲವಾರ ಮಹದೇವಪ್ಪ, ಉತ್ತಂಬಳ್ಳಿ ಗಣೇಶ್, ಮುದ್ದಳ್ಳಿ ಚಿಕ್ಕಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜನ್ನೂರು ಶಾಂತರಾಜು, ಹಂಬಳೆ ಮಹದೇವಸ್ವಾಮಿ, ಕಸುವಿನಹಳ್ಳಿ ಮಂಜೇಶ್, ದೇವನೂರು ನಾಗೇಂದ್ರ, ಕುಂತೂರು ರವಿ, ಮಳೆಯೂರು ಮಹೇಂದ್ರ, ಬಸವರಾಜಪ್ಪ, ಪ್ರವೀಣ, ನಂಜುಂಡ ನಾಯಕ, ಸೋಮೇಶ್, ಸತೀಶ್, ಉಡಿಗಾಲ ಮಂಜುನಾಥ್, ಭೀರ್ಮನ್ ಗುರು, ಮಹದೇವಸ್ವಾಮಿ, ದೇವಿರಮ್ಮನಹಳ್ಳಿ ಚಿಕ್ಕ ಯಜಮಾನರಾದ ಮಹೇಶ್ ಕುಮಾರ್, ಶಿವಕುಮಾರ್, ಕೆಳಲಿಪುರ ಶ್ರೀಕಂಠ, ಗುರುವಿನಪುರ ಪ್ರಸಾದ್, ಮೋಹನ್, ಸ್ವಾಮಿ, ಚಂದ್ರು, ಸಂಪತ್ತು, ವಲಗೆರೆ ಗಣೇಶ್ ಮತ್ತಿತರ ರೈತ ಮುಖಂಡರಿದ್ದರು.

ಪ್ರವೇಶಾತಿ ಆರಂಭ

ಕೆ.ಆರ್.ನಗರ, ಮೇ 21– ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2024–25ನೇ ಸಾಲಿಗೆ ವಿವಿಧ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಆರಂಭವಾಗಿದೆ ಎಂದು ಪ್ರಾಂಶುಪಾಲ ಬಿ.ಟಿ.ವಿಜಯ್ ತಿಳಿಸಿದ್ದಾರೆ.

ಬಿಎ ವಿಭಾಗದಲ್ಲಿ ಇತಿಹಾಸ–ಅರ್ಥಶಾಸ್ತ್ರ– ರಾಜ್ಯಶಾಸ್ತ್ರ, ಇತಿಹಾಸ–ಅರ್ಥಶಾಸ್ತ್ರ– ಐಚ್ಛಿಕ ಕನ್ನಡ, ಇತಿಹಾಸ–ಅರ್ಥಶಾಸ್ತ್ರ– ಭೂಗೋಳಶಾಸ್ತ್ರ, ಇತಿಹಾಸ –ಅರ್ಥಶಾಸ್ತ್ರ– ಸಮಾಜಶಾಸ್ತ್ರ, ಇತಿಹಾಸ –ರಾಜ್ಯಶಾಸ್ತ್ರ –ಐಚ್ಛಿಕ ಕನ್ನಡ, ಅಪರಾಧ ಶಾಸ್ತ್ರ– ಮನೋವಿಜ್ಞಾನ– ಸಮಾಜಶಾಸ್ತ್ರ, ಇತಿಹಾಸ– ರಾಜಶಾಸ್ತ್ರ– ಸಮಾಜಶಾಸ್ತ್ರ, ಇತಿಹಾಸ– ಸಮಾಜಶಾಸ್ತ್ರ –ಐಚ್ಛಿಕ ಕನ್ನಡ, ಇತಿಹಾಸ –ಭೂಗೋಳಶಾಸ್ತ್ರ– ರಾಜ್ಯಶಾಸ್ತ್ರ.

ಬಿಎಸ್‌ಸಿ ವಿಭಾಗದಲ್ಲಿ ಭೌತಶಾಸ್ತ್ರ– ರಸಾಯನಶಾಸ್ತ್ರ– ಗಣಿತಶಾಸ್ತ್ರ, ರಸಾಯನಶಾಸ್ತ್ರ–ಸಸ್ಯಶಾಸ್ತ್ರ– ಪ್ರಾಣಿಶಾಸ್ತ್ರಸೇರಿದಂತೆ ಬಿಕಾಂ ಹಾಗೂ ಬಿಬಿಎಗೆ ಪ್ರವೇಶಾತಿ ಪ್ರಾರಂಭವಾಗಿದ್ದು, ಅರ್ಹ ವಿದ್ಯಾರ್ಥಿಗಳು ಅಗತ್ಯ ಮೂಲ ದಾಖಲೆಗಳು ಹಾಗೂ ಅವುಗಳ ಜೆರಾಕ್ಸ್ ಪ್ರತಿಗಳೊಂದಿಗೆ ಪ್ರವೇಶಾತಿ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಆಸೆ, ಆಮಿಷಗಳಿಗೆ ಬಲಿಯಾಗದೆ ನನ್ನನ್ನು ಬೆಂಬಲಿಸಿ

ಮತದಾರರಿಗೆ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ



ಪಿರಿಯಾಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮತಯಾಚಿಸಿದರು.

ಪಿರಿಯಾಪಟ್ಟಣ, ಮೇ 21– ನಾನು 1996ರಲ್ಲಿ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಮೇಲ್ಮನೆಗೆ ಆಯ್ಕೆಯಾಗಿದ್ದೆ. ಅಂದಿನಿಂದ ಇಂದಿನವರೆಗೆ ನಾನು ಶಿಕ್ಷಕರ ಬೇಡಿಕೆ, ಹೋರಾಟ ಬೆಂಬಲಿಸಿದ್ದು ಅವರಿಗೆ ಒತ್ತಾಸೆಯಾಗಿ ದುಡಿದಿದ್ದೇನೆ. ಆದ್ದರಿಂದ ಈ ಬಾರಿಯ ವಿಧಾನಪರಿಷತ್ ಚುನಾವಣೆಯಲ್ಲಿ ಜಿಲ್ಲೆಯ ಅರ್ಹ ಮತದಾರರು ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗದೇ ನನ್ನನ್ನು ಬೆಂಬಲಿಸಿ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ ಮಾಡಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ಮತಯಾಚಿಸಿ ಮಾತನಾಡಿದ ಅವರು, ಈ ಹಿಂದೆ ನಾನು ವಿಧಾನ ಪರಿಷತ್ ಸದಸ್ಯನಾಗಿ ಸೇವೆ ಸಲ್ಲಿಸಿದ್ದು, ನಾನು ಯಾವುದೇ ಪಕ್ಷಕ್ಕೆ ಸೀಮಿತವಾಗಿಲ್ಲ. ನನ್ನ ಪಕ್ಷ ಶಿಕ್ಷಕರ ಪಕ್ಷ ಎಂದರು.

ಜೆಡಿಎಸ್, ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕಾನಂದ 124 ಕೋಟಿ ಒಡೆಯ. ಅವರು ಉದ್ಯಮಿಗಳಾಗಿದ್ದು, ಶಿಕ್ಷಕರ ಬೇಡಿಕೆ, ಹೋರಾಟಕ್ಕೂ ಇವರಿಗೂ ಯಾವುದೇ ಸಂಬಂಧವಿಲ್ಲ. ಆದೂ ಅವರು ಈ ಕ್ಷೇತ್ರದಲ್ಲಿ ನಿಂತಿದ್ದಾರೆ. ಕಾಂಗ್ರೆಸ್‌ನಿಂದ ಮರಿತಿಬ್ಬೇಗೌಡರು ಸ್ಪರ್ಧಿಸಿದ್ದು, ಅವರು ನನ್ನ ಸಹಾಯದಿಂದ ಮೇಲೆ ಬಂದವರು. 2002ರಲ್ಲಿ ಮರಿತಿಬ್ಬೇಗೌಡರನ್ನು ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಿ ಗೆಲ್ಲಿಸಿದ್ದು ನಾನು. ಆದರೆ ಅವರು ಹತ್ತಿದ ಏಣಿ ಒದ್ದು ಬೀಳಿಸಿದ್ದಾರೆ. ಈ ಕ್ಷೇತ್ರದಲ್ಲಿ 24 ವರ್ಷಗಳ ಕಾಲ ಸೇವೆ ಸಲ್ಲಿಸಿದ ಅವರ ಸಾಧನೆ ಶೂನ್ಯ. ಅವರು ಪ್ರಸ್ತುತ ನಿಂತ ನೀರಾಗಿದ್ದಾರೆ. ಕುಡಿಯಲು ಯೋಗ್ಯವಾಗಿಲ್ಲ. ಮರಿತಿಬ್ಬೇಗೌಡರು ಶಿಕ್ಷರು ಮತ್ತು ಶಿಕ್ಷಕರಿಗಾಗಿ ಎಂಬ ಪುಸ್ತಕ ಬರೆದಿದ್ದು, ಅದರಲ್ಲಿರುವುದೆಲ್ಲಾ ಬರೀ ಸುಳ್ಳು ಈ ಬಗ್ಗೆ ಚರ್ಚಿಸಲು ನಾನು ಸಿದ್ಧ. ಅವರಿಗೆ ತಾಕತ್ತಿದ್ದರೇ ನನ್ನ ಸವಾಲನ್ನು ಸ್ವೀಕರಿಸಿ ವೇದಿಕೆ ಸಿದ್ಧಪಡಿಸಲಿ. ಅವರು ಕರೆದಲ್ಲಿಗೆ ನಾನು ಬರುತ್ತೇನೆ ಎಂದರು.

ವಿಧಾನಪರಿಷತ್ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಸ್ಪರ್ಧೆ ಮಾಡುವುದು ಸರಿಯಲ್ಲ. ಈ ಕ್ಷೇತ್ರ ಬುದ್ಧಿ ಜೀವಿಗಳು, ವಿಚಾರವಾದಿಗಳು, ಕಲೆ, ಸಾಹಿತ್ಯ, ವಿಜ್ಞಾನಿಗಳಿಗೆ ಸೀಮಿತವಾಗಿದ್ದು, ಇದೀಗ ಅವೆಲ್ಲವನ್ನು ಗಾಳಿಗೆ ತೂರಿ ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಿದ್ದಾರೆ. ಅದರಲ್ಲೂ ಸಿಎಂ, ಡಿಸಿಎಂ ಹಾಗೂ ಶಿಕ್ಷಣ ಸಚಿವರು ಒಂದು ಮೇಲ್ಮನೆ ಸದಸ್ಯ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಅಭ್ಯರ್ಥಿ ಜೊತೆ ಬಂದಿದ್ದಾರೆ ಎಂದರೆ ಸದಸ್ಯರ ಪರಿಸ್ಥಿತಿಯನ್ನು ಮತದಾರರು ಅರ್ಥಮಾಡಿಕೊಳ್ಳಬೇಕು. ಇದು ಮತದಾರರನ್ನು ಒತ್ತಡಕ್ಕೆ ಸಿಲುಕಿಸುವ ತಂತ್ರಗಾರಿಕೆ ಎಂದು ಆರೋಪಿಸಿದರು.

ಈ ವೇಳೆ ಕಾಯಕ ಸಮಾಜದ ಮುಖಂಡರಾದ ಶಿವರಾಜ್, ಕುಮಾರ್, ಶಿವಪ್ಪ ಶೆಟ್ಟಿ, ನಾಗೇಶ್ ಸೇರಿದಂತೆ ಇನ್ನಿತರರಿದ್ದರು.

ಶ್ರೀಆದಿಚುಂಚನಗಿರಿ ಕಾಲೇಜಿಗೆ ಬಿಕಾಂ, ಬಿಎನಲ್ಲಿ ಶೇ.100ರಷ್ಟು ಫಲಿತಾಂಶ



ನಗ್ಮ



ಸೌಂದರ್ಯ



ಸಹನಾ ಬಿ.ವಿ.



ಭಾರತಿ ಎಂ.



ಪೂಜಾಶ್ರೀ



ರಮ್ಯ



ಕೀರ್ತಿ



ಸೋನಾ

ಹೆಚ್.ಡಿ.ಕೋಟೆ, ಮೇ 21– ಪಟ್ಟಣದ ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಅಂತಿಮ ಬಿಕಾಂ, ಬಿಎ ವಿಭಾಗದಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ.

ಕಳೆದ ಡಿಸೆಂಬರ್ ಹಾಗೂ ಜನವರಿಯಲ್ಲಿ ನಡೆದ ಅಂತಿಮ ವರ್ಷದ ಬಿಕಾಂ 5ನೇ ಸೆಮಿಸ್ಟರ್ ಪರೀಕ್ಷೆ ಬರೆದಿದ್ದ 81 ವಿದ್ಯಾರ್ಥಿಗಳ ಪೈಕಿ 60 ಮಂದಿ ಅತ್ಯುನ್ನತ ಶ್ರೇಣಿ, 21 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳಾದ ನಗ್ಮ 648, ಸೌಂದರ್ಯ 641, ಬಿ.ವಿ.ಸಹನ 636, ಎಂ.ಭಾರತಿ 634, ಪೂಜಾಶ್ರೀ 633 ಅಂಕ ಪಡೆದಿದ್ದಾರೆ.

ಅಂತಿಮ ವರ್ಷದ ಬಿಎ ವಿಭಾಗದ ಐದನೇ ಸೆಮಿಸ್ಟರ್‌ನಲ್ಲಿ ಪರೀಕ್ಷೆ ಬರೆದಿದ್ದ 45 ವಿದ್ಯಾರ್ಥಿಗಳ ಪೈಕಿ 30 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಂಶುಪಾಲರಾದ ಡಾ. ವೆಂಕಟೇಶ್ ತಿಳಿಸಿದ್ದಾರೆ. ರಮ್ಯ 656, ಕೀರ್ತಿ 636, ಸೋನಾ 629 ಅಂಕ ಗಳಿಸಿದ್ದಾರೆ.

ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಮೈಸೂರು ಶ್ರೀ ಆದಿಚುಂಚನಗಿರಿ ಶಾಖಾ ಮಠದ ಪೀಠಾಧ್ಯಕ್ಷ ಸೋಮೇಶ್ವರನಾಥ ಸ್ವಾಮೀಜಿ ಹಾಗೂ ಆಡಳಿತ ಅಧಿಕಾರಿ ಪ್ರೊಫೆಸರ್ ಕೆ.ಪಿ. ಬಸವಗೌಡ ಶುಭ ಕೋರಿದ್ದಾರೆ.

ಆದಿಶಕ್ತಿ ನಾಡಮೇಲಮ್ಮ ದೇವಾಲಯ ಲೋಕಾರ್ಪಣೆ



ನಂಜನಗೂಡು, ಮೇ 21– ತಾಲೂಕಿನ ಹರತಲೆ ಗ್ರಾಮದಲ್ಲಿ ಮಂಗಳವಾರ ನೂತನ ಆದಿಶಕ್ತಿ ನಾಡಮೇಲಮ್ಮ ದೇವಾಲಯವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಸಿ.ಚಿಕ್ಕರಂಗನಾಯಕ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ಆದಿಶಕ್ತಿ ನಾಡಮೇಲಮ್ಮ ಅಮ್ಮನವರ ದೇವಾಲಯ ಲೋಕಾರ್ಪಣೆಗೊಂಡಿರುವುದು ಸಂತಸದ ವಿಚಾರ. ರೈತರು ತಮ್ಮ ಫಸಲು, ಜಾನುವಾರುಗಳ ಸುಭೀಕ್ಷೆಗಾಗಿ ಗ್ರಾಮ ದೇವತೆಗಳನ್ನು ಪೂಜಿಸಿ, ಪ್ರಾರ್ಥನೆ ಸಲ್ಲಿಸುತ್ತಾರೆ. ನಮ್ಮ ಭಾಗದಲ್ಲಿ ಕಳೆದ ವರ್ಷ ಭೀಕರ ಬರಗಾಲದಿಂದ ರೈತರು ಹೈರಾಣಾಗಿದ್ದರು. ಈ ವರ್ಷ ಉತ್ತಮ ಮಳೆಯಾಗುವ ಸೂಚನೆಗಳಿವೆ. ಮಳೆಯಾದರೆ ರೈತರಿಗೆ ಕೃಷಿ ಚಟುವಟಿಕೆ ನಡೆಸಲು ಅನುಕೂಲವಾಗಲಿದೆ. ಹಾಗಾಗಿ ಉತ್ತಮ ಮಳೆ, ಬೆಳೆಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ದೇವಾಲಯದಲ್ಲಿ ಹೋಮ ಹವನ, ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿದ ನಂತರ ನಾಡಮೇಲಮ್ಮ ಅಮ್ಮನವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಹೂವಿನಿಂದ ಅಲಂಕಾರ ಮಾಡಿ, ವಿಶೇಷ ಪೂಜೆ ಸಲ್ಲಿಸಿದ ಬಳಿಕ ದೇವಿಯ ಉತ್ಸವ ಮೂರ್ತಿಯನ್ನು ಹೊಸ ನೀರು ತಂದು, ಸತ್ತಿಗೆ, ಸುರಪಾಣಿ, ಮಂಗಳವಾದ್ಯದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಅಲ್ಲದೇ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ಗ್ರಾಪಂ ಸದಸ್ಯರಾದ ಗೋವಿಂದರಾಜು, ಹಾಲು ಉತ್ಪಾದಕರ ಸಂಘದ ಪರೀಕ್ಷಕ ನಂಜನಾಯಕ, ಎಂ.ಜಿ.ಮಂಜುನಾಥ್, ದೇವರಗುಡ್ಡಪ್ಪ ಮಹೇಶ್, ಮುಖಂಡರಾದ ಮಂಚನಾಯಕ, ಮಹದೇವನಾಯಕ, ಯುವ ಮುಖಂಡರಾದ ಭದ್ರನಾಯಕ, ಮನು ಉಪಸ್ಥಿತರಿದ್ದರು.

ಸರಗೂರಲ್ಲಿ ಭಾರಿ ಮಳೆಗೆ ಅಪಾರ ನಷ್ಟ

ಸರಗೂರು, ಮೇ 21– ಸೋಮವಾರ ಸುರಿದ ಭಾರಿ ಮಳೆಗೆ ತಾಲೂಕಿನಲ್ಲಿ ಸಾಕಷ್ಟು ನಷ್ಟ ಸಂಭವಿಸಿದೆ. ಸೋಮವಾರ ಮಧ್ಯಾಹ್ನ 3 ಗಂಟೆಗೆ ಆರಂಭವಾದ ಮಳೆ ರಾತ್ರಿ ವರೆಗೂ ಸುರಿಯಿತು. ಇದರಿಂದ ತಾಲೂಕಿನ ಕಾಡಬೇಗೂರು, ಕುರ್ಣೆಗಾಲ, ಕೂಡುಗಿ ಹಾಡಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಅಡ್ಡಲಾಗಿ ಹಾಕಲಾಗಿದ್ದ ಪೈಪ್ ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ. ಇದರಿಂದ ಈ ಮಾರ್ಗದಲ್ಲಿ ಭಾರಿ ವಾಹನಗಳು ಸಂಚರಿಸದಂತಾಗಿದೆ. ಅಲ್ಲದೇ ರೈತರು ಕಷ್ಟಪಟ್ಟು ಬೆಳೆದ ಬೆಳೆಗಳು ಕೊಚ್ಚಿ ಹೋಗಿ ಅಪಾರ ನಷ್ಟ ಸಂಭವಿಸಿದೆ.

ಕಳಪೆ ಕಾಮಗಾರಿಯಿಂದ ರಸ್ತೆಗೆ ಅಡ್ಡಲಾಗಿ ಹಾಕಲಾಗಿದ್ದ ಪೈಪ್ ಕೊಚ್ಚಿ ಹೋಗಿದೆ. ಹೀಗಾಗಿ ಕೂಡಲೆ ಇದನ್ನು ದುರಸ್ತಿ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ಎಂ.ಸಿ.ತಳಲು ಗ್ರಾಪಂ ಸದಸ್ಯರಾದ ಪ್ರಕಾಶ್, ಚಂದ್ರು ಹಾಗೂ ಮುಖಂಡರಾದ ಬಸವಣ್ಣ, ಜನ್ನಪ್ಪ, ನಾಗರಾಜು, ಇನ್ನಿತರರು ಒತ್ತಾಯಿಸಿದ್ದಾರೆ.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ, ಮೇ 21– ಮಳೆಯಿಂದ ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ನೀಡಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ರೈತ ಸಂಘಟನೆಗಳ ಒಕ್ಕೂಟದ ಸದಸ್ಯರು ಮಳೆ ಗಾಳಿಯಿಂದಾದ ಬೆಳೆಗೆ ಪರಿಹಾರ ನೀಡದ ರಾಜ್ಯ ಸರ್ಕಾರದ ನಡೆ ಖಂಡಿಸಿ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿ, ರೈತರು ಬರಗಾಲದ ಸಂಕಷ್ಟದಲ್ಲಿದ್ದು ಕೃಷಿ ಚಟುವಟಿಕೆ ನಡೆಸಲು ಆರ್ಥಿಕ ಮುಗ್ಗಟ್ಟು ಎದುರಿಸುವಂತಾಗಿದೆ. ಪ್ರತಿಯೊಬ್ಬ ರೈತನಿಗೂ ಬರ ಪರಿಹಾರ ದೊರಕಿದರೆ ಕೃಷಿ ಚಟುವಟಿಕೆ ನಡೆಸಲು ಅನುಕೂಲವಾಗುತ್ತದೆ. ಹಾಗಾಗಿ ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಘೋಷಿಸಿದ ಕಬ್ಬಿನ ಹೆಚ್ಚುವರಿ ದರ ಟನ್ ಕಬ್ಬಿಗೆ 150 ರೂ.ಗಳನ್ನು ಬಣ್ಣಾರಿ ಸಕ್ಕರೆ ಕಾರ್ಖಾನೆ ರೈತರಿಗೆ ಪಾವತಿಸಿಲ್ಲ. ಹೀಗಾಗಿ ಆ ಹಣವನ್ನು ರೈತರಿಗೆ ಕೊಡಿಸಿದರೆ ಅನುಕೂಲವಾಗುತ್ತದೆ. ಕಬ್ಬಿನ ಇಳುವರಿಯಲ್ಲಿ ಮೋಸ ಹಾಗೂ ತೂಕದಲ್ಲಿ ಮೋಸ, ಕಬ್ಬಿನ ಉತ್ಪನ್ನಗಳ ಲಾಭ ಹಂಚಿಕೆಯಲ್ಲಿ ಮೋಸ ಪರಿಶೀಲನೆ ನಡೆಸಲು ಸಕ್ಕರೆ ಅಭಿವೃದ್ಧಿ ಆಯುಕ್ತರು ಸಮಿತಿ ರಚಿಸಲಾಗಿದ್ದು, ಈ ಬಗ್ಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಭಾರಿ ಮಳೆ ಗಾಳಿಯಿಂದ ತಾಲೂಕಿನ ರೈತರ ಬಾಳೆ, ಕಬ್ಬು ಇನ್ನಿತರೆ ಬೆಳೆಗಳು ಸಾಕಷ್ಟು ಹಾನಿಯಾಗಿದ್ದು, ರೈತರಿಗೆ ನ್ಯಾಯಯುತ ಪರಿಹಾರ ಕೊಡಿಸಬೇಕು. ಮಳೆಗಾಲ ಆರಂಭವಾಗಿರುವ ಕಾರಣ ಕೃಷಿ ಚಟುವಟಿಕೆ ನಡೆಸಲು ಹಾಗೂ ಬಾವಿಗಳ ಅಂತರ್ಜಲ ವೃದ್ಧಿಗೆ ತಾಲೂಕಿನ ಎಲ್ಲಾ ಕೆರೆ, ಕಟ್ಟೆಗಳ ಹಾಗೂ ಕಾಲುವೆಗಳ ಹೂಳೆತ್ತುವ ಕಾರ್ಯ ಕೈಗೊಳ್ಳಬೇಕು. ಬರ ಪರಿಹಾರ ಜಂಟಿ ಖಾತೆದಾರರು, ಬಗರ್‌ಹುಕುಂ ಸಾಗುವಳಿದಾರರು ಹಾಗೂ ಗೇಣಿದಾರ ಸಾಗುವಳಿ ರೈತರಿಗೂ ಪರಿಹಾರ ಸಿಕ್ಕಿಲ್ಲದಿರುವ ಹಿನ್ನೆಲೆಯಲ್ಲಿ ಇಂತವರಿಗೂ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬ್ಯಾಂಕುಗಳ ಎದುರು ರೈತರಿಗೆ ದೊರಕುವ ಸಾಲ ಮತ್ತು ಸೌಲಭ್ಯಗಳ ನಾಮಫಲಕ ಹಾಕಬೇಕು. ಸರ್ಕಾರದ ಸಹಾಯ ಧನ, ಪಿಂಚಣಿ ಹಣ ಹಾಗೂ ಪರಿಹಾರ ಹಣ ಇನ್ನಿತರ ಸಬ್ಸಿಡಿ ಹಣವನ್ನು ರೈತರ ಸಾಲದ ಖಾತೆಗೆ ಜಮಾ ಮಾಡಿಕೊಳ್ಳುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಖಾಸಗಿ ಹಣಕಾಸು ಸಂಸ್ಥೆಗಳು ಗೂಂಡಾಗಳ ಮೂಲಕ ಸಾಲ ವಸೂಲಿ ಮಾಡುತ್ತಿದ್ದು, ಗೂಂಡಾ ವರ್ತನೆಗೆ ಕಡಿವಾಣ ಹಾಕಬೇಕು ಹಾಗೂ ಖಾಸಗಿ ಶಾಲಾ, ಕಾಲೇಜುಗಳಲ್ಲಿ ಡೊನೇಶನ್ ಹಾವಳಿಗೆ ಕಡಿವಾಣ ಹಾಕಲು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಶಿರಸ್ತೇದಾರ್ ಮಂಜುಳಾ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ತಾಲೂಕು ಪ್ರಧಾನ ಕಾರ್ಯದರ್ಶಿ ಪ್ರಸಾದ್ ನಾಯಕ್, ತಾಲೂಕು ಮಹಿಳಾ ಅಧ್ಯಕ್ಷೆ ಎನ್.ರೂಪ, ಕುರುಬೂರು ಪ್ರದೀಪ್, ಬೆನಕನಹಳ್ಳಿ ಪರಶಿವಮೂರ್ತಿ, ಕುಂತನಹಳ್ಳಿ ಸ್ವಾಮಿ,ಸೀಹಳ್ಳಿ ರವಿ, ಕುಪ್ಯ ಪುಟ್ಟಸ್ವಾಮಿ, ಬಿ.ಬೆಟ್ಟಹಳ್ಳಿ ರಾಮಲಿಂಗಯ್ಯ, ಬನ್ನೂರು ಸೂರಿ, ಬಿ.ಆರ್. ಚೆಲುವೇಗೌಡ,ವಾಚ್ ಕುಮಾರ, ನಿಂಗರಾಜು, ಶಾಂತರಾಜು, ಎಸ್.ರಾಜೇಶ್, ಅಪ್ಪಣ್ಣ ಎನ್.ರವಿಕುಮಾರ್, ಆರ್.ಬಸವರಾಜು ಸೇರಿದಂತೆ ರೈತ ಸಂಘದ ಸದಸ್ಯರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅರಮನೆ 4 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಗಧೀರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಗ ನಾನ್ ಥಾನ್ ಕಿಂಗು (ತ)	4 ಪ್ರದರ್ಶನಗಳು
ಸಂಗಂ	
ಕೃಷ್ಣ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಯುವ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇಫ್ 2024 (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಮ.1.45ಕ್ಕೆ, ದಿ ಬಾಯ್ ಅಂಡ್ ದಿ ಹೆರಾನ್ (ಜ): ಸಂ.4.45ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.7.20ಕ್ಕೆ.
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.55ಕ್ಕೆ, A (ಕ): ಮ.1.20ಕ್ಕೆ, ಶ್ರೀಕಾಂತ್ (ಹಿಂ): ಸಂ.4.25ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಸುರೇಶಿಂತೆಯುಂ ಸುಮಲತಾಯುದೆಯುಂ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಸ್ವಿಚ್ ಕೇಸ್ ಎನ್ (ಕ): ಬೆ.10.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.1.15ಕ್ಕೆ, ರಾ.7.20ಕ್ಕೆ, ಕೃಷ್ಣ ನೀ ಬೇಗನೆ ಬಾರೋ (ಕ): ಸಂ.4.15ಕ್ಕೆ, ಅಪರಿಚಿತುಡು (ತೆ): ರಾ.10ಕ್ಕೆ.
ಸ್ಕ್ರೀನ್ 4	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.50ಕ್ಕೆ, ಮ.12.55ಕ್ಕೆ, ಮ.3ಕ್ಕೆ, ಸಂ.5.05ಕ್ಕೆ, ರಾ.10.05ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಮನ ಅವತಾರ (ಕ): ಮ.1.30ಕ್ಕೆ, ಸಂ.4.20ಕ್ಕೆ, ರಣಹದ್ದು (ಕ): ರಾ.7.10ಕ್ಕೆ.
ಸ್ಕ್ರೀನ್ 2	ಅರಮನೈ 4 (ತ): ರಾ.7ಕ್ಕೆ.
ಸ್ಕ್ರೀನ್ 3	ಗುರುವಾಯೂರಂಬಲ ನಡಾಯಿಲ್ (ಮ): ರಾ.7ಕ್ಕೆ.
ಸ್ಕ್ರೀನ್ 4	ಅರಮನೈ 4 (ತ): ಮ.1.30ಕ್ಕೆ, ಕಿರಾತಕ 2 (ಕ): ಸಂ.4.25ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.7.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೇನು ನೊಣಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ



ನಂಜನಗೂಡು, ಮೇ 21– ಪರಿಸರ ಸಂರಕ್ಷಣೆ ಹಾಗೂ ಸಮತೋಲನದಲ್ಲಿ ಜೇನು ನೊಣಗಳು ಪ್ರಮುಖ ಪಾತ್ರ ವಹಿಸುತ್ತವೆ. ಜೇನು ನೊಣಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಡಾ.ವೈ.ಪಿ.ಪ್ರಸಾದ್ ತಿಳಿಸಿದರು.

ತಾಲೂಕಿನ ಸುತ್ತೂರು ಕೃಷಿ ವಿಜ್ಞಾನ ಕೇಂದ್ರದಲ್ಲಿ ಸೋಮವಾರ ವಿಶ್ವ ಜೇನು ನೊಣ ದಿನದ ಅಂಗವಾಗಿ ನಡೆದ ಜೇನು ಕೃಷಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜೇನು ಕೃಷಿಯಲ್ಲಿ ಪರಾಗಸ್ಪರ್ಶಗಳ ಮಹತ್ವ ಮತ್ತು ಪ್ರಕೃತಿಯಲ್ಲಿ ಪರಾಗಸ್ಪರ್ಶಗಳ ಸಂರಕ್ಷಣೆ ಸಾರುವುದು ಈ ದಿನದ ಮುಖ್ಯ ಉದ್ದೇಶ. ಮೇ 20 ಅನ್ನು ಆಧುನಿಕ ಜೇನು ಸಾಕಾಣಿಕೆಯ ಹರಿಕಾರ ಆಂಟೋನ್ ಜಾನ್ಸಾ ಅವರ ಹುಟ್ಟುಹಬ್ಬದ ಪ್ರಯುಕ್ತ ವಿಶ್ವ ಜೇನು ನೊಣ ದಿನವೆಂದು ಆಚರಿಸಲಾಗುತ್ತಿದೆ. ಜೇನು ನೊಣಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ ಹಾಗೂ ಜೇನು ಸಾಕಾಣಿಕೆಯಲ್ಲಿ ಗಮನಿಸಬಹುದಾದ ಅಂಶಗಳು ಮತ್ತು ಜೇನುಗೂಡಿಗೆ ಬಾಧಿಸುವ ಕೀಟ ಮತ್ತು ರೋಗಗಳ ಕುರಿತು ಮಾಹಿತಿ ಪಡೆದು ಜೇನು ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಂಪನ್ಮೂಲ ವ್ಯಕ್ತಿ ಮಂಡ್ಯ ರಾಜು ಮಾತನಾಡಿ, ಜೇನು ಕೃಷಿ ಇತಿಹಾಸ, ಜೇನಿನ ಪ್ರಯೋಜನಗಳು, ಕೃಷಿಯಲ್ಲಿ ಜೇನಿನ ಮಹತ್ವ, ಜೇನು ಸಾಕಾಣಿಕೆ, ಜೇನಿನ ಉಪ ಉತ್ಪನ್ನಗಳು ಮತ್ತು ಜೇನು ಸಾಕಾಣಿಕೆಯಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ರಾಜಗೋಪಾಲ್, ಡಾ.ವಿನಯ್ ರಾಜಣ್ಣ, ಡಾ.ರಕ್ಷಿತ್‌ರಾಜ್, ಗಂಗಪ್ಪ ಹಿಪ್ಪರಗಿ, ಶಾಮರಾಜ್ ಉಪಸ್ಥಿತರಿದ್ದರು.

ಮೌಂಟ್ ಎವರೆಸ್ಟ್ ಹತ್ತಿ ಸಾಧನೆಗೈದ ಮೈಸೂರಿನ ಮಹಿಳಾ ವೈದ್ಯೆ



ಡಾ.ಉಷಾ ಹೆಗ್ಡೆ

ಮೈಸೂರು, ಮೇ 21– ಮೈಸೂರಿನ ಮಹಿಳಾ ವೈದ್ಯರೊಬ್ಬರು ವಿಶ್ವದ ಅತೀ ಎತ್ತರದ ಪರ್ವತ 'ಮೌಂಟ್ ಎವರೆಸ್ಟ್' ಹತ್ತುವ ಮೂಲಕ ಸಾಧನೆ ಮೆರೆದಿದ್ದಾರೆ.

ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಖ್ಯಾತ ಮೂಳೆ ಶಸ್ತ್ರಚಿಕಿತ್ಸಕರಾದ ಡಾ. ಅಜಯ್ ಹೆಗ್ಡೆ ಅವರ ಪತ್ನಿ, ಜೆಎಸ್ಎಸ್ ದಂತ ವೈದ್ಯಕೀಯ ಕಾಲೇಜಿನ ವಿಭಾಗವೊಂದರ ಮುಖ್ಯಸ್ಥರಾಗಿರುವ ಡಾ.ಉಷಾ ಹೆಗ್ಡೆ ಅವರು 29,030 ಅಡಿ ಎತ್ತರದ ಪರ್ವತವನ್ನು ಭಾನುವಾರದಂದು ಹತ್ತಿದ್ದು, ಇಂದು(ಮಂಗಳವಾರ) ಬೆಳಗ್ಗೆ 6.10ರ ಸುಮಾರಿನಲ್ಲಿ ಶಿಬಿರಕ್ಕೆ ಸುರಕ್ಷಿತವಾಗಿ ಹಿಂದಿರುಗಿದ್ದಾರೆ. ಡಾ. ಉಷಾ ಹೆಗ್ಡೆ ಅವರು ಈ ಹಿಂದೆ 'ಐರನ್ ಮ್ಯಾನ್ ವೆಸ್ಟರ್ನ್ ಆಸ್ಟ್ರೇಲಿಯಾ–2019ರ ಟ್ರಯಥ್ಲಾನ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಸಾಧನೆಗೈದಿದ್ದರು. ನಂತರ ಅವರು ಮೈಸೂರು ದಸರಾ ಮಹೋತ್ಸವದಲ್ಲೂ ಟ್ರಯಥ್ಲಾನ್ ಆಯೋಜಿಸಿದ್ದರು.



'ಮೌಂಟ್ ಎವರೆಸ್ಟ್'ನಲ್ಲೂ ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಬ್ಯಾನರ್ ಪ್ರದರ್ಶಿಸಿದ ಡಾ. ಉಷಾ ಹೆಗ್ಡೆ

THE CLOVERS
WANTED
FULL TIME SENIOR ACCOUNTANT
SKILLS:
- B.Com / M.Com / MBA with exceptional Accounting knowledge
- Minimum 3 years of experience in Accounting.
- Tally, Computer knowledge, MS Excel is a must.

Email : info@thecloversclub.com
Mob : +91 99728 35238

2ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಅನಿತಾ ಹೆಚ್.ಎಂ. ಮತ್ತು ಪ್ರಸನ್ನ
ಶುಭಕೋರುವವರು:
ರತ್ನಮ್ಮ ಮತ್ತು ಮಾದನಾಯಕ ಎಸ್., ಬೆಸ್ಕಾಂ
ಪ್ರವೀಣ್ ಎಚ್.ಎಂ, ಬಿ.ಎಂ. ವೆಂಕಟೇಶ್, ಬೆಸ್ಕಾಂ
ಶಿಲ್ಪ ಮತ್ತು ಸಿದ್ದು

ಹಸಿರು ನಮ್ಮ ಉಸಿರು

ಆಫೀಸ್ ಬಾಯ್ ಬೇಕಾಗಿದ್ದಾರೆ
ವಯೋಮಿತಿ
20 ರಿಂದ 30 ವರ್ಷದೊಳಗೆ
ವಿದ್ಯಾರ್ಹತೆ:
ಎಸ್ಎಸ್ಎಲ್‌ಸಿ ಪಾಸ್/ಫೇಲ್
ಆಸಕ್ತರು ಸಂಪರ್ಕಿಸಿ
0821-2496520/21

FOR RENT
New building with 14 Nos. 1 BHK Units at Hootagalli KHB Colony, For PG, Hostel, Service Apartments
Call : 90362 26644

DTCP SITES FOR SALE
DTCP Sites With RERA
Near Jayapura, H.D. Kote Road, Mysore.
9590491194,9606783264

TERRACON INFRAA
Leading & Well Established Land Developer & Builder Since 3 Decades
JOB OPPORTUNITIES
- CUSTOMER REPRESENTATIVE EXECUTIVE (CRE) - Female
- SITE ENGINEER (Male)
Min. 2 to 3 Years Experience
VENUE: 3rd Floor, Mysore Trade Center, #L35, 36 & 37, B.N. Road, Opp. Sub-Urban Bus Stand, Mysore - 570001.
Call: 0821-2432600, 98809 14869
Email: tcpmysore@gmail.com

GSSS | GEETHA SHISHU SHIKSHANA SANGHA(R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016
APPOINTMENT NOTIFICATION

Position	Dept.	Qualification & Experience
Asst. Lab Instructor/ Lab Instructor	CSE (AI & ML), ISE & AI & DS	Diploma in CSE / ISE / ECE or B. Sc - CS / IT. Experience in Engineering College.
Asst. to Warden (Girls Hostel)	Hostel	Any Degree with experience.
STP Operator Ele. Maintenance	College	ITI / Diploma with experience.

- Salary: Based on credentials & experience.
- Apply with color photo and copy of all certificates to The Hon. Secretary on or before 31-05-2024.

Dr. M. Jagannatha Shenoi, President, GSSS (R)
www.geethashishu.in
Smt. Vanaja B. Pandit, Hon. Secretary, GSSS (R)

Loans Upto 90% of Project Cost
SmartEco Power Systems Pvt Ltd
Affordable Solar Power For Your Home
- Avail Rs.78,000 subsidy under 'PM Surya Ghar Yojana' for rooftop solar. Enjoy free electricity for lifetime.
- Collateral-free loans at interest rate starting from 7.0% with 6 months moratorium*
- Save Rs.10K-12K/KW/Year at current grid tariff. Get EV charging free thru solar.
- Top customer satisfaction rating in Google reviews.

Empanelled solar solutions provider for 8+ years
*T&C apply
#2660/4, 4th Cross, Kalidasa Road, V.V.Mohalla, Mysore
Ph: 0821-2416022 / 98803 96022 / 98866 50240

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ರಾಮವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
Mob: 9886654463

13ನೇ ವರ್ಷದ ಸವಿನೆನಪು



ಜಿ. ಪಾಂಡು

ನೀವು ಇಂದಿಗೆ ನಮ್ಮನ್ನು ಅಗಲಿ 13 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ,

ದುಃಖತಪ್ತರು: ಪತ್ನಿ ಕಲಾವತಿ, ಮಕ್ಕಳಾದ ವಿಜಯಕುಮಾರ್ ಪಿ., ಪ್ರಶಾಂತ್ ಪಿ., ಮಂಡಿ ಮೊಹಲ್ಲಾ, ಮೈಸೂರು.

2.5 BHK HOME INTERIORS @
Starting @ ₹2.5 Lacs*
Home Space Mart™
TALK TO OUR DESIGN TEAM
✆9108923123

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಪಾಲಾಕ್ಷ ಆರ್., ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ (ನೋ.), ಮೈಸೂರು ಇವರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮಹದೇವಪ್ಪ ಬಿನ್ ಲೇಟ್ ಪುಟ್ಟಪ್ಪ ಮತ್ತು ಇತರರಿಂದ ಖರೀದಿ ಮಾಡುವ ಸಂಬಂಧ ನೋಂದಾಯಿತ ಕ್ರಯದ ಕರಾರು ಮತ್ತು ನೋಂದಾಯಿತ ರದ್ದುಪಡಿಸಲಾಗದ ಸಾಮಾನ್ಯ ಅಧಿಕಾರ ಪತ್ರವನ್ನು ಪಡೆದಿದ್ದು, ಅದರ ಪ್ರಕಾರ ಸಂಪೂರ್ಣ ಹಕ್ಕುದಾರರು ಮತ್ತು ಮಾಲೀಕರು ಹಾಗೂ ಸ್ವಾಧೀನದಾರರಾಗಿ ಮುಂದುವರೆಯುತ್ತಿದ್ದು, ಷೆಡ್ಯೂಲ್ ಸ್ವತ್ತಿನ ಸಂಬಂಧ ವ್ಯವಹರಿಸಲು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದೇ ಹಕ್ಕು, ಹಿತಾಸಕ್ತಿ, ಮಾಲೀಕತ್ವ ಇದ್ದಂತಹ ಪಕ್ಷದಲ್ಲಿ ಅಥವಾ ಯಾವುದೇ ರೀತಿಯ ತಂಟೆ ತಕರಾರುಗಳು ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಈ ದಿನದಿಂದ ಮೂವತ್ತು (30) ದಿನಗಳ ಒಳಗಾಗಿ ನಮ್ಮ ಕಕ್ಷಿದಾರರ ವಕೀಲರ ಕಛೇರಿಯ ವಿಳಾಸದಲ್ಲಿ ತಮ್ಮ ಆಹವಾಲನ್ನು ಸಲ್ಲಿಸತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂ. 190 ರ ವಿಸ್ತೀರ್ಣ 2 ಎಕರೆ 36 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಉಳಿಕೆ ಸ್ವತ್ತು, ಪಶ್ಚಿಮಕ್ಕೆ : ಮೈಸೂರು ಯುನಿವರ್ಸಿಟಿ ಬಡಾವಣೆ, ಉತ್ತರಕ್ಕೆ : ರಸ್ತೆ ಮತ್ತು ಖಾಸಗಿ ಬಡಾವಣೆ ಹಾಗೂ ದಕ್ಷಿಣಕ್ಕೆ : ಮಹದೇವಸ್ವಾಮಿ ಬಿನ್ ಲೇಟ್ ಮಾದಪ್ಪ ರವರ ಸ್ವತ್ತು.

ಡಿ. ಲಿಂಗಣ್ಣ, ಬಿ.ಕಾಂ., ಎಲ್‌ಎಲ್.ಬಿ.,
ವಕೀಲರು, ನಂ. 10, ಶ್ರೀರಾಮ ಕಾಂಪ್ಲೆಕ್ಸ್,
ಆಲನಹಳ್ಳಿ ಬಡಾವಣೆ, ಟಿ. ನರಸೀಪುರ ಮುಖ್ಯರಸ್ತೆ
ನಜರ್‌ಬಾದ್ ಮೊಹಲ್ಲಾ, ಮೈಸೂರು
ಮೊ.: 9980149980

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಶ್ರೀಮತಿ. ಶಕುಂತಲಾ ರವರ ಪತಿಯಾದ ಲೇಟ್. ಮಾದೇಶ ಮತ್ತು ಮಾವನವರಾದ ಲೇಟ್. ಕೃಷ್ಣಪ್ಪ ರವರ ಸ್ವತ್ತಾಗಿದ್ದು, ಸ್ವತ್ತಿನ ನಂಬರ್ 4323/1, ಎಚ್–23/1, 5 ನೇ ಕ್ರಾಸ್, 7 ನೇ ಮೇನ್, ಗಾಂಧಿನಗರ, ಲಷ್ಕರ್ ಮೊಹಲ್ಲಾ, ಮೈಸೂರು ಆಗಿದ್ದು, ಸದರಿ ಸ್ವತ್ತಿನ ಕಂದಾಯವನ್ನು ಕಟ್ಟಲು ಹಾಗೂ ಖಾತೆಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಲು ಮೈಸೂರು ಮಹಾನಗರ ಪಾಲಿಕೆ ಕಛೇರಿಗೆ (ವಲಯ–7) ಹೋಗಿದ್ದ ಸಂದರ್ಭದಲ್ಲಿ ಸ್ವತ್ತಿನ ಎಲ್ಲಾ ದಾಖಲಾತಿಗಳು ಇದ್ದು ಕ್ರಯ ಪತ್ರ ಮಾತ್ರ ಕಳುವಾಗಿರುತ್ತದೆ.

ಹಾಗಾಗಿ ಯಾರಿಗಾದರೂ ಅಸಲು ಕ್ರಯ ಪತ್ರವು ಸಿಕ್ಕಿದ ಕೂಡಲೆ ನನ್ನ ಕಕ್ಷಿದಾರರಾದ ಶಕುಂತಲಾ ರವರ ಫೋನ್ ನಂಬರ್ 9611149737 ಗೆ ಹಾಗೂ ಪೊಲೀಸರಿಗೆ ತಿಳಿಸತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ:

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಗಾಂಧಿನಗರ, 7 ನೇ ಮೇನ್, 5 ನೇ ಕ್ರಾಸ್, ಮನೆ ನಂಬರ್ 4323/1, ಹೊಸ ನಂಬರ್ ಎಚ್–23/1ಕ್ಕೆ ಚಕ್ಕು ಬಂದಿ: ಪೂರ್ವಕ್ಕೆ–ವೀರಯ್ಯರವರ ಸ್ವತ್ತು, ಪಶ್ಚಿಮಕ್ಕೆ–ಗಲ್ಲಿ, ಉತ್ತರಕ್ಕೆ– ನಂಜಯ್ಯ ರವರ ಮನೆ ಮತ್ತು ದಕ್ಷಿಣಕ್ಕೆ–ಗಣೇಶ ರವರ ಮನೆ. ಇದರ ಅಳತೆ 30x15 ಅಡಿಗಳಾಗಿರುತ್ತದೆ.

ಸಹಿ/–ಅಯ್ಯೂಬ್ ಅಹ್ಮದ್ ಖಾನ್,
ವಕೀಲರು, ಖಾ ಅಸೋಸಿಯೇಟ್ಸ್, ಮೊ:
9342113452, 8806603318. ನಂ. 3159,
ಕೆ.ಟಿ.ಸ್ಟ್ರೀಟ್, ಸುನ್ನಿ ಚೌಕ್ ಸರ್ಕಲ್, ಮಂಡಿ
ಮೊಹಲ್ಲಾ, ಮೈಸೂರು

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಇಲವಾಲ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಬುಕಿಂಗ್ ಪ್ರಾರಂಭವಾಗಿದೆ
MUDA LIMITS
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ರಾಜದಾನ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
90713 86615
95133 01854

BTL VIDYAVAHINI SCHOOL AND BTL COMPOSITE PU COLLEGE
#1, Kesare, Naidunagar Main Road, Near Naidunagar bus stand, Mysore-570007.
Teachers/Lecturers wanted

Primary School
1. Mathematics-Qualification-B.Sc or any degree with proficiency in mathematics and fluency in English. B.Ed or M.Sc is an added advantage but not compulsory to apply. Freshers or Experienced Candidates can apply.

Higher Primary School
1. Social Science-Qualification BA with subject knowledge and fluency in English. B.Ed or MA is an added advantage but not compulsory to apply. M.Sc Geography graduates can also apply. Freshers or Experienced Candidates can apply.
2. Physical Education (PT)- Female Candidates only-Qualification- B.PEd/PT Teacher Training or Any degree with any Achievement in any Sports, Yoga, Gymnastics or Athletics at any level.

Pre-University College (PUC)
1. Computer Science Lecturer- Qualification-MCA/M.Sc in Computer Science or B.E/B.Tech in Computer Science can apply M.E/M.Tech or B.Ed/M.Ed is an added advantage but not compulsory to apply. Fluency in English is must.
2. English Lecturer-Qualification- MA in English or equivalent degree. B.Ed/M.Ed is an added advantage but not compulsory to apply. Fluency in English is must.

Interested Candidates are requested to submit their resumes to our college office either in person or by email to btlvidyavahini@gmail.com by 27th May 2024. Interview will be conducted after 27th May 2024 and date will be notified to shortlisted Candidates.
Office Timings: 10am to 1pm from Monday to Saturday.
(Emails will be accepted after Office timings and on Sunday as well.)
6360812404, 0821-2956203
Sri Guruprasad PU College Principal: 7259673012

POLICE PUBLIC SCHOOL, MYSORE
Mahadevapura Main Road, Jalapuri, Gayathri Puram, Mysuru - 570019. Affiliation No: 830368.
Phone: 0821-2459900. Email: ppsmysore19@gmail.com
POLICE PUBLIC SCHOOL OBTAINED CENT PERCENT RESULTS ONCE AGAIN IN THE CBSE CLASS 10 RESULTS WHICH WERE DECLARED ON 13TH MAY 2024



Shamitha S 95.8% | Yashas S 92.2% | Anam Rifa 91.2% | Saqib Khajaameen Sutar 90.4%



Rachana B Raj 90% | Samanvitha S 89.6%

49 Students recorded Distinctions and 38 Students passed in First Class. A Total of 119 Students appeared for the exam and all of them passed.

CLASS 12 TOPPERS



Monish A 87% (Science) | Samruddhi K C 86.4% (Science) | Manamohana 86% (Science) | Mahantesh R 80.6% (Commerce)

In the Class12 Exam, 21 Students appeared and all have passed. Kamran Hussain Sait secured 78.4% in the Commerce stream
The Management, Principal, Vice Principal and Staff Congratulated the Students and Staff for their Excellent Performance.

ಕೆಪಿಆರ್ ಹ್ಯೂಂಡಾಯ್
ಹುಣಸೂರು ರಸ್ತೆಯಲ್ಲಿ ಅದ್ಧೂರಿ ಉದ್ಘಾಟನೆ
22nd ಮೇ 2024
ಸೈಟ್ ಸಂಖ್ಯೆ 198/2B1, ಹಿನಕಲ್ ಗ್ರಾಮ, ಹುಣಸೂರು ರಸ್ತೆ, ಮೈಸೂರು - 570017



KPR Hyundai
: 9538879248 | 9538879294 | 8884422217 | 9606470291
HYUNDAI

ಸರಳತೆಯ ಸಾರ್ವಭೌಮ, ಜನಾನುರಾಗಿ ನಾಯಕ,
ಚೆಸ್ಕಾಂನ ಗೌರವಾನ್ವಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ಕ್ಷೇತ್ರದ
ಶಾಸಕರು ಆದ ಶ್ರೀಎ.ಬಿ.ರಮೇಶ ಬಂಡಿಸಿದ್ದೇಗೌಡ ಅವರಿಗೆ
ಜನುಮ ದಿನದ ಹಾರ್ದಿಕ ಹಾಗೂ ಸಂಭ್ರಮದ ಶುಭಾಶಯಗಳು






ಶಿವಕುಮಾರ್,
ಗುತ್ತಿಗೆದಾರರು ಹಾಗೂ ಕಾಂಗ್ರೆಸ್ ಮುಖಂಡರು,
ಹುರುಳಿ ಕ್ಯಾತನಹಳ್ಳಿ.



ಎನ್.ಪ್ರಕಾಶ್ – ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್, ಶ್ರೀರಂಗಪಟ್ಟಣ
ಬಸವರಾಜು – ಕಾಂಗ್ರೆಸ್ ಮುಖಂಡರು, ಮಹದೇವಪುರ
ಎಂ.ಸಿ.ಮೋಹನ್ ಕುಮಾರ್ – ನಿರ್ದೇಶಕರು TAPCMS ಹಾಗೂ ತಾಪಂ ಮಾಜಿ ಸದಸ್ಯ, ಮಹದೇವಪುರ
ಬಿ.ಗಿರೀಶ್ – ಅಧ್ಯಕ್ಷರು VSSN ಹಾಗೂ ಕಾಂಗ್ರೆಸ್ ಮುಖಂಡರು
ಶಿವಯ್ಯ – ನಿರ್ದೇಶಕರು, ಅಪೆಕ್ಸ್ ಬ್ಯಾಂಕ್ ಹಾಗೂ ಕಾಂಗ್ರೆಸ್ ಮುಖಂಡರು, ಅರಕೆರೆ
ಲಕ್ಷ್ಮಣ್ – ಕಾಂಗ್ರೆಸ್ ಮುಖಂಡರು, ಮೇಳಾಪುರ



ಜಗದೀಶ್ – ಮಾಜಿ ಅಧ್ಯಕ್ಷರು, ಮಹದೇವಪುರ ಗ್ರಾಮ ಪಂಚಾಯಿತಿ
ದೇಸಿಗೌಡ – ಕಾಂಗ್ರೆಸ್ ಮುಖಂಡರು, ಚಿಕ್ಕ ಅಂಕನಹಳ್ಳಿ
ಚಿಕ್ಕಣ್ಣ – ಕಾಂಗ್ರೆಸ್ ಮುಖಂಡರು, ಬೊಂತಗಹಳ್ಳಿ
ಪ್ರವೀಣ್ – ಕಾಂಗ್ರೆಸ್ ಮುಖಂಡರು, ಕೊಕ್ಕರೆಹುಂಡಿ
ಶ್ರೀನಿವಾಸ್ – ಕಾಂಗ್ರೆಸ್ ಮುಖಂಡರು, ಹುರುಳಿ ಕ್ಯಾತನಹಳ್ಳಿ
ಶಿವಮಲ್ಲು – ಕಾಂಗ್ರೆಸ್ ಮುಖಂಡರು, ಹಮ್ಮಡಿಹುಂಡಿ